Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ–19 । ಸಂಚಿಕೆ–21 । ಮೇ 19–25, 2025 । ಪುಟ 16 । ರೂ.10/–
Volume-19 | Issue-21 | May 19-25, 2025 | Pages:16 | Price: 10/-






ಚನ್ನರಾಯಪಟ್ಟಣ ಭೂಮಿ ಹೋರಾಟ: ಮುಂದೇನು?



ಕದನ ವಿರಾಮದ ಹಿಂದೆ: ಉತ್ತರ ಸಿಗದ ಪ್ರಶ್ನೆಗಳು



- ಚುನಾವಣಾ ಸುಧಾರಣೆಗಳು ಸಮಗ್ರವಾಗಿರಬೇಕು
- ಸರ್ವಾಧಿಕಾರಿ ಆಡಳಿತ ಮುಂದುವರಿಕೆಗೆ ಸುಪ್ರೀಂಕೋರ್ಟ್ ತೀರ್ಪು ಅಡ್ಡಿಯೇ



ಭಾರತೀಯ ವಿಜ್ಞಾನ ಪರಂಪರೆಯ ಹಿರಿಮೆ ಎತ್ತಿ ಹಿಡಿದ ವಿಚಾರವಾದಿ ಡಾ.ಎಸ್.ಬಾಲಚಂದ್ರರಾವ್ ಅಗಲಿಕೆ

ಲಂಡನ್ ನಗರವನ್ನು ವಶಪಡಿಸಿಕೊಂಡ ರೈತ ಬಂಡಾಯ ಬೈಬಲ್‌ನ ಅನುವಾದ ನೀಡಿದ ಸ್ಫೂರ್ತಿ

ಭಾಗ 26

ಜಿ.ಎನ್. ನಾಗರಾಜ್

ನಾನು ಬರೆಯಲು ಹೊರಟದ್ದು, ಹಿಂದಿನ ವಾರದ ಲೇಖನದಲ್ಲಿ ಹೇಳಿದಂತೆ ಲೆವೆಲರ್ಸ್ ಎಂಬ ಪ್ರಜಾಪ್ರಭುತ್ವವಾದಿಗಳು, ಜಗತ್ತಿನಲ್ಲಿ ಮೊತ್ತ ಮೊದಲು ಹಲವು ಪ್ರಜಾಪ್ರಭುತ್ವದ ಅಡಿಪಾಯವಾದ ತತ್ವಗಳನ್ನು ಪ್ರತಿಪಾದಿಸಿದವರ ಬಗ್ಗೆ.

ಆದರೆ ಲೆವಲರ್ಸ್ ಅನ್ನು ಬಿಟ್ಟು ಲೊಲ್ಲಾರ್ಡ್ಸ್ ಬಗ್ಗೆ ಬರೆಯಲು ಹಚ್ಚಿದವರು ಎಂಗೆಲ್ಸ್ ಮತ್ತು ಅವರ ಜರ್ಮನ್ ರೈತ ಯುದ್ಧ ಗ್ರಂಥ. ಲೆವೆಲರ್ಸ್ ಬಗ್ಗೆ ಲೇಖನ ಬರೆಯಲು ಆರಂಭಿಸಿ ಅರ್ಧ ಬರೆದೂ ಬಿಟ್ಟಿದ್ದೆ. ಆಗ ನನಗೆ ಲೆವೆಲರ್ಸ್‌ಗೆ ಮೂಡಿದ ಅಪೂರ್ವ ಕ್ರಾಂತಿಕಾರಕ ಚಿಂತನೆಗಳು ಮೂಡಿದ್ದು ಹೇಗೆ? ಅದರ ಮೂಲವೇನು ಎಂದು ಹುಡುಕತೊಡಗಿದೆ. ಆ ಹುಡುಕಾಟದಲ್ಲಿ ಎಂಗೆಲ್ಸ್‌ರವರ ಪುಸ್ತಕದಲ್ಲಿ ಕೆಲವು ಎಳೆಗಳು ಕಾಣಿಸಿದವು. ಅವುಗಳಲ್ಲಿ ಒಂದೊಂದನ್ನೂ ಬೆನ್ನು ಹತ್ತಿ ಹೋದಾಗ, ಅದರ ವಿವರಗಳು ರೋಮಾಂಚನ ಹುಟ್ಟಿಸಿದವು. ಅಬ್ಬಾ! ಎಂತಹ ಅದ್ಭುತ ಸಮರಧೀರ ಹೋರಾಟ ರೈತರಿಂದ.

ಈಗ ನಡೆಯುತ್ತಿರುವ ನಮ್ಮ ಚಳುವಳಿಗಳಿಗೆ ಇದು ಎಂತಹ ಸ್ಫೂರ್ತಿಯಾಗಬಹುದು ಎಂದೆನ್ನಿಸಿ ಅದನ್ನೇ ಈ ವಾರದ ಲೇಖನ ಮಾಡಿದ್ದೇನೆ. ಅದನ್ನು ಈ ಮಾಲೆಯ ಲೇಖನ ಎಂದಾದರೂ ಓದಿ. ಪ್ರತ್ಯೇಕ ಸ್ವತಂತ್ರ ಲೇಖನ ಎಂದಾದರೂ ಓದಿ. ಓದಿ ಸ್ಫೂರ್ತಿ ಪಡೆಯಿರಿ.



ಜಾನ್ ವೈಕ್ಲಿಫ್ ರವರ ತತ್ವಗಳು ಮತ್ತು ಬೈಬಲ್ ಅನುವಾದ

ಜಾನ್ ವೈಕ್ಲಿಫ್ 14 ನೇ ಶತಮಾನದಲ್ಲಿ ಜೀವಿಸಿದ್ದವರು. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಒಬ್ಬ ಧರ್ಮಶಾಸ್ತ್ರದ ಪ್ರಾಧ್ಯಾಪಕರು. ಅವರಿಗೆ ರೋಮಿನ ಪೋಪರ ಮತ್ತವರ ಬಿಷಪ್ ಮೊದಲಾದ ಧರ್ಮಾಧಿಕಾರಿಗಳ ವೈಭವದ ಜೀವನ, ಅವರ ದುರಾಸೆ, ಭ್ರಷ್ಟಾಚಾರ, ಅದಕ್ಕಾಗಿ ರೈತರ ಸುಲಿಗೆ, ಚರ್ಚ್‌ಗಳ ಕಟ್ಟಡಗಳಿಗಾಗಿ ಅಪಾರ ವೆಚ್ಚಗಳು, ಆಚರಣೆಗಳು ಇವುಗಳ ಬಗ್ಗೆ ಬಹಳ ಅಸಮಧಾನ ಉಂಟಾಯಿತು.

ಇವು ಯಾವುದಕ್ಕೂ ಬೈಬಲ್‌ನಲ್ಲಿ ಆಧಾರ ಇಲ್ಲ. ಮೂಲದ ಕ್ರಿಶ್ಚಿಯನ್ ಸಮುದಾಯಗಳು ಬಹಳ ಸರಳ ಪ್ರಾರ್ಥನಾ ವಿಧಾನವನ್ನು ರೂಪಿಸಿಕೊಂಡಿದ್ದವು. ಇವುಗಳನ್ನು ಉಲ್ಲೇಖಿಸಿ ವೈಭವ, ದುರಾಸೆಗಳನ್ನು ಎತ್ತಿ ತೋರಿಸಿ ವಿರೋಧಿಸಿದರು.

ಮುಖ್ಯವಾಗಿ ಬೈಬಲ್ ಅನ್ನು ಜನರಿಗೆ ತಿಳಿಯದ ಲ್ಯಾಟಿನ್‌ನಿಂದ ಇಂಗ್ಲಿಷಿಗೆ ಅನುವಾದಿಸಿ ಜನರ ಕೈಗಿಟ್ಟರೆ ಅವರಿಗೇ ಈ ಎಲ್ಲ ವಿಷಯಗಳ ಬಗ್ಗೆ ಅರಿವು ಮೂಡುತ್ತದೆ ಎಂದು ಭಾವಿಸಿದರು. ತಾವೇ ಕೆಲವು ಭಾಗಗಳ ಅನುವಾದ ಮಾಡಿದವರು. ಆಕ್ಸ್‌ಫರ್ಡ್ ವಿವಿಯ ತಮ್ಮ ಸಹ ಪ್ರಾಧ್ಯಾಪಕರು, ಉಪನ್ಯಾಸಕರನ್ನು ಪ್ರೇರೆಪಿಸಿದರು. ಬೈಬಲ್ ಇಂಗ್ಲಿಷಿಗೆ ಅನುವಾದವಾಯಿತು.

ವೈಕ್ಲಿಫ್ ಇದೇ ರೀತಿ ಎಲ್ಲ ಜನ ಭಾಷೆಗಳಿಗೆ ಅನುವಾದವಾಗಬೇಕೆಂದು ಪ್ರತಿಪಾದಿಸಿದರು. ಪ್ರತಿ ವ್ಯಕ್ತಿಯೂ ಯಾವುದೇ ಚರ್ಚ್‌ನ ಸಹಾಯವಿಲ್ಲದೆ ನೇರವಾಗಿ ಪರಮಾತ್ಮನೊಂದಿಗೆ ಸಂಬಂಧ ಹೊಂದಿದ್ದಾನೆ. ತಾನೇ ಸ್ವತಃ ಬೈಬಲ್ ಓದಿನ ಮೂಲಕ ಅದನ್ನು ಕಂಡುಕೊಳ್ಳಬೇಕು ಎಂದು ಪ್ರತಿಪಾದಿಸಿದರು. ಅವರ ಜೊತೆಗಾರರೂ ಅವರ ಹಲವು ಚಿಂತನೆಗಳನ್ನು ಒಪ್ಪಿ ಹರಡತೊಡಗಿದರು.

ವೈಕ್ಲಿಫ್‌ರನ್ನು ಈ ವಿಚಾರಗಳಿಗೆ ಬ್ರಿಟಿಷ್ ಆರ್ಚ್ ಬಿಷಪ್ ಚರ್ಚ್ ಕೋರ್ಟ್‌ನಲ್ಲಿ ಶಿಕ್ಷೆ ವಿಧಿಸಲೆತ್ನಿಸಿದ. ಆದರೆ ರಾಜ್ಯದ ಬಹು ದೊಡ್ಡ ಸಾಮಂತನ ನೆರವಿನಿಂದ ಪಾರಾದ. ಪೋಪ್‌ನಿಂದಲೇ ಆಜ್ಞೆ ಹೊರಟಿತು. ವೈಕ್ಲಿಫ್ ತಲೆ ಮರೆಸಿಕೊಳ್ಳ ಬೇಕಾಯಿತು.

ಲೊಲ್ಲಾರ್ಡ್ಸ್‌ಗಳು ಮತ್ತು ಇಂಗ್ಲಿಷ್ ಬೈಬಲ್ ಓದು

ತಮ್ಮದೇ ಭಾಷೆಯಲ್ಲಿ ಬೈಬಲ್ ದೊರಕಿದ್ದು, ಅದನ್ನು ಅರ್ಥೈಸಲು ಸಾಧ್ಯವಾಗಿದ್ದು ಹಲವರಲ್ಲಿ ಉತ್ಸಾಹವನ್ನು ಮೂಡಿಸಿತು. ಅದು ಇಂಗ್ಲಿಷ್ ಪ್ರಾಧ್ಯಾಪಕರು, ಪೋಪ್‌ನ ದಬ್ಬಾಳಿಕೆಯಿಂದ ಬೇಸತ್ತಿದ್ದ ಸಾಮಂತರು, ಜಹಗೀರುದಾರರುಗಳೂ ಸೇರಿದ್ದರು. ಆದರೆ ಅತ್ಯಂತ ಉತ್ಸಾಹ ಮೂಡಿಸಿದ್ದು ಸಾಮಾನ್ಯ ರೈತ, ಗೇಣಿದಾರ, ಜೀತಗಾರರ ನಡುವೆ ಕೆಲಸ ಮಾಡುತ್ತಿದ್ದ ಧಾರ್ಮಿಕ ಕಾರ್ಯಕರ್ತರಲ್ಲಿ. ಅವರಿಗೆ ಇಂಗ್ಲಿಷ್ ಬೈಬಲ್ ಹೊಸ ಅರ್ಥಗಳನ್ನು ಹೊಳೆಯಿಸಿತು. ಅವರುಗಳು ಹಳ್ಳಿ ಹಳ್ಳಿಗಳಿಗೆ, ಸಣ್ಣ ಪಟ್ಟಣಗಳಿಗೆ, ನಗರಗಳ ಬಡವರ ನಿವಾಸ ಸ್ಥಾನಗಳಿಗೆ ಸಂಚರಿಸತೊಡಗಿದರು. ಸ್ಥಾವರ ಚರ್ಚ್‌ಗಳಿಗೆ ವಿರುದ್ಧವಾಗಿ ಜಂಗಮವಾದರು. ಇಂಗ್ಲಿಷ್ ಬೈಬಲ್‌ನಲ್ಲಿಯ ವಿಚಾರಗಳನ್ನು ತಿಳಿಸತೊಡಗಿದರು. ಅದರ ಭಾಗಗಳನ್ನು ಓದುತ್ತಿದ್ದರು. ಅದನ್ನು ಪ್ರತಿ ಮಾಡಿ ಅವರಿಗೆ ಕೊಡುತ್ತಿದ್ದರು. ಬೈಬಲ್‌ನ ವಿಚಾರಗಳು ಅವುಗಳ ಮೂಲ ರೂಪದಲ್ಲಿ ಜನರ ನಡುವೆ ವ್ಯಾಪಕವಾಗಿ ಹರಡತೊಡಗಿತು.

ಅವರನ್ನು ಲೊಲ್ಲಾರ್ಡ್ಸ್ ಎಂಬ ಹೆಸರಿನಿಂದ ಕರೆಯತೊಡಗಿದರು. ಇದು ಕ್ಯಾಥೊಲಿಕ್ ಧರ್ಮಾಧಿಕಾರಿಗಳು ಬೈಬಲ್ ಪ್ರಚಾರಕರನ್ನು ಬೀದಿ ಸಂತರು, ಬಡವರ ಪೂಜಾರಿಗಳು ಎಂದು ಅವಮಾನಿಸಲು ನೀಡಿದ ಹೆಸರು. ಆದರೆ ಈ ಹೆಸರು ಸೂಕ್ತವಾದುದೂ ಆಗಿತ್ತು. ಆದ್ದರಿಂದ ಅದು ಜನಪ್ರಿಯವಾಯಿತು.

ಲೊಲ್ಲಾರ್ಡ್ಸ್‌ಗಳು ಕೇವಲ ಪ್ರಚಾರ ಮಾಡುವುದರಲ್ಲಿ ಮಾತ್ರ ತೃಪ್ತರಾಗದೆ ಧಾರ್ಮಿಕ ಸುಧಾರಣೆಗಾಗಿ ಒತ್ತಾಯ ಮಾಡತೊಡಗಿದರು. ಅವರು ಹನ್ನೆರಡು ಒತ್ತಾಯಗಳನ್ನು ರೂಪಿಸಿದರು. ಈ ಒತ್ತಾಯಗಳನ್ನು ಅಂದಿನ ರಾಜ ಸಭೆ ಸ್ವರೂಪದ ಪಾರ್ಲಿಮೆಂಟ್ ಮುಂದೆ ಮಂಡಿಸಿದರು. ಅದನ್ನು ಪಾರ್ಲಿಮೆಂಟ್ ಸಭೆ ಸೇರುವ ಸ್ಥಳ, ಚರ್ಚ್‌ನ ಮುಖ್ಯ ಸಂಸ್ಥೆಗಳ ಗೋಡೆಗಳಿಗೆ ಭಿತ್ತಿ ಚಿತ್ರ (ಪ್ಲಕಾರ್ಡ್) ಗಳನ್ನಾಗಿ ಮಾಡಿ ಅಂಟಿಸಿದರು.

ಈ ಹನ್ನೆರಡು ಒತ್ತಾಯಗಳು ಮುಂದೆ ಇಂಗ್ಲಿಷ್‌ನ ವೈಕ್ಲಿಫ್ ಅನುವಾದಗಳು ಎಂದು ಪ್ರಚಲಿತವಾದ ಪ್ರತಿಗಳಲ್ಲಿ ಮುನ್ನುಡಿ ಎಂಬಂತೆ ಸೇರಿಸಲ್ಪಟ್ಟಿತು. ಹೀಗೆ ಇಂಗ್ಲಿಷ್ ಬೈಬಲ್‌ನ ಎಲ್ಲ ಓದುಗರ ಮನದಲ್ಲಿ ಅಚ್ಚೊತ್ತಿತು. ಚರ್ಚ್‌ನ ಸುಧಾರಣೆಯ ವಿಷಯ ಸಾಮಾನ್ಯ ಜನರ ನಡುವೆ ಹರಡಿತು. ಅವರೆಲ್ಲರ ಒತ್ತಾಯವೆಂಬಂತೆ ಪ್ರಚಲಿತವಾಯಿತು.

ಮಹಾ ರೈತ ದಂಗೆ ಮತ್ತು ಲಂಡನ್ ಆಕ್ರಮಣ

ಈ ವಿಚಾರಗಳು ಜನರ ನಡುವೆ ಹರಡತೊಡಗಿದ ಸಮಯದಲ್ಲಿಯೇ ಇಂಗ್ಲೆಂಡ್‌ನಲ್ಲಿ ಒಂದು ದೊಡ್ಡ ಸಾಂಕ್ರಾಮಿಕ ರೋಗ ಜನರನ್ನು ಆಹುತಿ ತೆಗೆದುಕೊಳ್ಳಲಾರಂಭಿಸಿತು. ಅದು ಎಷ್ಟು ತೀವ್ರವಾಗಿತ್ತೆಂದರೆ ಇಂಗ್ಲೆಂಡ್‌ನ ಅರ್ಧ ಜನಸಂಖ್ಯೆ ಈ ರೋಗಕ್ಕೆ ಆಹುತಿಯಾಯಿತು. ಇದರಿಂದ ದುಡಿಯುವವರಿಲ್ಲದೆ ಕೃಷಿ, ಕುಶಲಕರ್ಮಿಗಳ ಉತ್ಪಾದನೆ ಮುಂತಾದವೆಲ್ಲ ಏರುಪೇರಾಯಿತು.

ಅದೇ ಸಮಯದಲ್ಲಿ ಫ್ರಾನ್ಸ್ ಜೊತೆ ದೀರ್ಘ ಕಾಲದ ಯುದ್ಧಕ್ಕಾಗಿ ರಾಜ ದೊಡ್ಡ ಪ್ರಮಾಣದಲ್ಲಿ ತೆರಿಗೆ ಹೇರಿದ. ಈ ತೆರಿಗೆಗಳನ್ನು ಪುಟ 4 ಕ್ಕೆ

ವ್ಯಾಟ್ ಟೈಲರ್

ದಂಗೆ ಹರಡುತ್ತಿದ್ದಾಗ ಕೆಂಟ್ ಪ್ರದೇಶದ ಕುಶಲಕರ್ಮಿ, ಹೆಂಚಿನ ಛಾವಣಿಗಳ ರಿಪೇರಿ ಮಾಡುವ ವ್ಯಾಟ್ ಟೈಲರ್‌ನ ನಾಯಕತ್ವದಲ್ಲಿ ಆ ಪ್ರದೇಶದ ಬಡಜನರೆಲ್ಲ ಸೇರಿಕೊಂಡರು. ಜಾನ್ ಬಾಲ್ ಎಂಬ ಲೊಲ್ಲಾರ್ಡ್ ಪಾದ್ರಿ ಕೂಡಾ ಅವರ ಜೊತೆ ಸೇರಿದ. ಟೈಲರ್ ಮುಂದೆ ಕೈಗೊಳ್ಳಬೇಕಾದ ಕ್ರಮಗಳನ್ನು, ಗುರಿಯನ್ನು ರೂಪಿಸುವವನಾಗಿ ಜನರನ್ನು ಮುನ್ನಡೆಸುವ ನಾಯಕನಾಗಿ ಹೊರ ಹೊಮ್ಮಿದ. ಈ ದಂಗೆಯಲ್ಲಿ ಪಾಲ್ಗೊಂಡವರು ನಡೆಸಿದ ಸಭೆಯಲ್ಲಿ ಅವನನ್ನು ತಮ್ಮ ನಾಯಕನಾಗಿ ಆಯ್ಕೆ ಮಾಡಿಕೊಂಡರು. ಟೈಲರ್‌ನನ್ನು ರಾಜ ಮಾತುಕತೆಗೆ ಕರೆದು, ರೈತ ಬಂಡಾಯಗಾರರಿಂದ ಪ್ರತ್ಯೇಕಿಸಿ ಮಾತುಕತೆ ನಡೆಯುತ್ತಿರುವಾಗ ಕ್ಯಾತೆ ತೆಗೆದು ಮೋಸದಿಂದ ಕೊಲ್ಲಲಾಯಿತು.



ಜಾನ್ ಬಾಲ್



ಜಾನ್ ಬಾಲ್, ಒಬ್ಬ ಪಾದ್ರಿ. ಜನರ ಪಾದ್ರಿ. ಯಾರ್ಕ್ ಪ್ರದೇಶದಲ್ಲಿ ಧಾರ್ಮಿಕ ಉಪದೇಶ ನೀಡಲು ಆರಂಭಿಸಿದ. ವೈಕ್ಲಿಫನಿಗಿಂತ ಮೊದಲೇ ಚರ್ಚ್ ದಬ್ಬಾಳಿಕೆಯ ವಿರುದ್ಧ ಮಾತನಾಡಲಾರಂಭಿಸಿದ್ದ. ಒಳ್ಳೆಯ ಸ್ಫೂರ್ತಿ ತುಂಬುವ, ಜೊತೆಗೆ ವೈಚಾರಿಕ ಎಚ್ಚರ ಮೂಡಿಸುವ ಭಾಷಣಕಾರ. ಅವನ ವಿಚಾರಗಳಿಗಾಗಿ ಇಂಗ್ಲೆಂಡ್‌ನ ಧಾರ್ಮಿಕ ಮುಖ್ಯಸ್ಥ ಆರ್ಚ್ ಬಿಷಪ್‌ನ ಕೋಪಕ್ಕೆ ಪಾತ್ರನಾದ. ಮತ್ತೆ ಮತ್ತೆ ಬಂಧಿತನಾದ. ಗಡಿಪಾರು ಮಾಡಲ್ಪಟ್ಟ. ಅವನ ಉಪದೇಶಗಳನ್ನು ಯಾರೂ ಕೇಳಬಾರದು ಎಂದು ಆಜ್ಞೆ ಹೊರಡಿಸಲಾಯಿತು. ಆಗ ಅವನು ಸಂಚಾರಿಯಾಗಿ ಹಲ ಹಲವು ಪಟ್ಟಣಗಳಲ್ಲಿ, ಪ್ರದೇಶಗಳಲ್ಲಿ ಜಂಗಮ ಉಪದೇಶಿಯಾದ. ಬಹಳ ಜನಪ್ರಿಯನಾದ.

ಅವನು ಈ ದಂಗೆಕೋರ ರೈತರ ಮುಂದೆ ಇಟ್ಟ ಒಂದು ಪ್ರಶ್ನೆ ಬಹಳ ಕಾಲ ಬ್ರಿಟನ್‌ನಲ್ಲಿ ಅನುರಣಿಸಿದೆ.

"ಆಡಾಮ್ ಉಳುಮೆ ಮಾಡುತ್ತಿದ್ದಾಗ, ಈವ್ ನೂಲುತ್ತಿದ್ದಾಗ ಯಾರು ರಾಜ ಮನ್ನಣೆ ಪಡೆದವರು? ಯಾರಲ್ಲ?"

ಈ ಪ್ರಶ್ನೆ ಇಂಗ್ಲಿಷ್ ಸಾಹಿತ್ಯದಲ್ಲಿ ಶೇಕ್ಸ್‌ಪಿಯರ್ ನಾಟಕದಲ್ಲಿ, ಇತರನೇಕರ ಕೃತಿಗಳಲ್ಲಿ ಪ್ರತಿಬಿಂಬಿಸಿದೆ. ಜಾನ್ ಬಾಲ್‌ನ ಕನಸು ಎಂಬ ಒಂದು ಕೃತಿಯ ಜೊತೆಗೆ ಹಲವು ಕೃತಿಗಳ ಕೇಂದ್ರವಾಗಿದೆ.

ಜಾನ್ ಬಾಲ್ ಮುಂದುವರೆದು ರೈತ ದಂಗೆಕೋರರಿಗೆ ಹೇಳುತ್ತಾನೆ

"ಆರಂಭದಿಂದಲೇ ಪ್ರಕೃತಿ ಸಹಜವಾಗಿ ಎಲ್ಲರೂ ಸಮಾನಾವಾಗಿ ಸೃಷ್ಟಿಸಲ್ಪಟ್ಟರು. ದುಷ್ಟರ ಅನ್ಯಾಯಕರ ದಬ್ಬಾಳಿಕೆಯಿಂದ ಜೀತಗಾರಿಕೆ, ಸೇವಕತನ ಹುಟ್ಟಿದ್ದು. ದೇವರಿಗೆ ಜೀತಗಾರರನ್ನು ಸೃಷ್ಟಿಸಬೇಕೆಂದಿದ್ದರೆ ಆರಂಭದಿಂದಲೇ ಯಾರು ಜೀತಗಾರ ಯಾರು ಸ್ವತಂತ್ರ ಮನುಷ್ಯ ಎಂಬುದನ್ನು ನೇಮಿಸುತ್ತಿದ್ದ. ಆದ್ದರಿಂದ ನಾನು ನಿಮ್ಮೆಲ್ಲರಿಗೆ ಹೇಳಬಯಸುತ್ತೇನೆ, ಈಗ ಸಮಯ ಬಂದಿದೆ, ದೇವರೇ ಆರಿಸಿದ ಸಮಯ. ಈ ಜೀತಗಾರಿಕೆಯ ನೊಗವನ್ನು ಕಿತ್ತೆಸೆದು ಸ್ವಾತಂತ್ರ್ಯವನ್ನು ಮರಳಿ ಪಡೆಯುವ ಸಮಯ."

ರೈತ ದಂಗೆಯಲ್ಲಿ ಇವರ ಪಾತ್ರ ಎಷ್ಟು ಮಹತ್ವದ್ದಾಗಿತ್ತು ಎಂದರೆ ನ್ಯಾಯಾಲಯದಲ್ಲಿ ಮರಣದಂಡನೆಯ ಶಿಕ್ಷೆ ವಿಧಿಸಿ ಸ್ವತಃ ರಾಜನೇ ಹಾಜರಿದ್ದು ಅವರ ತಲೆಯನ್ನು ಕತ್ತರಿಸಿ ಲಂಡನ್ ನಾಗರಿಕರಿಗೆ ಕಾಣುವಂತೆ ಇವರ ತಲೆಯನ್ನು ಪ್ರಸಿದ್ಧ ಲಂಡನ್ ಬ್ರಿಡ್ಜ್‌ನ ಮೇಲೆ ತೂಗು ಹಾಕಲಾಯಿತು. ಅವರ ಕೈ ಕಾಲುಗಳಲ್ಲಿ ಒಂದೊಂದನ್ನೂ ಪ್ರತ್ಯೇಕವಾಗಿ ಇಂಗ್ಲೆಂಡ್‌ನ ನಾಲ್ಕು ಮೂಲೆಗಳಲ್ಲಿ ಪ್ರದರ್ಶಿಸಲಾಯಿತು.

ನಾಲ್ಕು ಶತಮಾನಗಳ ಆಳುವವರ ಹಿಂಬಾಲಕರು ಅವರ ದಾಖಲೆಗಳಲ್ಲಿ, ಬರಹಗಳಲ್ಲಿ ಇವರನ್ನು ಖಳನಾಯಕರಂತೆ ಬಿಂಬಿಸಿದರು.

ಸರ್ವಾಧಿಕಾರಿ, ಏಕಪಕ್ಷೀಯ ಆಡಳಿತವನ್ನು ಮುಂದುವರಿಸಲು ಸುಪ್ರೀಂ ಕೋರ್ಟ್ ತೀರ್ಪು ಅಡ್ಡಿಯಾಗಿದೆಯೇ?

ರಾಜ್ಯಪಾಲರು ಮತ್ತು ರಾಷ್ಟ್ರಪತಿಯವರು ರಾಜ್ಯ ಶಾಸಕಾಂಗ ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ಕಾಲಮಿತಿ ನಿಗದಿಪಡಿಸಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿಗೆ ಸಂಬಂಧಿಸಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂವಿಧಾನದ 143 (1)ನೇ ವಿಧಿಯಡಿ ಸುಪ್ರೀಂ ಕೋರ್ಟ್ಗೆ ಪತ್ರ ಬರೆದು 14 ಪ್ರಶ್ನೆಗಳನ್ನು ಕೇಳಿದ್ದಾರೆ. ರಾಜ್ಯಪಾಲರ ಪಾತ್ರದ ಕುರಿತು ಸುಪ್ರೀಂ ಕೋರ್ಟ್ ನ ಆದೇಶಗಳನ್ನು ಜಾರಿಗೊಳಿಸಬೇಕಾದ ಕೇಂದ್ರ ಸರ್ಕಾರ ಇದಕ್ಕೆ ವಿರುದ್ಧವಾಗಿ ವ್ಯವಹರಿಸುತ್ತಿದೆ. ಈ ಮೂಲಕ, ತನ್ನ ಸರ್ವಾಧಿಕಾರಿ, ಏಕಪಕ್ಷೀಯ ಆಡಳಿತವನ್ನು ಮುಂದುವರಿಸುವುದು ಬಿಜೆಪಿಯ ಉದ್ದೇಶವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಸುಪ್ರೀಂ ಕೋರ್ಟ್ ಮುಂದೆ ವಕ್ಫ್ ಕಾಯ್ದೆ, ಪ್ರಾರ್ಥನಾ ಸ್ಥಳಗಳ ಕಾಯ್ದೆಯಂತಹ ಪ್ರಮುಖ ಪ್ರಕರಣಗಳಿರುವ ಸಂದರ್ಭದಲ್ಲಿ ಇದೆಲ್ಲಾ ನಡೆಯುತ್ತಿದೆ ಎಂಬುದನ್ನು ಗಮನಿಸಬೇಕು.



ರಾಜ್ಯಪಾಲರು ಮತ್ತು ರಾಷ್ಟ್ರಪತಿಯವರು ರಾಜ್ಯ ಶಾಸಕಾಂಗ ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ಕಾಲಮಿತಿ ನಿಗದಿಪಡಿಸಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಸಾಂವಿಧಾನಿಕ ಅನಿಶ್ಚಿತತೆಯ ಪರಿಸ್ಥಿತಿಗೆ ಕಾರಣವಾಗುತ್ತಿರುವ ಒಂದು ದೀರ್ಘಕಾಲದ ಸಮಸ್ಯೆಯ ಬಗ್ಗೆ ಸುಪ್ರೀಂ ಕೋರ್ಟ್ ಸ್ಪಷ್ಟವಾದ ನಿರ್ದೇಶನ ಮಾಡಿದರೆ, ಅದನ್ನು ಜಾರಿಗೆ ತರಲು ಕ್ರಮಗಳನ್ನು ತೆಗೆದುಕೊಳ್ಳಲು ಮುಂದಾಗಬೇಕು. ಆದರೆ, ನರೇಂದ್ರ ಮೋದಿ ಸರ್ಕಾರ ಇದಕ್ಕೆ ವಿರುದ್ಧವಾಗಿ ವ್ಯವಹರಿಸುತ್ತಿದೆ. ರಾಜ್ಯಪಾಲರ ಪಾತ್ರದ ಕುರಿತು ಸುಪ್ರೀಂ ಕೋರ್ಟ್ ನ ಆದೇಶಗಳನ್ನು ಜಾರಿಗೊಳಿಸುವ ಬದಲು, ಅಂತಹ ತೀರ್ಪು ನೀಡುವ ಅಧಿಕಾರ ಸುಪ್ರೀಂ ಕೋರ್ಟ್ ಗೆ ಇದೆಯೋ, ಇಲ್ಲವೋ ಎಂದು ನಿರ್ಧರಿಸಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಮೂಲಕ ಶರವೇಗದಲ್ಲಿ ಹದಿನಾಲ್ಕು ಪ್ರಶ್ನೆಗಳನ್ನು ವ್ಯವಸ್ಥೆ ಮಾಡಲಾಯಿತು. ಹೆಸರಿಗೆ ರಾಷ್ಟ್ರಪತಿಗಳೇ ಬರೆದಿರುವ ಈ ಇಡೀ ಪ್ರಕರಣ ಕೇಂದ್ರದ ಕಣ್ಗಾವಲಿನಲ್ಲಿಯೇ ನಡೆದಿದೆ. ಸಾಂವಿಧಾನಿಕವಾಗಿಯೂ, ಭಾರತದ ರಾಷ್ಟ್ರಪತಿಗಳು ಕೇವಲ ಅಲಂಕಾರಿಕ ಮುಖ್ಯಸ್ಥರಾಗಿದ್ದಾರೆ.

ಏಪ್ರಿಲ್ 8 ರಂದು ರಾಜ್ಯಪಾಲರ ವಿಷಯಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದಾಗ, ಮರುದಿನವೇ ಕೇಂದ್ರವು ಅದನ್ನು ಹೇಗೆ ಎದುರಿಸುವುದು ಎಂಬುದರ ಕುರಿತು ಚರ್ಚೆಗಳನ್ನು ಪ್ರಾರಂಭಿಸಿತು. ಅಟಾರ್ನಿ ಜನರಲ್ ಆರ್. ವೆಂಕಟರಮಣಿ, ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮತ್ತು ನ್ಯಾಯ ಸಚಿವಾಲಯದ ಪ್ರತಿನಿಧಿಗಳೊಂದಿಗೆ ವ್ಯಾಪಕ ಚರ್ಚೆಗಳು ನಡೆದವು. ಅಂತಿಮವಾಗಿ, ಮೇ ಏಳನೇ ತಾರೀಖಿನೊಳಗೆ ಸುಪ್ರೀಂ ಕೋರ್ಟ್ಗೆ ಸಲ್ಲಿಸಬೇಕಾದ ಪ್ರಶ್ನಾವಳಿಯ ಪತ್ರವನ್ನು ರಾಷ್ಟ್ರಪತಿಗಳು ಅಂತಿಮಗೊಳಿಸಿದ್ದಾರೆ.

ಆರಂಭದಲ್ಲಿ, ಈ ತೀರ್ಪಿನ ಪುನರ್ ಪರಿಶೀಲನೆ ಕೋರಬೇಕೇ ಅಥವಾ ವಿಸ್ತೃತ ಪೀಠವನ್ನು ಕೋರಬೇಕೇ ಎಂಬ ಬಗ್ಗೆ ಚರ್ಚೆ ನಡೆಯಿತು. ಸಂವಿಧಾನದ 143(1) ನೇ ವಿಧಿಯ ಅಡಿಯಲ್ಲಿ ರಾಷ್ಟ್ರಪತಿಗಳ ಹೆಸರಿನಲ್ಲಿ ಸಲಹೆ ಕೋರುವುದೇ ಅನುಕೂಲಕರ ಎಂದು ನಿರ್ಧರಿಸಲಾಯಿತು. ಏಕೆಂದರೆ ರಾಷ್ಟ್ರಪತಿಗಳು ಕೋರಿದ ಅಂಶವನ್ನು ಪರಿಶೀಲಿಸಲು ಐವರು ಸದಸ್ಯರ ಪೀಠವನ್ನು ರಚಿಸುವುದು ಪರಿಪಾಟ. ಆದರೆ, ಈ ವಿಷಯದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಬೇಕೆ ಅಥವಾ ಬೇಡವೇ ಎಂಬುದನ್ನು ಸುಪ್ರೀಂ ಕೋರ್ಟ್ ಸ್ವತಃ ನಿರ್ಧಾರಕ್ಕೆ ಬರಬಹುದು. ಉದಾಹರಣೆಗೆ, ಬಾಬರಿ ಮಸೀದಿ/ರಾಮ ಜನ್ಮಭೂಮಿ ವಿವಾದದಲ್ಲಿ ಮಸೀದಿ ಧ್ವಂಸದ ನಂತರ, ಪಿ.ವಿ.ನರಸಿಂಹ ರಾವ್ ಸರ್ಕಾರವು ಸುಪ್ರೀಂ ಕೋರ್ಟ್ನ ಅಭಿಪ್ರಾಯ ಕೇಳಿತು. ಆದರೆ, ಈ ವಿಷಯದಲ್ಲಿ ತಮಗೆ ಯಾವುದೇ ಅಭಿಪ್ರಾಯ ಹೇಳುವುದೇನಿಲ್ಲ, ರಾಜಕೀಯ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಪೀಠವು ನಿರ್ಧರಿಸಿತು.

ಹಿಂದಿನ ಉದಾಹರಣೆಗಳು

1960 ರಲ್ಲಿ, ಕೇಂದ್ರವು ಸಿ ಪಟ್ಟಿಯಲ್ಲಿರುವ ರಾಜ್ಯಗಳ ಸ್ಥಾನಮಾನದ ಬಗ್ಗೆ ಸುಪ್ರೀಂ ಕೋರ್ಟ್ ನ ಸಲಹೆ ಕೇಳಿತು. 1978 ರಲ್ಲಿ, ತುರ್ತು ಪರಿಸ್ಥಿತಿಯ ನಂತರ, ಆ ಅತ್ಯಾಚಾರ ಪ್ರಕರಣಗಳ ವಿಚಾರಣೆಗೆ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಬಹುದೇ ಎಂಬುದರ ಕುರಿತು ಅಭಿಪ್ರಾಯಗಳನ್ನು ಕೇಳಲಾಯಿತು. ಈ ಕುರಿತು ಸುಪ್ರೀಂ ಕೋರ್ಟ್ ತನ್ನ ಅಭಿಪ್ರಾಯ ಹೇಳಿದೆ ಅಥವಾ ಒಂದೆರಡು ಬಾರಿ ಅಭಿಪ್ರಾಯ ಹೇಳಲು ನಿರಾಕರಿಸುವುದು ನಡೆದಿದೆ. ಸಂವಿಧಾನದ 142ನೇ ವಿಧಿಯ ಪ್ರಕಾರ, ಸಂವಿಧಾನದ ನಿಬಂಧನೆಗಳ ಸಿಂಧುತ್ವದ ಬಗ್ಗೆ ಸುಪ್ರೀಂ ಕೋರ್ಟ್ ಮಾತ್ರ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಹೊಂದಿದೆ. ಸಂವಿಧಾನದ ಮೂಲಭೂತ ಸ್ವರೂಪದ ಕುರಿತಾದ ತೀರ್ಪಿನ ನಂತರ ಇದು ಮತ್ತಷ್ಟು ಬಲಗೊಂಡಿತು. ಅದೇ ಸಮಯದಲ್ಲಿ 143(1) ವಿಧಿಯು ಸುಪ್ರೀಂ ಕೋರ್ಟ್ ನ ಅಭಿಪ್ರಾಯವನ್ನು ಕೋರುವ ಅಧಿಕಾರವನ್ನು ರಾಷ್ಟ್ರಪತಿಗಳಿಗೆ ನೀಡುತ್ತದೆ. ಇಲ್ಲದಿದ್ದರೆ, ಪ್ರಸ್ತುತ ದ್ರೌಪದಿ ಮುರ್ಮು ಅವರು ಕಳುಹಿಸಿರುವ ಪ್ರಶ್ನೆಗಳು ಕೇವಲ ಸಾಂವಿಧಾನಿಕ ನಿಬಂಧನೆಗಳ ಅನ್ವಯಕ್ಕೆ ಮಾತ್ರವಲ್ಲದೆ ರಾಜಕೀಯ ಸಂಘರ್ಷಕ್ಕೂ ಮತ್ತು ಸಾಂವಿಧಾನಿಕ ಬಿಕ್ಕಟ್ಟಿಗೂ ಕಾರಣವಾಗುವ ಅಪಾಯವಿದೆ.

ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಆ ರಾಜ್ಯ ವಿಧಾನಸಭೆ ಅಂಗೀಕರಿಸಿದ ಹತ್ತು ಮಸೂದೆಗಳಿಗೆ ಅಂಕಿತ ಹಾಕುವಲ್ಲಿ ಅನಿರ್ದಿಷ್ಟಕಾಲ ವಿಳಂಬವನ್ನು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ. ತಮ್ಮ ಮುಂದೆ ಬಂದ ಮಸೂದೆಗಳಿಗೆ ಮೂರು ತಿಂಗಳೊಳಗೆ ಅಂಕಿತ ಹಾಕಬೇಕು ಅಥವಾ ತಿರಸ್ಕರಿಸಬೇಕು ಎಂದು ಅದು ಹೇಳಿದೆ. ಒಂದುವೇಳೆ ರಾಷ್ಟ್ರಪತಿಗಳ ಪರಿಶೀಲನೆಗೆ ಕಳುಹಿಸಿದರೂ, ಆಗಲೂ ಮೂರು ತಿಂಗಳೊಳಗೆ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಕೋರ್ಟ್ ನಿರ್ದೇಶಿಸಿದೆ.

ಇದರೊಂದಿಗೆ, ಸುಪ್ರೀಂ ಕೋರ್ಟ್ ರಾಷ್ಟ್ರಪತಿಗಳಿಗೆ ಹೇಗೆ ಆದೇಶಿಸುತ್ತದೆ ಎಂಬುದರ ಬಗ್ಗೆ ಅನೇಕರು ತಮ್ಮ ಆಕ್ಷೇಪಣೆಗಳನ್ನು ಎತ್ತಿದ್ದಾರೆ. ಇದೀಗ ರಾಷ್ಟ್ರಪತಿಗಳು ಕಳುಹಿಸಿರುವ 143(1)ರ ಉಲ್ಲೇಖವೂ ಇಂತದೇ ಪ್ರಶ್ನೆಗಳನ್ನು ಮುಂದೆ ತಂದಿದೆ. ಸಂವಿಧಾನದ 200ನೇ ವಿಧಿಯು ರಾಜ್ಯಪಾಲರ ಅಧಿಕಾರ ವ್ಯಾಪ್ತಿಯನ್ನು ವ್ಯಾಖ್ಯಾನಿಸುತ್ತದೆ. ಶಾಸಕಾಂಗವು ಅನುಮೋದಿಸಿದ ಮಸೂದೆಗಳ ಅಂಗೀಕಾರದ ಮುದ್ರೆಯ ಕುರಿತು 21 ನೇ ವಿಧಿಯು ಹೇಳುತ್ತದೆ. ಇದಕ್ಕೆ ಸಂಬಂಧಿಸಿ ಬೇರೆ ಯಾವುದೇ ವಿಧವಾದ ನಿರ್ದೇಶನಗಳು ಇಲ್ಲದಿರುವಾಗ ಮೂರು ತಿಂಗಳೊಳಗೆ ಪೂರ್ಣಗೊಳಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಗೆ ಹೇಳುತ್ತದೆ ಎಂಬುದೇ ಪ್ರಶ್ನೆಗಳ ಸಾರಾಂಶ.

ಯಾವ ನಿರ್ಧಾರ ತೆಗೆದುಕೊಳ್ಳಬೇಕು ಎಂಬುದರ ಕುರಿತು ಆದೇಶವಲ್ಲ

ವಾಸ್ತವವಾಗಿ, ಅನೇಕರು ವಾದಿಸುತ್ತಿರುವಂತೆ ಇಲ್ಲಿ ಸುಪ್ರೀಂ ಕೋರ್ಟ್, ರಾಷ್ಟ್ರಪತಿ ಅಥವಾ ರಾಜ್ಯಪಾಲರಿಗೆ ಏನು ಮಾಡಬೇಕು, ಯಾವ ರೀತಿಯಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು ಎಂಬುದರ ಕುರಿತು ಆದೇಶ ನೀಡಿರುವುದಲ್ಲ. ತಮ್ಮ ಆಯ್ಕೆಯ ನಿರ್ಧಾರ ತೆಗೆದುಕೊಳ್ಳಲು ಮೂರು ತಿಂಗಳುಗಳ ಕಾಲಾವಕಾಶ ಇರಬೇಕು ಎಂದು ಮಾತ್ರವೇ ಹೇಳುತ್ತಿದೆ. ಈ ರೀತಿ ಮಾಡುವುದರಿಂದ ಸಂವಿಧಾನದ ಆಶಯಕ್ಕೆ ಮಹತ್ವ ಬರುತ್ತದೆಯೇ ಹೊರತು, ಅದಕ್ಕೆ ವಿರುದ್ಧವಾಗಿ ಹೇಳಿದ್ದಲ್ಲ. ಈ ಗಡುವು ಕೂಡಾ ಹಿಂದೆ ಇಂದಿರಾ ಗಾಂಧಿ ಆಡಳಿತಾವಧಿಯಲ್ಲಿ ಸರ್ಕಾರಿಯಾ ಆಯೋಗದ ಮತ್ತು ವಾಜಪೇಯಿ ಆಡಳಿತಾವಧಿಯಲ್ಲಿ ಪೂಂಚ್ ಆಯೋಗದ ನೇತೃತ್ವ ವಹಿಸಿದ್ದ ಮಾಜಿ ನ್ಯಾಯಾಧೀಶರು ಹೇಳಿರುವುದೇ ಆಗಿದೆ. ಇನ್ನೂ ಹೇಳುವುದಾದರೆ, ಈ ಹಿಂದೆ ಎರಡು ಮೂರು ಸಂದರ್ಭಗಳಲ್ಲಿ ಇದ್ದ ಅತ್ಯುನ್ನತ ನ್ಯಾಯಾಲಯವು ರಾಷ್ಟ್ರಪತಿಯವರ ಕಾರ್ಯವಿಧಾನಗಳ ಕುರಿತು ನಿರ್ದೇಶನಗಳನ್ನು ನೀಡಿದೆ.

1994 ರಲ್ಲಿ, ಎಸ್.ಆರ್. ಬೊಮ್ಮಾಯಿ ಪ್ರಕರಣದಲ್ಲಿ, ರಾಜ್ಯ ಸರ್ಕಾರಗಳ ವಿಸರ್ಜನೆ ಮತ್ತು ರಾಷ್ಟ್ರಪತಿ ಆಳ್ವಿಕೆ ಹೇರಿಕೆಗೆ ಸಂಬಂಧಿಸಿದಂತೆ ಅಲ್ಲಿಯವರೆಗೆ ನಡೆಯುತ್ತಿದ್ದ ಏಕಪಕ್ಷೀಯ ಪ್ರವೃತ್ತಿಗಳಿಗೆ ಸುಪ್ರೀಂ ಕೋರ್ಟ್ ಅಂತ್ಯ ಹಾಡಿತು. ಮರಣದಂಡನೆ ಶಿಕ್ಷೆಗೊಳಗಾದ ಕೈದಿಗಳ ಕ್ಷಮಾದಾನ ಅರ್ಜಿಗಳ ಕುರಿತು ನಿರ್ದಾರ ತೆಗೆದುಕೊಳ್ಳಲು ಕೂಡಾ ನಿಗದಿತ ಗಡುವನ್ನು ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ. ಆ ತೀರ್ಪಿನ ನಂತರ ಅಂದಿನ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು ಶೀಘ್ರವೇ ನಿರ್ಧಾರಗಳನ್ನು ತೆಗೆದುಕೊಂಡಿದ್ದನ್ನು ನಾವು ನೋಡಿದ್ದೇವೆ. ಹಿಂದೆಂದೂ ಇಲ್ಲದ ಆಕ್ಷೇಪಣೆ ಈಗಲೇ ಏಕೆ ಬಂತು?

ಈ ಪತ್ರವನ್ನು ಕಳುಹಿಸುವ ಮೊದಲು, ಉಪಾಧ್ಯಕ್ಷ ಜಗದೀಪ್ ಧನಕರ್ ಅವರು ನ್ಯಾಯಾಲಯದ ಮೇಲೆ ವಾಗ್ದಾಳಿ ನಡೆಸಿದರು. ಅವರ ಮಾತುಗಳು ಕೇಂದ್ರ ಸರ್ಕಾರದ ನಿಲುವಿನ ಪ್ರತಿಧ್ವನಿ ಎಂಬುದು ಈಗ ಸ್ಪಷ್ಟವಾಗುತ್ತಿದೆ. ಮೋದಿ ಆಡಳಿತದ ಅವಧಿಯಲ್ಲಿ, ಹಲವು ರಾಜ್ಯಗಳಲ್ಲಿ ನೇಮಕಗೊಂಡ ರಾಜ್ಯಪಾಲರು ಉತ್ಸಾಹದಿಂದ ನೇರ ರಾಜಕೀಯ ಪಾತ್ರವನ್ನು ವಹಿಸುತ್ತ, ಬಿಜೆಪಿಯೇತರ ಸರ್ಕಾರಗಳಿಗೆ ಬೆದರಿಕೆ ಹಾಕುತ್ತಿದ್ದಾರೆ. ಕೇರಳದಲ್ಲಿ ಆರಿಫ್ ಮೊಹಮ್ಮದ್ ಖಾನ್, ತಮಿಳುನಾಡಿನಲ್ಲಿ ಆರ್. ಎನ್.ರವಿ, ತೆಲಂಗಾಣದಲ್ಲಿ ತಮಿಳಿಸೈ ಸೌಂದರರಾಜನ್, ಬಂಗಾಳದಲ್ಲಿ ಇದೇ ಜಗದೀಪ್ ಧನಕರ್ ಅವರಂತಹ ರಾಜ್ಯಪಾಲರು ಕೇಂದ್ರದ ಏಜೆಂಟ್ ಗಳಾಗಿ ಕಾರ್ಯನಿರ್ವಹಿಸಿದರು. ಎಲ್ಲೆಡೆ ಲೆಕ್ಕವಿಲ್ಲದಷ್ಟು ಮಸೂದೆಗಳು ಚಲನರಹಿತವಾಗಿ ಬಿದ್ದಿವೆ. ಕಾಂಗ್ರೆಸ್ ಆಡಳಿತಾವಧಿಯಲ್ಲಿ ರಾಜ್ಯಪಾಲರ ದುರುಪಯೋಗ ಮತ್ತು ಸರ್ಕಾರಗಳನ್ನು ವಜಾಗೊಳಿಸುವುದು ನಡೆದಿದ್ದರೂ, ಮೋದಿ ಆಡಳಿತದಲ್ಲಿ ಅದು ಒಂದು ರೀತಿಯಲ್ಲಿ ಪರಾಕಾಷ್ಠೆಯನ್ನು ತಲುಪಿದೆ.

ಕೇಂದ್ರೀಕೃತ ವ್ಯವಸ್ಥೆಯನ್ನು ಜಾರಿಗೆ ತರುವ ಪ್ರಯತ್ನ

ಈ ಅಂತ್ಯವಿಲ್ಲದ ಸಂಘರ್ಷಕ್ಕೆ ಸುಪ್ರೀಂ ಕೋರ್ಟ್ ನ ನಿರ್ದೇಶನ ಅಂತ್ಯ ಹಾಡುತ್ತದೆ ಎಂದು ಎಲ್ಲರೂ ನಿರೀಕ್ಷಿಸಿದ್ದರು, ಆದರೆ ಕೇಂದ್ರವು ಅದನ್ನು ತಡೆಯಲು ರಾಷ್ಟ್ರಪತಿ ಸ್ಥಾನವನ್ನು ಬಳಸಿಕೊಳ್ಳುತ್ತಿದೆ. ಈ ಮೂಲಕ, ತನ್ನ ಸರ್ವಾಧಿಕಾರಿ, ಏಕಪಕ್ಷೀಯ ಆಡಳಿತವನ್ನು ಮುಂದುವರಿಸುವುದು ಬಿಜೆಪಿಯ ಉದ್ದೇಶವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಫೆಡರಲಿಸಂ ತತ್ವವು ಭಾರತದ ಸಂವಿಧಾನದ ಮೂಲಭೂತ ಲಕ್ಷಣಗಳಲ್ಲಿ ಒಂದಾಗಿದ್ದರೂ, ಪ್ರಜೆಗಳು ಆಯ್ಕೆಮಾಡಿದ ಸರ್ಕಾರಗಳನ್ನು ಶಾಸಕಾಂಗ ಸಭೆಗಳ ನಿರ್ಧಾರಗಳನ್ನು ಗೌರವಿಸುವ ಸಾಂವಿಧಾನಿಕ ಪ್ರಜಾಪ್ರಭುತ್ವಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿ ಕೇಂದ್ರೀಕೃತ ವ್ಯವಸ್ಥೆಯನ್ನು ಜಾರಿಗೆ ತರಲು ಒಂದು ರಾಷ್ಟ್ರ, ಒಂದು ಚುನಾವಣೆ, ಒಂದು ಪಕ್ಷ, ಒಬ್ಬ ನಾಯಕ, ಒಂದು ಧರ್ಮ ಎನ್ನುವ ವಿಪರೀತ ಪರಿಸ್ಥಿತಿಗೆ ಇದು ಇತ್ತೀಚಿನ ಉದಾಹರಣೆಯಾಗಿದೆ.

ರಾಜಕೀಯವನ್ನು ಮೀರಿ, ಸಂವಿಧಾನದ ಅತ್ಯುನ್ನತ ಸ್ಥಾನವೆಂದು ಹೇಳಿಕೊಳ್ಳುವ ರಾಷ್ಟ್ರಪತಿ ಸ್ಥಾನವನ್ನು ಸಂವಿಧಾನದ ಮೇಲೆ ದಾಳಿ ನಡೆಸಲು ಬಳಸುವುದು ಮೋದಿಯವರ ತಂತ್ರವಾಗಿದೆ. ಉದ್ದೇಶಪೂರ್ವಕವಾಗಿ ಇದನ್ನು ಸುಪ್ರೀಂ ಕೋರ್ಟ್ನ 'ಗಡಿ ಉಲ್ಲಂಘನೆ' ಎಂದು ಬಿಂಬಿಸುವುದು ಸತ್ಯಗಳನ್ನು ತಿರುಚಿದಂತಾಗುತ್ತದೆ. ಹಲವಾರು ಅಧ್ಯಯನಗಳು, ವರದಿಗಳು ಮತ್ತು ನಿಯಮಗಳನ್ನು ಉಲ್ಲೇಖಿಸಿಯೇ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಆ ತೀರ್ಪಿನಲ್ಲಿಯೇ ಅದರ ಅಭಿಪ್ರಾಯವೂ ಇದೆ.

ತಾನು ದೇಶದ ಬೌದ್ಧ ಹಿನ್ನಲೆಯ ಮೊದಲ ನ್ಯಾಯಾದೀಶ...

ಈ ವಿಷಯದಲ್ಲಿ ಅಂತಿಮ ನಿರ್ಧಾರ ಹೇಗಿರುತ್ತದೆ ಎಂಬ ಅಂಶವನ್ನು ಬದಿಗಿಟ್ಟು, ಪ್ರಸ್ತುತ ಸಂದರ್ಭವನ್ನು ಗಣನೆಗೆ ತೆಗೆದುಕೊಂಡರೆ, ಹೆಚ್ಚು ಗಂಭೀರವಾದ ರಾಜಕೀಯ ಸಂಕೇತಗಳು ಹೊರಹೊಮ್ಮುತ್ತಿವೆ. ಮೇ 14 ರಂದು ಹೊಸ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಆಗಿ ನ್ಯಾಯಮೂರ್ತಿ ಬಿ.ಆರ್. ಪುಟ 4 ಕ್ಕೆ

ಲಂಡನ್ ನಗರವನ್ನು ವಶಪಡಿಸಿಕೊಂಡ ರೈತ ಬಂಡಾಯ.......

ಪುಟ 2 ರಿಂದ

ಕೊಡಲಾರದೆ ರೈತರು ಏಗತೊಡಗಿದರು.

ರೈತರು, ಗೇಣಿದಾರರು, ಜೀತಗಾರರು ಈ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿರುವಾಗ ತಮ್ಮ ಸ್ವಂತ ಭಾಷೆಯಲ್ಲಿ ಬೈಬಲ್‌ನ ಓದು, ಚರ್ಚ್‌ನ ಸುಲಿಗೆ, ದಬ್ಬಾಳಿಕೆಯ ವಿರುದ್ಧ ಸುಧಾರಣೆಯ ವಿಚಾರಗಳು ಜನರ ನಡುವೆ ಹರಡತೊಡಗಿದವು. ಈ ಎಲ್ಲ ಹಿನ್ನೆಲೆಯಲ್ಲಿ ಜೀತಗಾರರು, ಗೇಣಿದಾರರು ಜಹಗೀರುದಾರರಿಗೆ ಬಿಟ್ಟಿ ಸೇವೆಗಳನ್ನು ಸಲ್ಲಿಸಬೇಕಾಗಿಲ್ಲ, ಅವರು ವಿಧಿಸುವ ದಂಡ, ಶುಲ್ಕಗಳನ್ನು ತೆರಬೇಕಾಗಿಲ್ಲ ಎಂದು ವಾದಿಸಿದರು. ಜಹಗೀರುದಾರರ ಜಮೀನುಗಳಲ್ಲಿ ಕೆಲಸ ಮಾಡಲು ನಿರಾಕರಿಸಿದರು. ಇದು ವ್ಯಾಪಕವಾಗಿ ಹಬ್ಬತೊಡಗಿತು.

ರಾಜ ಹೆಚ್ಚಿಸಿದ ಕಂದಾಯವನ್ನು ನೀಡಲು ರೈತರು ನಿರಾಕರಿಸಿದರು. ಜನರಲ್ಲಿ ಹರಡಿದ್ದ ಅಸಮಧಾನದ ಸಂದರ್ಭದಲ್ಲಿ ಜೀತಗಾರರು, ರೈತರ ಮೇಲೆ ಕೇಸು ಹಾಕಿ ಅವರ ವಿರುದ್ಧ ತೀರ್ಪು ಕೊಡಲು ಗ್ರಾಮೀಣ ಭೂಮಾಲಕರಿಗೆ ಭಯವಾಯಿತು. ಇಂತಹ ಹುದ್ದೆಗಳನ್ನು ವಹಿಸಿಕೊಳ್ಳುವುದರಿಂದ ಗ್ರಾಮೀಣ ಮೇಲ್ವರ್ಗ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು.

ಹೀಗೆ ಜನರ ಅತೃಪ್ತಿ, ಸಿಟ್ಟು ಕ್ರಮ ಕ್ರಮವಾಗಿ ಗರಿಗಟ್ಟಿಕೊಳ್ಳತೊಡಗಿತು. ರಾಜನೂ ಅತೃಪ್ತಿಯ ಅಭಿವ್ಯಕ್ತಿಯ ಹಾಗೂ ಧಾರ್ಮಿಕ ಸುಧಾರಣೆಯ ಮಾತುಗಳ ವಿರುದ್ಧ ದೇಶದ್ರೋಹ, ರಾಜದ್ರೋಹದ ಕಾನೂನುಗಳನ್ನು ಬಲಪಡಿಸತೊಡಗಿದ.

ರೈತ ದಂಗೆ ಆರಂಭವಾಯಿತು

ಹೀಗೆ ರೈತರು, ಗೇಣಿದಾರ–ಜೀತಗಾರರು ಕುದಿಯುತ್ತಿದಾಗ ರಾಜನ ಅಧಿಕಾರಿಯೊಬ್ಬ ಯುದ್ಧದ ತೆರಿಗೆಯನ್ನು ವಸೂಲಿ ಮಾಡಲು ಬಂದ. ವಾಗ್ವಾದಗಳ ನಂತರ ಅಧಿಕಾರಿ ರೈತನೊಬ್ಬನ ಮಗಳನ್ನು ಬೆತ್ತಲೆ ಮಾಡಿ ಅವಳು ಮೈ ನೆರೆದಿದ್ದಾಳೊ ಇಲ್ಲವೋ ನೋಡಬಯಸಿದ. ಏಕೆಂದರೆ ಮೈ ನೆರೆದ ಬಾಲಕಿಯರೂ ತೆರಿಗೆ ನೀಡಬೇಕಾಗಿತ್ತು. ಆಗ ಸಿಡ್ಡಿಗೆದ್ದ ಅವಳ ತಂದೆ, ಒಬ್ಬ ಕುಶಲ ಕರ್ಮಿ ತನ್ನ ಕೈಗೊಡಲಿಯಿಂದ ಅಧಿಕಾರಿಯ ತಲೆಗೆ ಬೀಸಿದ. ಅವನ ಜೊತೆಗೆ ಉಳಿದ ರೈತರೂ ಈ ರೀತಿಯ ದಬ್ಬಾಳಿಕೆಯನ್ನು ಹರಿಬಿಟ್ಟಾಗ ತಿರುಗಿ ಬಿದ್ದರು. ದಂಗೆ ಎದ್ದರು.

ದಂಗೆ ಎದ್ದ ರೈತರು ಸ್ಥಳೀಯ ಸೆರೆಮನೆಗಳಲ್ಲಿ ತೆರಿಗೆ ಪಾವತಿ ಮತ್ತು ಇಂತಹುದೇ ಕಾರಣಗಳಿಗೆ ಬಂಧಿತರಾಗಿದ್ದವರನ್ನು ಬಿಡಿಸಿದರು. ಕೋರ್ಟ್‌ಗಳಲ್ಲಿ ತಮ್ಮ ವಿರುದ್ಧ ಪೇರಿಸಲಾಗಿದ್ದ ದಾಖಲೆಗಳನ್ನು ಸುಟ್ಟರು.

ಈಗಾಗಲೇ ಕೊತ ಕೊತ ಕುದಿಯುತ್ತಿದ್ದ ಸಾಮಾಜಿಕ ಪರಿಸ್ಥಿತಿಯಲ್ಲಿ ಈ ದಂಗೆ ಬಹು ಬೇಗ ಇಂಗ್ಲೆಂಡ್‌ನ ದಕ್ಷಿಣ–ಪೂರ್ವ ದಿಕ್ಕಿನ ಉದ್ದಗಲಕ್ಕೂ ಹಬ್ಬಿತು. ಸ್ವತಂತ್ರ ರೈತರು, ಗೇಣೀದಾರರು, ಜೀತಗಾರರು, ಕೂಲಿಕಾರರು, ಗ್ರಾಮೀಣ ಕುಶಲಕರ್ಮಿಗಳು, ಗ್ರಾಮ ಮಟ್ಟದ ಅಧಿಕಾರಿಗಳು, ಸಣ್ಣ ಭೂಮಾಲಿಕರುಗಳೂ ಈ ದಂಗೆಯ ಭಾಗವಾದರು.

ಟೈಲರ್ ಮತ್ತು ಬಾಲ್ ಇಬ್ಬರೂ ಜೊತೆಗೂಡಿ ದಂಗೆಕೋರ ಬಡಜನರನ್ನು ಲಂಡನ್‌ನತ್ತ ಮುನ್ನಡೆಸಿದರು.

ಈ ಬಂಡಾಯಗಾರರ ಮುಖ್ಯ ಒತ್ತಾಯಗಳು ಹೀಗಿದ್ದವು:

* ತೆರಿಗೆಯನ್ನು ಕಡಿಮೆ ಮಾಡಬೇಕು,
* ಜೀತಗಾರಿಕೆ– ಗೇಣಿದಾರಿಕೆಯನ್ನು ಕಿತ್ತೆಸೆಯಬೇಕು.
* ರಾಜನ ಉನ್ನತ ಅಧಿಕಾರಿಗಳನ್ನು ವಜಾಗೊಳಿಸಬೇಕು
* ತಮಗೆ ದೊಡ್ಡ ಅನ್ಯಾಯ ಎಸಗುತ್ತಿರುವ ಕೋರ್ಟ್‌ಗಳನ್ನು ತೆಗೆದುಹಾಕಬೇಕು. (ಈ ಕೋರ್ಟ್‌ಗಳು ನಾವು ಇಂದು ಕಾಣುವ ನ್ಯಾಯಾಂಗವಲ್ಲ. ರಾಜ ನೇಮಿಸಿದ ಅಧಿಕಾರಿಗಳ, ಧಾರ್ಮಿಕ ಅಧಿಕಾರಿಗಳ ಕೋರ್ಟ್)

ಅದಕ್ಕೆ ಪಾದ್ರಿ ಜಾನ್ ಬಾಲ್‌ನ ವೈಚಾರಿಕತೆಯ ಪ್ರೇರಣೆಯಿಂದ ಬಹು ದೊಡ್ಡ ಸಾಮಾಜಿಕ, ರಾಜಕೀಯ, ಧಾರ್ಮಿಕ ಬದಲಾವಣೆಗಾಗಿ ಒತ್ತಾಯಿಸಿದರು. ನಾವು ರಾಜ ಮತ್ತು ಪಾರ್ಲಿಮೆಂಟಿನ ಕಾಮನ್ಸ್ ಸಭೆ (ಲಾರ್ಡ್ಸ್ ಎಂಬ ಸಾಮಂತರ, ಮಹಾ ಜಹಗೀರುದಾರರ ಸಭೆಯನ್ನು ಹೊರತುಪಡಿಸಿ) ಮತ್ತು ರೈತಾಪಿ ಜನರ ನಡುವೆ ಬೇರಾರೂ ಇರಬಾರದು. ದೇವರು ಮತ್ತು ಜನರ ನಡುವೆ, ರಾಜ ಮತ್ತು ಜನರ ನಡುವೆ ಇರುವುದೆಲ್ಲ ಇಲ್ಲವಾಗಬೇಕು.

ಇದು ಅಂದಿಗೆ ಯಾರೂ ಕಲ್ಪಿಸಿಕೊಳ್ಳಲಾಗದ ವೈಚಾರಿಕ ಕ್ರಾಂತಿ

ರೈತ ಬಂಡಯಗಾರರು ಲಂಡನ್‌ನತ್ತ ನಡೆದಾಗ ದಾರಿಯಲ್ಲಿ ರಾಜ ತನ್ನ ಪ್ರತಿನಿಧಿಗಳನ್ನು ಕಳಿಸಿದ. ಅವರ ಓಲೈಕೆಗೆ ಒಪ್ಪದೆ ಲಂಡನ್‌ನತ್ತ ನಡೆದರು. ಲಂಡನ್ ಪ್ರವೇಶಿಸಿದರು. ಆಗ ರಾಜನ ಸೈನ್ಯ ಉತ್ತರದಲ್ಲಿ ಯುದ್ಧದಲ್ಲಿ ಪಾಲ್ಗೊಂಡಿತ್ತು. ಆದ್ದರಿಂದ ಬಂಡಯಗಾರರಿಗೆ ಪ್ರವೇಶ ಸುಲಭವಾಯಿತು. ಇವರ ಆಗಮನವನ್ನು ಕಾಯುತ್ತಿದ್ದ ಲಂಡನ್‌ನ ಬಡಜನರು, ಕುಶಲ ಕರ್ಮಿಗಳು ದೊಡ್ಡ ಪ್ರಮಾಣದಲ್ಲಿ ರೈತ ಬಂಡಾಯಗಾರರನ್ನು ಸೇರಿಕೊಂಡರು. ಲಂಡನ್‌ನ ಜೈಲುಗಳಲ್ಲಿ ಬಂಧಿತರಾದವರನ್ನು ಬಿಡುಗಡೆ ಮಾಡಿದರು. ಕಾನೂನು ಪುಸ್ತಕಗಳನ್ನು ಸುಟ್ಟರು, ಎದುರು ಬಿದ್ದ ಅರಮನೆಯ ಅಧಿಕಾರಿಗಳನ್ನು ಕೊಂದರು. ಅದರಲ್ಲಿ ರಾಜನ ಉನ್ನತ ಮಂತ್ರಿಮಾನ್ಯರುಗಳೂ ಈ ಸಿಟ್ಟಿಗೆ ಬಲಿಯಾದರು.

ಈ ದಂಗೆ ನಡೆಯುತ್ತಿರುವಾಗ ರಾಜ ದಂಗೆಯ ಕೆಲ ನಾಯಕರನ್ನು ಭೇಟಿ ಮಾಡಿ ಅವರ ಒತ್ತಾಯಗಳನ್ನೆಲ್ಲ ಮಾನ್ಯ ಮಾಡುತ್ತೇನೆಂದು ಭರವಸೆ ನೀಡಿದ. ನಾಯಕನಾದ ಟೈಲರ್ ಮತ್ತು ಕೆಲ ನಾಯಕರನ್ನು ಮಾತುಕತೆಗೆ ಆಹ್ವಾನಿಸಿದ. ಲಂಡನ್‌ನ ಮೇಯರ್ ಒಂದು ತುರ್ತು ಅರೆ ಸೈನಿಕ ದಳವನ್ನು ಒಟ್ಟು ಮಾಡುವವರೆಗೂ ಬಹಳ ಸಾವಧಾನದಿಂದ ಮಾತನಾಡುತ್ತಾ ವಿಳಂಬ ಮಾಡಿದ. ನಂತರ ಟೈಲರ್ ಜೊತೆ ಕ್ಯಾತೆ ತೆಗೆದು ಟೈಲರ್‌ನನ್ನು, ಅಲ್ಲಿದ್ದ ಇತರ ನಾಯಕರನ್ನು ಕೊಂದು ಹಾಕಿದ.

ಹೀಗೆ ರೈತ ಬಂಡಾಯವನ್ನು ಚೆಲ್ಲಾಪಿಲ್ಲಿ ಮಾಡಲಾಯಿತು. 1500 ಕ್ಕಿಂತ ಹೆಚ್ಚು ಬಂಡಾಯಗಾರರನ್ನು ವಧೆ ಮಾಡಲಾಯಿತು.

ಆದರೆ ಇಲ್ಲಿಗೆ ಬಂಡಾಯ ಕೊನೆಯಾಗಲಿಲ್ಲ. ದೇಶದ ಹಲವೆಡೆ ಬಂಡಾಯಗಳು ಮುಂದುವರೆದವು. ಆದರೆ ಸೈನ್ಯವನ್ನು ಕೂಡಿಸಿಕೊಂಡಿದ್ದ ರಾಜ ಪ್ರಭುತ್ವ ಅವುಗಳನ್ನೆಲ್ಲ ಅಡಗಿಸಿತು. ಆದರೂ ಮುಂದೆ ಹಲವು ವರ್ಷಗಳ ಕಾಲ ಅಲ್ಲಲ್ಲಿ ಬಂಡಾಯ ಏಳುತ್ತಿತ್ತು.

ರೈತ ಬಂಡಾಯದ ಯಶಸ್ಸು

ಈ ದಂಗೆಯ ನಂತರ ತೆರಿಗೆಯನ್ನು ಕಡಿಮೆ ಮಾಡಲಿಲ್ಲ ಆದರೆ ವಸೂಲಿ ತಗ್ಗಿತು. ಯುದ್ಧಗಳು ಮುಂದುವರೆದರೂ ಹೆಚ್ಚು ತೆರಿಗೆ ಹೇರಲಾರದಂತಾಯಿತು. ಅದ್ದರಿಂದ ಯುದ್ಧ ಮಾಡುತ್ತಿದ್ದ ದೇಶ ಫ್ರಾನ್ಸ್ ಜೊತೆಗೆ ಶಾಂತಿ ಒಪ್ಪಂದ ಮಾಡಿಕೊಳ್ಳುವುದು ಅನಿವಾರ್ಯವಾಯಿತು. ರಾಜ ತನ್ನ ರಾಜ ಮಂಡಲಿಯ ಸದಸ್ಯರನ್ನು ಬದಲಾಯಿಸಬೇಕಾಯಿತು.

ಜೀತಗಾರಿಕೆ–ಗೇಣಿದಾರಿಕೆ ಪದ್ಧತಿ ಮುಂದುವರೆಯುತ್ತದೆ, ಎಲ್ಲರೂ ತಂತಮ್ಮ ಹಳ್ಳಿಗಳಿಗೆ ಮರಳಿ ತಮ್ಮ ಹಿಂದಿನ ಜಹಗೀರುದಾರ ಧಣಿಗಳ ಸೇವೆಯಲ್ಲಿ ತೊಡಗಬೇಕೆಂದು ಆಜ್ಞೆ ಮಾಡಿದ. ಈ ಧಣಿಗಳಲ್ಲಿ ಕೆಲವರು ತಮ್ಮ ಹಿಂದಿನ ಜೀತಗಾರರ ಜೊತೆ ಕ್ರೂರವಾಗಿ ನಡೆದುಕೊಂಡರೂ ಬಹಳಷ್ಟು ಜಹಗೀರುದಾರರು ಹೆದರಿದರು. ಹಲವರು ಹಣ ಪಡೆದು ಜೀತಗಾರರನ್ನು ಸೇವೆಯಿಂದ ಮುಕ್ತ ಮಾಡಿದರು. ಅದರ ಪರಿಣಾಮ ಜೀತಗಾರಿಕೆ, ಗೇಣಿದಾರಿಕೆ ತಗ್ಗಿತು. ಬಹಳಷ್ಟು ರೈತರು ಸ್ವತಂತ್ರ ರೈತರಾದರು. ಧಣಿಗಳು ಜೀತಗಾರಿಕೆ–ಗೇಣಿದಾರಿಕೆಗಿಂತ ಜಮೀನುಗಳನ್ನು ಹೊಸಬರಿಗೆ ಗುತ್ತಿಗೆ ಕೊಡುವುದು ಕ್ಷೇಮವೆಂದು ಭಾವಿಸಿದರು. ಇದು ಹೊಸ ರೀತಿಯ ಭೂ ಸಂಬಂಧಗಳಿಗೆ ನಾಂದಿ ಹಾಡಿತು. ಬಂಡವಾಳಶಾಹಿ ಕೃಷಿಯತ್ತ ದೂಡಿತು.

ಹೀಗೆ ರೈತ ಬಂಡಾಯಗಾರರ ದಿಟ್ಟತನ, ಅಪಾರ ಬಲಿದಾನ ಇಂಗ್ಲೆಂಡಿನ ಉತ್ಪಾದನಾ ಸಂಬಂಧಗಳಲ್ಲಿ, ಸಾಮಾಜಿಕ, ರಾಜಕೀಯ ಪರಿಸ್ಥಿತಿಯಲ್ಲಿ ಗಣನೀಯ ಬದಲಾವಣೆಗಳಿಗೆ ಕಾರಣವಾಯಿತು.

ಆದರೆ ಈ ಬಂಡಾಯದ ನಂತರ ನಾಲ್ಕು ಶತಮಾನಗಳ ಕಾಲ ಈ ಬಂಡಾಯ ಮತ್ತು ಅದರ ನಾಯಕರನ್ನು ಖಳರು, ದ್ರೋಹಿಗಳು ಎಂದೇ ಚಿತ್ರಿಸಲಾಯಿತು. ನಂತರ ಹದಿನೆಂಟನೆಯ ಶತಮಾನದಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆ ಮತ್ತು ಪಾಳೆಯಗಾರಿ ಸಂಬಂಧಗಳು ಕುಸಿಯುತ್ತಿದ್ದ ಕಾಲದಲ್ಲಿ ಈ ಬಂಡಾಯಕ್ಕೆ, ಅದರ ಪಾತ್ರದಾರಿಗಳಿಗೆ ಮನ್ನಣೆ ದೊರಕಲಾರಂಭಿಸಿತು. ನಂತರ ಸಮಾಜವಾದಿ, ಕಮ್ಯುನಿಸ್ಟ್ ಚಿಂತನೆ ಬೆಳೆದ ನಂತರ ಜನತೆಯ ದೃಷ್ಟಿಕೋನದಿಂದ ಹೊಸ ಆಕರಗಳನ್ನು ಹುಡುಕಾಡಿ ಸಂಶೋಧನೆಗಳು ನಡೆದು ಈ ಬಂಡಾಯಕ್ಕೆ ನ್ಯಾಯ ದೊರಕಿತು.

ಇತ್ತೀಚೆಗೆ ಮತ್ತೆ ಈ ತ್ಯಾಗ ಬಲಿದಾನಗಳ ಮೇಲೆ ಕಪ್ಪು ಮಸಿ ಬಳೆಯುವ ಪ್ರಯತ್ನಗಳೂ ನಡೆಯುತ್ತಿವೆ ಎಂಬುದು ಗಮನಾರ್ಹ.

ಸರ್ವಾಧಿಕಾರಿ, ಏಕಪಕ್ಷೀಯ ಆಡಳಿತವನ್ನು.......

ಪುಟ 3 ರಿಂದ

ಗವಾಯಿ (ಭೂಷಣ್ ರಾಮಕೃಷ್ಣ ಗವಾಯಿ) ಅವರು ಪ್ರಮಾಣ ವಚನ ಸ್ವೀಕರಿಸಿದರು. ನವೆಂಬರ್ 23 ರವರೆಗೆ ಕೇವಲ ಆರು ತಿಂಗಳು ಕಾಲ ಅವರು ಅಧಿಕಾರದಲ್ಲಿ ಇರುತ್ತಾರೆ. ಹಿಂದೆ, ಅವರು 'ನ್ಯೂಸ್ ಕ್ಲಿಕ್' ಪ್ರಕರಣಗಳು, ದೆಹಲಿಯ ಮಾಜಿ ಸಚಿವ ಸಿಸೋಡಿಯಾ, ತೀಸ್ತಾ ಸೆಟಲ್ವಾಡ್ ಮತ್ತು ಇತರ ಪ್ರಕರಣಗಳಲ್ಲಿ ಮೂಲಭೂತ ಹಕ್ಕುಗಳ ಕುರಿತು ಅನುಕೂಲಕರ ತೀರ್ಪುಗಳನ್ನು ನೀಡಿದ್ದಾರೆ. ಚುನಾವಣಾ ಬಾಂಡ್ ಗಳ ರದ್ದತಿಯ ತೀರ್ಪಿನಲ್ಲಿಯೂ ಭಾಗಿಯಾಗಿದ್ದರು. ಮಾನನಷ್ಟ ಪ್ರಕರಣದಲ್ಲಿ ರಾಹುಲ್ ಗಾಂಧಿ ಅವರಿಗೆ ರಿಲೀಫ್ ನೀಡಿದ್ದಾರೆ.

ಒಟ್ಟಾರೆಯಾಗಿ, ಸಿಜೆಐ ಗವಾಯಿ ಅವರು ಸಾಮಾಜಿಕ ನ್ಯಾಯ ಮತ್ತು ಮೂಲಭೂತ ಹಕ್ಕುಗಳ ಪರವಾಗಿ ಅನೇಕ ತೀರ್ಪುಗಳನ್ನು ನೀಡಿದ್ದಾರೆ ಮತ್ತು ಅಂತಹ ಪೀಠಗಳಲ್ಲಿದ್ದಾರೆ. ವೈಯಕ್ತಿಕವಾಗಿ ನೋಡುವುದಾದರೆ, ಅವರು ರಿಪಬ್ಲಿಕನ್ ಪಕ್ಷದ ಸಂಸ್ಥಾಪಕ ಆರ್.ಕೆ. ಗವಾಯಿ ಅವರ ಮಗ. ಯುಪಿಎ ಆಡಳಿತಾವಧಿಯಲ್ಲಿ ಎಂಎಲ್ಸಿ, ಸಂಸದ ಮತ್ತು ರಾಜ್ಯಪಾಲರಾಗಿ ಹಲವು ಹುದ್ದೆಗಳನ್ನು ಅಲಂಕರಿಸಿದ್ದ ಆರ್. ಕೆ. ಗವಾಯಿ ದಲಿತ ಚಳವಳಿಯಲ್ಲಿ ಪ್ರಮುಖ ವ್ಯಕ್ತಿಯಾಗಿದ್ದರು. ತಾನು ದೇಶದ ಬೌದ್ಧ ಹಿನ್ನಲೆಯ ಮೊದಲ ನ್ಯಾಯಾದೀಶ ಎಂದು ಸಿಜೆಐ ಗವಾಯಿ ಘೋಷಿಸಿದರು. ದಲಿತರಾಗಿ ಈ ಹುದ್ದೆಗೆ ಬಂದಿರುವ ಎರಡನೇ ವ್ಯಕ್ತಿ ಅವರು. ಭಾರತವು ಬಹು ಧರ್ಮಗಳು, ಸಂಸ್ಕೃತಿಗಳು, ರಾಜಕೀಯಗಳು ಮತ್ತು ಪ್ರದೇಶಗಳನ್ನು ಹೊಂದಿರುವ ವೈವಿಧ್ಯಮಯದಿಂದ ಕೂಡಿದ ದೇಶವೆಂದು, ಇದು ಕಾನೂನು ವ್ಯವಸ್ಥೆಯಲ್ಲಿ ಪ್ರತಿಬಿಂಬಿಸಬೇಕು ಎಂದು ನೇಮಕದ ನಂತರ ತಕ್ಷಣವೇ ಪ್ರಕಟಿಸಿದರು.


ಸುಪ್ರೀಂ ಕೋರ್ಟ್ ಸೂಪರ್ ಪಾರ್ಲಿಮೆಂಟ್ ಆಗಬಾರದು, ಸಂಸತ್ತನ್ನು ಉನ್ನತೀಕರಿಸಲಾಗಿದೆ ಎಂಬ ಉಪರಾಷ್ಟ್ರಪತಿಯವರ ಹೇಳಿಕೆಯನ್ನು ಅವರು ಅಧಿಕಾರ ವಹಿಸಿಕೊಳ್ಳುವ ಮೊದಲೇ ತಳ್ಳಿ ಹಾಕಿದರು. ಸಂವಿಧಾನವೇ ಎಲ್ಲರಿಗೂ ಸರ್ವೋಚ್ಚ ಎಂದು ಅವರು ಒತ್ತಿ ಹೇಳಿದರು. ಮೊದಲಿನಿಂದಲೂ ಅಂಬೇಡ್ಕರ್ ವಾದದ ಕಟ್ಟಾ ಬೆಂಬಲಿಗರಾಗಿರುವ ಗವಾಯಿ, ಅಂಬೇಡ್ಕರ್ ನೀಡಿದ ಸಂವಿಧಾನದಿಂದಾಗಿಯೇ ಮೋದಿ ಪ್ರಧಾನಿಯಾಗಲು ಸಾಧ್ಯವಾಯಿತು ಮತ್ತು ತಾನು ಮುಖ್ಯ ನ್ಯಾಯಮೂರ್ತಿಯೂ ಆದೆ ಎಂದು ಹೇಳಿದರು.

ಪ್ರಮುಖ ಪ್ರಕರಣಗಳಿರುವ ಸಂದರ್ಭದಲ್ಲಿ

ಈಗ ಅವರ ಮುಂದೆ ಹೊಸ ವಕ್ಫ್ ಕಾಯ್ದೆ ಪ್ರಕರಣ, ಪ್ರಾರ್ಥನಾ ಸ್ಥಳಗಳ ಕಾಯ್ದೆ ಪ್ರಕರಣ ಮತ್ತು ಇನ್ನೂ ಹಲವು ಪ್ರಮುಖ ಪ್ರಕರಣಗಳಿವೆ. ಇವು ದೇಶದ ರಾಜಕೀಯವನ್ನು ಮಾತ್ರವಲ್ಲದೆ ಸಾಮಾಜಿಕ–ಧಾರ್ಮಿಕ ಸಂಬಂಧಗಳನ್ನು ಸಹ ನಿರ್ದೇಶಿಸಬಹುದು. ವಾಸ್ತವವಾಗಿ ವಕ್ಫ್ ಕಾಯ್ದೆಯ ವಿರುದ್ಧದ ಪ್ರಕರಣ ಸಿಜೆಐ ಸಂಜೀವ್ ಖನ್ನಾ ಅವರ ಮುಂದೆ ಇತ್ತು. ಆರಂಭದಲ್ಲಿ ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಕೇಂದ್ರದಿಂದ ಯಾವುದೇ ಕ್ರಮ ಕೈಗೊಳ್ಳದಂತೆ ತಡೆದ ನ್ಯಾಯಮೂರ್ತಿ ಖನ್ನಾ ಅವರು, ತಮ್ಮ ಅಧಿಕಾರಾವಧಿ ಮುಗಿಯುತ್ತಿರುವುದರಿಂದ ಪ್ರಕರಣವನ್ನು ಮುಂದಿನ ನ್ಯಾಯಾಧೀಶರಿಗೆ ಹಸ್ತಾಂತರಿಸುವುದಾಗಿ ಘೋಷಿಸಿದರು. ಸಿಜೆಐ ಗವಾಯಿ ಅವರು ಅದನ್ನು ಆರು ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾಗುತ್ತದೆಯೇ ಎಂದು ಕಾದು ನೋಡಬೇಕಾಗಿದೆ.


ಇಷ್ಟೆಲ್ಲಾ ಹಲವು ನಿರ್ಣಾಯಕ ಪ್ರಕರಣಗಳನ್ನು ಬಗೆಹರಿಸಬೇಕಾದ ಸಮಯದಲ್ಲಿ ರಾಷ್ಟ್ರಪತಿಗಳ ಮೂಲಕ ಪ್ರಶ್ನೆಗಳ ರೂಪದಲ್ಲಿ ಕೇಂದ್ರವು ತನ್ನ ವಿರೋಧವನ್ನು ಪ್ರಕಟಿಸುವುದು ಮುಂಗಾಲುಗಳನ್ನು ಕಟ್ಟುತ್ತದೆಯೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಸಂವಿಧಾನದ ಮೇಲೆ ದಾಳಿ ಎಂಬುದು ಮೋದಿ ಸರ್ಕಾರಕ್ಕೆ ಒಂದು ಪರಿಪಾಠವಾಗಿದೆ. ಆದರೆ ಈಗ ಈ ವಿಷಯದಲ್ಲಿಯೂ ಸುಪ್ರೀಂ ಕೋರ್ಟ್ ನೀಡಿದ ತೀರ್ಪನ್ನೇ ಆಕ್ಷೇಪಿಸಿದೆ ಎಂದರೆ ರಾಜ್ಯಗಳ ಹಕ್ಕುಗಳನ್ನು ಅನುಮತಿಸಲು ಕೇಂದ್ರ ಸರ್ಕಾರ ಸಿದ್ಧವಿಲ್ಲ ಎಂದರ್ಥ. ರಾಷ್ಟ್ರಪತಿಗಳ ಪ್ರಶ್ನೆಗಳ ಹೆಸರಿನಲ್ಲಿ ರಾಜ್ಯಗಳ ಹಕ್ಕುಗಳನ್ನು ರಾಜ್ಯಪಾಲರ ಕೈಯಲ್ಲಿ ಇಡುವುದು ಮಾತ್ರ ಸರಿಯಾದುದಲ್ಲ. ಈ ವಿಷಯಗಳ ಕುರಿತು ಭವಿಷ್ಯದ ಸವಾಲುಗಳಿಗೆ ಸಿಜೆಐ ಗವಾಯಿ ಹೇಗೆ ಸ್ಪಂದಿಸುತ್ತಾರೆ ಮತ್ತು ಕಾನೂನು ವ್ಯವಸ್ಥೆಯು ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ನೋಡೋಣ.

ಸಿಚಿ (ಕೃಪೆ: ಪ್ರಜಾಶಕ್ತಿ)


ಡಿ.ಡಿ. ಕೊಸಾಂಬಿ,


ಮೇಘನಾದ ಸಹ,


ಹೋಮಿ ಜಹಾಂಗೀರ್ ಭಾಭಾ,


ಪ್ರೊ. ಸತೀಷ್ ಧವನ್

ಭಾರತದಲ್ಲಿ ವಿಜ್ಞಾನ–ತಂತ್ರಜ್ಞಾನದ ಪ್ರಗತಿ ಮಾರ್ಕ್ಸ್‌ವಾದಿಗಳ ಪಾತ್ರ ಮತ್ತು ಪ್ರಭಾವ

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲೂ, ಸ್ವಾತಂತ್ರ್ಯಕ್ಕೆ ಮುಂಚಿನ ಮತ್ತು ನಂತರದ ಭಾರತದ ವಿಜ್ಞಾನದ ಪ್ರಗತಿಯಲ್ಲೂ ಮಾರ್ಕ್ಸ್‌ವಾದಿ ಚಿಂತನೆಯ ಪ್ರಭಾವಕ್ಕೊಳಗಾದ ವಿಜ್ಞಾನಿಗಳು, ಕಮ್ಯೂನಿಸ್ಟ್ ವಿಜ್ಞಾನಿಗಳು ಅತ್ಯಂತ ಅಮೂಲ್ಯವಾದ ಕೊಡುಗೆಗಳನ್ನು ನೀಡಿದ್ದಾರೆ. ಈ ಕುರಿತು ಒಂದು ಸಂಕಿಪ್ತ ಅವಲೋಕನ.

ಆರ್. ರಾಮಕೃಷ್ಣ

1917 ರ ರಷ್ಯಾದ ಮಹಾನ್ ಸಮಾಜವಾದಿ ಕ್ರಾಂತಿಯ ನಂತರ, ಸೋವಿಯತ್ ಒಕ್ಕೂಟವು ವಿಜ್ಞಾನ–ತಂತ್ರಜ್ಞಾನ ಹಾಗೂ ಆರ್ಥಿಕತೆಯಲ್ಲಿ ಸಾಧಿಸಿದ ಪ್ರಗತಿಯು ಇಡೀ ಜಗತ್ತಿನ ಗಮನ ಸೆಳೆಯಿತು. ಭಾರತದಲ್ಲಿ 1930 ರ ಸುಮಾರಿನಲ್ಲಿ ಯುವ ವಿಜ್ಞಾನಿ ಮೇಘನಾದ ಸಹಾ, ಸೋವಿಯತ್ ಒಕ್ಕೂಟದ ಯೋಜನಾಬದ್ಧ ಬೆಳವಣಿಗೆ, ವಿಜ್ಞಾನ ಕ್ಷೇತ್ರದ ಸಾಧನೆಗಳಿಂದ ಪ್ರಭಾವಿತರಾಗಿದ್ದರು. ಅವರು ಕಮ್ಯೂನಿಸ್ಟರಾಗಿದ್ದರು.

ಭಾರತೀಯ ವಿಜ್ಞಾನ ಸಂಸ್ಥೆ(ಐ.ಐ.ಎಸ್.ಸಿ.)ಯಿಂದ ಬರ್ಲಿನ್‌ಗೆ ಸಂಶೋಧನಾ ವಿದ್ಯಾರ್ಥಿಯಾಗಿ ಹೋಗಿದ್ದ ಗಂಗಾಧರ ಅಧಿಕಾರಿಯವರು, ತಮ್ಮ ಪ್ರತಿಭೆಯಿಂದ ವಿಜ್ಞಾನ ವಲಯದ ಗಮನ ಸೆಳೆದಿದ್ದರು. ಮೇಘನಾದ ಸಹಾ, ಸಿ.ವಿ.ರಾಮನ್ ಮುಂತಾದವರ ಒತ್ತಾಸೆಯಿಂದ ಅಧಿಕಾರಿ ಜರ್ಮನಿಯಿಂದ ಭಾರತಕ್ಕೆ ಮರಳಿ ಬಂದರು. ಆದರೆ ಭಾರತದಲ್ಲಿ ವಿಜ್ಞಾನ ಸಂಶೋಧನೆಗಿಂತ ಕಮ್ಯೂನಿಸ್ಟ್ ಚಳುವಳಿಯನ್ನು ಆದ್ಯತೆಯಾಗಿ ತೆಗೆದುಕೊಂಡು ಅದರಲ್ಲಿ ತೊಡಗಿಸಿಕೊಂಡರು. 1929ರಲ್ಲಿ ಬ್ರಿಟಿಷರು 'ಪ್ರ(ಕು)ಖ್ಯಾತ ಮೀರತ್ ಪಿತೂರಿ' ಪ್ರಕರಣದಲ್ಲಿ ರಾಜದ್ರೋಹದ ಗಂಭೀರ ಆರೋಪದ ಮೇಲೆ ಅಧಿಕಾರಿಯವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ ಅಂತರರಾಷ್ಟ್ರೀಯ ಖ್ಯಾತಿಯ ವಿಜ್ಞಾನಿಗಳಾದ ಎಡ ಒಲವಿನ ಆಲ್ಬರ್ಟ್ ಐನ್‌ಸ್ಟಿನ್, ಹರೋಲ್ಡ್ ಮಸ್ಕಿ, ರೋಮೇನ್ ರೋಲ್ಯಾಂಡ್ ಮುಂತಾದವರು ಅದನ್ನು ಪ್ರತಿಭಟಿಸಿದ್ದರು. ಗಂಗಾಧರ ಅಧಿಕಾರಿಯವರು ಅಲ್ಪ ಅವಧಿಗೆ ಸಿಪಿಐ ಪಕ್ಷದ ಪ್ರಧಾನ ಕಾರ್ಯದರ್ಶಿಗಳೂ, ನಂತರ ರಾಷ್ಟ್ರೀಯ ಮಂಡಳಿ ಸದಸ್ಯರೂ ಆಗಿ ಕಮ್ಯೂನಿಸ್ಟ್ ಚಳುವಳಿಯಲ್ಲಿ ತಮ್ಮ ಜೀವನ ಕೊನೆಯವರೆಗೆ ಕೆಲಸ ಮಾಡಿದರು.

ಯೋಜಿತ ಬೆಳವಣಿಗೆಯ 'ಭಿನ್ನ' ಮಾದರಿ

ಲಂಡನ್‌ನಲ್ಲಿ 1931 ರಲ್ಲಿ ನಡೆದ 'ವಿಜ್ಞಾನ ಇತಿಹಾಸದ ಅಂತರ ರಾಷ್ಟ್ರೀಯ ಸಮಾವೇಶ'ದಲ್ಲಿ ಬುಕಾರಿನ್ ನೇತೃತ್ವದ ಸೋವಿಯತ್ ಒಕ್ಕೂಟದ ನಿಯೋಗವು ಸಮಾಜದ ಬೆಳವಣಿಗೆಯಲ್ಲಿ ವಿಜ್ಞಾನವು ವಹಿಸಬಹುದಾದ ಪಾತ್ರದ ಕುರಿತು ಮಂಡಿಸಿದ ಮಾರ್ಕ್ಸ್‌ವಾದಿ ಕಣ್ಣೋಟವು ಹಲವು ವಿಜ್ಞಾನಿಗಳನ್ನು ಮಾರ್ಕ್ಸ್‌ವಾದದ ಕಡೆಗೆ ಸೆಳೆಯಿತು. ಆ ಕಾಲದ ಪ್ರತಿಭಾನ್ವಿತ ಯುವ ಬ್ರಿಟಿಷ್ ವಿಜ್ಞಾನಿಗಳಾದ ಜೆ.ಡಿ. ಬರ್ನಾಲ್, ಜೆ.ಬಿ.ಎಸ್. ಹಲ್ಡಾನೆ, ಜೋಸೆಫ್ ನದೀಮ್, ಲ್ಯಾನ್ಸ್‌ಲೋಟ್ ಹೋಗ್ಬೆನ್ ಮುಂತಾದವರು ಮಾರ್ಕ್ಸ್‌ವಾದಿ ವಿಚಾರಗಳಿಗೆ ಆಕರ್ಷಿತರಾದರು. ಬರ್ನಾಲ್, ಹಲ್ಡಾನೆ, ನದೀಮ್ ಮೂವರೂ 'ಗ್ರೇಟ್ ಬ್ರಿಟನ್ ಕಮ್ಯೂನಿಸ್ಟ್ ಪಕ್ಷ'ದ ಸದಸ್ಯರಾದರು.

ಮುಂದೆ ಎರಡನೇ ಮಹಾಯುದ್ಧದ ನಂತರ ಅದು ಪ್ರಖರವಾದ ವಿಜ್ಞಾನ ಚಳುವಳಿಗೆ ಹಾಗೂ 'ವಿಶ್ವ ವಿಜ್ಞಾನ ಕಾರ್ಮಿಕರ ಫೆಡರೇಷನ್' ಸ್ಥಾಪನೆಗೆ, ಹಾಗೂ ಜಾಗತಿಕ ವಿಶ್ವಶಾಂತಿ ಚಳುವಳಿ ಮತ್ತು 'ವಿಶ್ವ ಶಾಂತಿ ಮಂಡಳಿ'ಯ ರಚನೆಗೂ ಪ್ರೇರಣೆಯಾಯಿತು. ಜೆ.ಡಿ. ಬರ್ನಾಲ್, ಜೆ.ಬಿ.ಎಸ್. ಹಲ್ಡಾನೆಯವರು ಭಾರತದ ವಿಜ್ಞಾನ ಕ್ಷೇತ್ರದೊಂದಿಗೆ ನಿಕಟ ಸಂಪರ್ಕ ಇಟ್ಟುಕೊಂಡು ಭಾರತದಲ್ಲಿ ವಿಜ್ಞಾನ ಬೆಳವಣಿಗೆಗೆ ಅಪಾರ ನೆರವು ನೀಡಿದರು.

ಕಾಂಗ್ರೆಸ್‌ನೊಳಗೆ 'ಯೋಜನಾ ಸಮಿತಿ'

1938 ರಲ್ಲಿ ಸುಭಾಷ್ ಚಂದ್ರ ಬೋಸ್ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ನಂತರ ಮೇಘನಾದ ಸಹ, ಬೋಸರನ್ನು ಪ್ರಭಾವಿಸಿ ಕಾಂಗ್ರೆಸ್‌ನ ಒಳಗೆ ದೇಶದ ಪ್ರಗತಿ ಸಾಧನೆಗೆ ಯೋಜನಾಬದ್ಧ ಬೆಳವಣಿಗೆ ಅಗತ್ಯವೆಂಬ ನೆಲೆಯಲ್ಲಿ, 'ಯೋಜನಾ ಸಮಿತಿ'ಯನ್ನು ರಚಿಸಲು ಕಾರಣರಾದರು. ಸಾಹಿಬ್ ಸಿಂಗ್ ಸೋಖೇ ಈ ಸಮಿತಿಯ 'ಆರೋಗ್ಯ ವಿಭಾಗ'ದ ನೇತೃತ್ವವನ್ನು ವಹಿಸಿದರು.

ನೆಹರೂ ನಾಯಕತ್ವದಲ್ಲಿ ದೇಶದ ಕೈಗಾರೀಕೀಕರಣ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಬೆಳವಣಿಗೆಯ ಗುರಿಯೊಂದಿಗೆ ಯೋಜನೆಯನ್ನು ರೂಪಿಸಲಾಯಿತು. ಸ್ವಾತಂತ್ರ್ಯಾನಂತರ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯ ಪ್ರಯೋಗಾಲಯಗಳು, ಪರಮಾಣು ವಿಜ್ಞಾನ, ಬಾಹ್ಯಾಕಾಶ, ವಿಜ್ಞಾನ ಶಿಕ್ಷಣ ಸಂಸ್ಥೆಗಳು, ಐ.ಐ.ಟಿ.ಗಳ ಸ್ಥಾಪನೆ ಈ ಎಲ್ಲವೂ ಈ ಯೋಜನೆಯ ಆಧಾರದಲ್ಲಿಯೇ ನಡೆದವು.

ಈ ವಿಷಯಗಳಲ್ಲಿ ಜೆ.ಡಿ. ಬರ್ನಾಲ್ ಹಲವು ಬಾರಿ ಭಾರತಕ್ಕೆ ಬಂದು ನೆಹರೂ ಅವರಿಗೆ ನೆರವು ನೀಡಿದರು. ಹಲ್ಡಾನೆ ಭಾರತದಲ್ಲೇ ನೆಲೆನಿಂತು ವಿಜ್ಞಾನ ಸಂಸ್ಥೆಗಳ ಬೆಳವಣಿಗೆಗೆ ಮಾರ್ಗದರ್ಶನ ಮಾಡಿದರು. ಮೇಘನಾದ ಸಹಾ, ಸೈಯದ್ ಹುಸೇನ್ ಜಹೀರ್, ಸಾಹಿಬ್ ಸಿಂಗ್ ಸೋಖೇ ಇವರು ಆಧುನಿಕ ಭಾರತದ ವಿಜ್ಞಾನ ಪ್ರಗತಿಯ ಅಡಿಪಾಯವನ್ನು ಹಾಕಿದವರು ಎಂದು ಹೇಳಬಹುದು. ಈ ಮೂವರೂ ಭಾರತ ಕಮ್ಯೂನಿಸ್ಟ್ ಪಕ್ಷದ ಜೊತೆಗೆ ಬಹಳ ನಿಕಟವಾದ ಒಡನಾಟ ಹೊಂದಿದ್ದರು.

ವಿಜ್ಞಾನ ಸಂಸ್ಥೆಗಳನ್ನು ಕಟ್ಟುವಲ್ಲಿ

ಮೇಘನಾದ ಸಹಾ ಅವರು ಹೋಮಿ ಜಹಾಂಗೀರ್ ಬಾಬಾ ಅವರೊಡಗೂಡಿ ಭಾರತದ ಪರಮಾಣು ವಿಜ್ಞಾನದ ಬೆಳವಣಿಗೆಗೆ, ಹುಸೇನ್ ಜಹೀರ್ ಅವರು ಯ ಸಿ.ಎಸ್.ಐ.ಆರ್.ನ ಮುಖ್ಯ ನಿರ್ದೇಶಕರಾಗಿ ಕೈಗಾರಿಕಾ–ವೈಜ್ಞಾನಿಕ ಸಂಶೋಧನೆ–ಪ್ರಗತಿಗೆ ಅಡಿಪಾಯ ಹಾಕಿದರು. ಸೋಖೇಯವರು ಸ್ವಾತಂತ್ರ್ಯಕ್ಕೆ ಮುಂಚೆಯೇ, ರೋಗ ನಿರೋಧಕ ಲಸಿಕೆ ಮತ್ತು ಔಷಧ ವಿಜ್ಞಾನದ ಪ್ರತಿಷ್ಠಿತ ಸಂಸ್ಥೆ 'ಹಾಫ್ಕಿನ್ ಇನ್‌ಸ್ಟಿಟ್ಯೂಟ್'ನ ನಿರ್ದೇಶಕರಾಗಿ ಶ್ರಮಿಸಿದರು. ಸ್ವಾತಂತ್ರ್ಯಾನಂತರ ಸೋಖೇಯವರು 'ಇಂಡಿಯನ್ ಡ್ರಗ್ಸ್ ಅಂಡ್ ಫಾರ್ಮಾಸುಟಿಕಲ್ಸ್ ಲಿಮಿಟೆಡ್(ಐ.ಡಿ.ಪಿ.ಎಲ್.), ಹಿಂದೂಸ್ಥಾನ್ ಆಂಟಿಬಯಾಟಿಕ್ಸ್ ಲಿಮಿಟೆಡ್(ಎಚ್.ಎ.ಎಲ್.) ಸಂಸ್ಥೆಗಳನ್ನು ಸ್ಥಾಪಿಸಿದರು. ಭಾರತವು ಔಷಧ ಉತ್ಪಾದನೆಯಲ್ಲಿ ಗಣನೀಯವಾದ ಸ್ವಾವಲಂಬನೆ ಸಾಧಿಸಲು ಹಾಗೂ ಜಗತ್ತಿನ ಬಹುದೊಡ್ಡ ಔಷಧ ಉತ್ಪಾದಕ ದೇಶವಾಗಲು ಇದು ಅಡಿಪಾಯವಾಯಿತು. ಇಂದು ಬೇರೆ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಅತಿ ಕಡಿಮೆ ಬೆಲೆಯಲ್ಲಿ ಔಷಧಗಳು ದೊರಕುತ್ತಿದೆ. ಅದಕ್ಕೆ ಈ ಅಡಿಪಾಯವೇ ಮೂಲ ಕಾರಣ.

ಕರ್ನಾಟಕದಲ್ಲಿ ವಿಜ್ಞಾನ ಚಳುವಳಿ
ಮಾರ್ಕ್ಸ್‌ವಾದದ ಪ್ರಭಾವ

ಭಾರತದ ಖ್ಯಾತ ಇತಿಹಾಸಕಾರರು, ಗಣಿತಜ್ಞರು, ಮಾರ್ಕ್ಸ್‌ವಾದಿ ಚಿಂತಕರೂ ಆದ ಡಿ.ಡಿ. ಕೊಸಾಂಬಿ ಅಲ್ಪಕಾಲ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ(ಐ.ಐ.ಎಸ್.ಸಿ.) ಯಲ್ಲಿ ಬೋಧಿಸುತ್ತಿದ್ದರು. ಆಗ ಅವರು ಸತೀಷ್ ಧವನ್, ಹೋಮಿ ಜಹಾಂಗೀರ್ ಭಾಭಾ, ವಾಸುದೇವ ಮೂರ್ತಿ, ಪ್ರೊ.ಎಂ.ಎ. ಸೇತುರಾವ್, ಪ್ರೊ. ಜೆ.ಆರ್. ಲಕ್ಷ್ಮಣರಾವ್, ಪ್ರೊ. ಎಸ್. ಬಾಲಚಂದ್ರ ರಾವ್ ಮುಂತಾದ ಹಲವು ವಿಜ್ಞಾನಿಗಳ ತಂಡವನ್ನು ರೂಪಿಸಿದರು. ಈ ಗುಂಪಿನಲ್ಲಿ ವಿಜ್ಞಾನ–ಸಮಾಜ ವಿಜ್ಞಾನ–ಮಾರ್ಕ್ಸ್‌ವಾದ ಮುಂತಾದ ವಿಷಯಗಳ ಕುರಿತು ಚರ್ಚಿಸಲಾಗುತ್ತಿತ್ತು. ಹೀಗೆ ಕರ್ನಾಟಕದ ವಿಜ್ಞಾನ ವಲಯದಲ್ಲಿ ಹಲವು ಪ್ರತಿಷ್ಠಿತ ವಿಜ್ಞಾನಿಗಳು ಮಾರ್ಕ್ಸ್‌ವಾದಿ ಚಿಂತನೆಗಳ ಪ್ರಭಾವಕ್ಕೊಳಗಾದರು ಮತ್ತು ವಿಜ್ಞಾನ ಕ್ಷೇತ್ರಕ್ಕೆ ಅಮೋಘ ಕೊಡುಗೆ ನೀಡಿದರು.

ಅಪ್ರತಿಮ ಕೊಡುಗೆಗಳು

ಸತೀಷ್ ಧವನ್ ಅವರು ಮುಂದೆ ಇಸ್ರೋದ ಮುಖ್ಯಸ್ಥರಾದರು. ಭಾರತದ ಇನ್ಸಾಟ್, ಐ.ಆರ್.ಎಸ್., ಪಿ.ಎಸ್.ಎಲ್.ವಿ. ಮುಂತಾದ ಮಹತ್ವದ ಉಪಗ್ರಹಗಳ ಉಡಾವಣೆ ಯೋಜನೆಯಲ್ಲಿ ಸತೀಶ್ ಧವನ್ ನಿರ್ಣಾಯಕ ಪಾತ್ರ ವಹಿಸಿದರು. ಭಾರತದ ಪರಮಾಣು ವಿಜ್ಞಾನದ ಪ್ರಗತಿಯಲ್ಲಿ ಹೋಮಿ ಜಹಾಂಗೀರ್ ಭಾಭಾ ಅವರ ಕೊಡುಗೆ ಅಮೋಘವಾದದ್ದು, ಪ್ರಖ್ಯಾತವಾದದ್ದು. ಅವರು ಫ್ಯಾಸಿಸಂ ವಿರೋಧಿ ನಿಲುವು ಹೊಂದಿದ್ದರು ಹಾಗೂ ಕಮ್ಯೂನಿಸ್ಟ್ ಚಳುವಳಿಯ ಬೆಂಬಲಿಗರಾಗಿದ್ದು ನಿರಂತರವಾಗಿ ಕಮ್ಯೂನಿಸ್ಟ್ ಪಕ್ಷದ ಸಂಪರ್ಕದಲ್ಲಿದ್ದರು. ಅವರು ಬೆಂಗಳೂರಿನಲ್ಲಿದ್ದಾಗ ರಾಜ್ಯದ ಹಿರಿಯ ಕಮ್ಯೂನಿಸ್ಟ್ ಮುಖಂಡರಾದ ಎನ್.ಎಲ್. ಉಪಾಧ್ಯಾಯ ಅವರು ಭಾಭಾರನ್ನು ನಿರಂತರವಾಗಿ ಭೇಟಿ ಮಾಡುತ್ತಿದ್ದರು. ಭಾಭಾ ಅವರು ಕಮ್ಯೂನಿಸ್ಟ್ ಪಕ್ಷಕ್ಕೆ ನಿಯಮಿತ ನಿಧಿಯನ್ನು ಕೊಡುತ್ತಿದ್ದರು ಹಾಗೂ ಕಮ್ಯೂನಿಸ್ಟ್ ಸಾಹಿತ್ಯವನ್ನು ಕೊಂಡು ಓದುತ್ತಿದ್ದರು.

ಜನರೆಡೆಗೆ ವಿಜ್ಞಾನ

ಕರ್ನಾಟಕದಲ್ಲಿ ಜನ ಸಾಮಾನ್ಯರ ನಡುವೆ ವಿಜ್ಞಾನವನ್ನು ಜನಪ್ರಿಯಗೊಳಿಸುವ ನಿಟ್ಟಿನಲ್ಲಿ ರಸಾಯನ ವಿಜ್ಞಾನದ ಪ್ರಾಧ್ಯಾಪಕರಾಗಿದ್ದ ಪ್ರೊ.ಎಂ.ಎ. ಸೇತುರಾವ್ ಮತ್ತು ಪ್ರೊ. ಜೆ.ಆರ್. ಲಕ್ಷ್ಮಣರಾವ್ ಎರಡು ಬಹುದೊಡ್ಡ ಹೆಸರುಗಳು. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್‌ನ ಸ್ಥಾಪನೆಯಲ್ಲಿ ಇವರು ನಿರ್ಣಾಯಕ ಪಾತ್ರ ವಹಿಸಿದರು. ಇವರು ಕಮ್ಯೂನಿಸ್ಟರಾಗಿದ್ದರು. ಸ್ವಾತಂತ್ರ್ಯ ಹೋರಾಟಗಾರರು, ವೈಜ್ಞಾನಿಕ ಮನೋಭಾವದ ಪ್ರಬಲ ಪ್ರತಿಪಾದಕರೂ ಆಗಿದ್ದ ಡಾ. ಎಚ್. ನರಸಿಂಹಯ್ಯ ಅವರು ಗಾಂಧೀವಾದಿ ಎಂದು ಹೆಸರಾಗಿದ್ದರೂ, ಕಮ್ಯೂನಿಸ್ಟ್ ಪಕ್ಷದ ಬಗೆಗೆ ಅಪಾರವಾದ ಗೌರವ, ಕಾಳಜಿ–ಕಳಕಳಿಗಳನ್ನು ಹೊಂದಿದ್ದರು. ಅವರ ಮೇಲೆ ಮಾರ್ಕ್ಸ್‌ವಾದದ ಪ್ರಭಾವವೂ ಗಾಢವಾಗಿತ್ತು.


ಜನ ವಿಜ್ಞಾನ ಆಂದೋಲನ

ಎಂಭತ್ತರ ದಶಕದ ಮಧ್ಯದಲ್ಲಿ ಭೋಪಾಲ್ ವಿಷಾನಿಲ ದುರಂತದಲ್ಲಿ, ಜೀವ ಉಳಿಸಿಕೊಳ್ಳಲು ಸಾಧ್ಯವಾಗುವ ಸರಳ ಉಪಾಯದ ಅರಿವು ಇಲ್ಲದೇ, ಸಹಸ್ರಾರು ಜನರು ಪ್ರಾಣ ಕಳೆದುಕೊಂಡರು. ಆಗ ದೇಶಾದ್ಯಂತ ಜನಪರ ವಿಜ್ಞಾನಿಗಳು, ಪ್ರಗತಿಪರರು ಜನರಲ್ಲಿ ವಿಜ್ಞಾನದ ಅರಿವು ಮೂಡಿಸಬೇಕೆಂದು ನಿರ್ಧರಿಸಿದರು. ದೇಶಾದ್ಯಂತ ಸಂಚಲನ ಮೂಡಿಸಿದ 'ಅಖಿಲ ಭಾರತ ಜನ ವಿಜ್ಞಾನ ಜಾಥಾ'ವನ್ನು ಸಂಘಟಿಸಲಾಯಿತು. ಖ್ಯಾತ ಅಭಿವೃದ್ಧಿ ಅರ್ಥಶಾಸ್ತ್ರಜ್ಞ ಹಾಗೂ ಶಿಕ್ಷಣ ಪ್ರೇಮಿ ಮಾಲ್ಕಂ ಆದಿಶೇಷಯ್ಯ, ಪರಮಾಣು ವಿಜ್ಞಾನಿ ಡಾ.ಎಂ.ಪಿ. ಪರಮೇಶ್ವರನ್, ಶಿಕ್ಷಣ ತಜ್ಞರಾದ ಶಂಕರನ್ ಮುಂತಾದವರು ಇದರ ಪ್ರೇರಕ–ಚಾಲಕ ಶಕ್ತಿಗಳಾಗಿದ್ದರು. ಎಂ.ಪಿ. ಪರಮೇಶ್ವರನ್, ಶಂಕರನ್ ಇಬ್ಬರೂ ಕಮ್ಯೂನಿಸ್ಟರಾಗಿದ್ದರು. ಈ ಚಳುವಳಿಯ ಮುಂದುವರಿಕೆಯಾಗಿ ರಾಷ್ಟ್ರ ಮಟ್ಟದಲ್ಲೂ, ರಾಜ್ಯದಲ್ಲೂ ಭಾರತ ಜ್ಞಾನ ವಿಜ್ಞಾನ ಸಮಿತಿಯು ರಚನೆಯಾಯಿತು.

ಕರ್ನಾಟಕದಲ್ಲಿ ಎಲೆಕ್ಟ್ರೋ ಕೆಮಿಸ್ಟ್ರಿ ಮತ್ತು ಗ್ರಾಮೀಣ ತಂತ್ರಜ್ಞಾನ ವಿಷಯದ ಖ್ಯಾತ ವಿಜ್ಞಾನಿ, ಐ.ಐ.ಎಸ್.ಸಿ.ಯ ಪ್ರಾಧ್ಯಾಪಕರಾಗಿದ್ದ ಎ.ಕೆ.ಎನ್.ರೆಡ್ಡಿಯವರು ವಿಜ್ಞಾನದ ಅರಿವನ್ನು ಜನರ ನಡುವೆ ಕೊಂಡೊಯ್ಯಬೇಕು ಎಂಬ ನಿಟ್ಟಿನಲ್ಲಿ ಬಹಳ ಕಾಳಜಿಯುಳ್ಳರಾಗಿದ್ದು ಆ ನಿಟ್ಟಿನಲ್ಲಿ ಅಪಾರವಾಗಿ ಶ್ರಮಿಸಿದರು. ರೆಡ್ಡಿಯವರು ಸಹ ಕಮ್ಯೂನಿಸ್ಟರಾಗಿದ್ದರು. ಮುಂದೆ ಐಐಎಸ್‌ಸಿ ವಿಜ್ಞಾನಿಗಳಾದ, ಖ್ಯಾತ ರಾಸಾಯನ ವಿಜ್ಞಾನಿ, ಭಾರತ ರತ್ನ ಪ್ರೊ. ಸಿ.ಎನ್.ಆರ್. ರಾವ್, ಖ್ಯಾತ ಪರಿಸರ ವಿಜ್ಞಾನಿ ಪದ್ಮಭೂಷಣ ಮಾಧವ ಗಾಡ್ಗಿಳ್, ಖ್ಯಾತ ಜೀವಾಣು ಭೌತ ವಿಜ್ಞಾನಿ ಪ್ರೊ.ಎಂ.ಆರ್.ಎನ್. ಮೂರ್ತಿ, ಲೋಹ ವಿಜ್ಞಾನಿ ಪ್ರೊ.ಎಂ.ಕೆ. ಸೂರಪ್ಪ, ವೈರಾಣು ವಿಜ್ಞಾನಿ ಡಾ. ಶೈಲ, ಯಂತ್ರ ವಿಜ್ಞಾನಿ ಡಾ.ಶ್ರೀನಿವಾಸ್ ಉಡುಪ, ಸಂರಚನ–ಜೀವ ವಿಜ್ಞಾನಿ ಡಾ.ಎಂ.ವಿಜಯನ್ ಮುಂತಾದವರೂ ಈ ಜನ ವಿಜ್ಞಾನ ಚಳುವಳಿಯ ಭಾಗವಾಗಿ ತೊಡಗಿಸಿಕೊಂಡದ್ದರಿಂದ ಚಳುವಳಿಯು ಹೊಸ ಚೈತನ್ಯ ಪಡೆಯಿತು. ಪ್ರೊ.ಎಂ.ಆರ್.ಎನ್. ಮೂರ್ತಿಯವರು ಈಗಲೂ ಭಾರತ ಜ್ಞಾನ ವಿಜ್ಞಾನ ಸಮಿತಿಯ ರಾಜ್ಯ ಅಧ್ಯಕ್ಷರಾಗಿ ವಿಜ್ಞಾನ ಚಳುವಳಿಗೆ ಸಕ್ರಿಯ ಮಾರ್ಗದರ್ಶನ ನೀಡುತ್ತಿದ್ದಾರೆ.

ಪ್ರಾಚೀನ ಭಾರತದ ತತ್ವಜ್ಞಾನ, ವಿಜ್ಞಾನ ಪರಂಪರೆ ಮುಂತಾದ ವಿಷಯಗಳಲ್ಲಿ ಬಹಳ ಆಳವಾದ ಅಧ್ಯಯನಗಳನ್ನು ನಡೆಸಿರುವ ಮಾರ್ಕ್ಸ್‌ವಾದಿ ವಿದ್ವಾಂಸರು, ವಿಚಾರವಾದಿಗಳೂ ಆದ ಡಾ.ಜಿ.ರಾಮಕೃಷ್ಣ ಭಾರತ ಕಮ್ಯೂನಿಸ್ಟ್ ಪಕ್ಷದಲ್ಲಿ ಸಕ್ರಿಯವಾಗಿದ್ದಾರೆ. ಜಿ.ಆರ್., ಡಾ.ಎಸ್.ಬಾಲಚಂದ್ರರಾವ್ ಇಬ್ಬರಿಗೂ ನ್ಯಾಷನಲ್ ಕಾಲೇಜಿನ ಜೊತೆಗೆ ನಂಟು. ಪ್ರೊ.ಬಾಲಚಂದ್ರರಾವ್ ಮೇ 14, 2025 ರಂದು ತಮ್ಮ 80 ರ ವಯಸ್ಸಿನಲ್ಲಿ ಬೆಂಗಳೂರಿನಲ್ಲಿ ತೀರಿಕೊಂಡರು. ಬಾಲಚಂದ್ರರಾವ್ ಅವರ ಅಧ್ಯಯನ–ವಿಚಾರ–ಕೊಡುಗೆಗಳು ಸಹ ಮಹತ್ವದ್ದು. (ಲೇಖನ ಮುಂದಿನ ಪುಟದಲ್ಲಿದೆ.)

ಭಾರತೀಯ ವಿಜ್ಞಾನ ಪರಂಪರೆಯ ಹಿರಿಮೆ ಎತ್ತಿಹಿಡಿದ ವಿದ್ವಾಂಸ 'ಹುಸಿ ವಿಜ್ಞಾನ'ವನ್ನು ಖಂಡಿಸಿದ ಪ್ರಖರ ವಿಚಾರವಾದಿ ಡಾ. ಎಸ್. ಬಾಲಚಂದ್ರರಾವ್



ಡಿಸೆಂಬರ್ 24, 1944 ರಲ್ಲಿ ಶಿವಮೊಗ್ಗ ಜಿಲ್ಲೆಯ ಸಾಗರ ಸಮೀಪದ ತ್ಯಾಗರ್ತಿಯಲ್ಲಿ ಜನಿಸಿದ ಡಾ.ಎಸ್. ಬಾಲಚಂದ್ರರಾವ್ ಅವರು ಗಣಿತ ಪ್ರಾಧ್ಯಾಪಕರಾಗಿ, ಗೌರಿಬಿದನೂರಿನ ನ್ಯಾಷನಲ್ ಕಾಲೇಜಿನಲ್ಲಿ ಹಾಗೂ, ಬೆಂಗಳೂರು ನ್ಯಾಷನಲ್ ಕಾಲೇಜಿನಲ್ಲಿಯೂ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದವರು. 'ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸಡ್ ಸ್ಟಡಿ'-ಸಂಸ್ಥೆಯ ಸಂದರ್ಶಕ ಪ್ರಾಧ್ಯಾಪಕರೂ ಆಗಿದ್ದರು.

ಇಂಗ್ಲೆಂಡ್‌ನ ಖ್ಯಾತ ಗಣಿತಜ್ಞ ಹಾಗೂ ಉದಾರವಾದಿ ತತ್ವಶಾಸ್ತ್ರಜ್ಞರಾದ ಬೆರ್ಟ್ರಾಂಡ್ ರಸ್ಸೆಲ್ ಅವರ ವಿಚಾರಗಳಿಂದ ಪ್ರಭಾವಿತರಾದವರು ಬಾಲಚಂದ್ರರಾವ್. ಜೊತೆಗೆ ಡಾ.ಎಚ್. ನರಸಿಂಹಯ್ಯ, ಡಾ.ಜಿ.ಆರ್. ಅವರಂತಹ ವಿದ್ವಾಂಸರು, ನವಕರ್ನಾಟಕ ಪ್ರಕಾಶನದ ಡಾ.ರಾಜಾರಾಮ್ ಮುಂತಾದವರ ಒಡನಾಡದಿಂದ ಬಾಲಚಂದ್ರರಾವ್ ಅವರು ಕಮ್ಯೂನಿಸ್ಟ್ ಚಳುವಳಿಯ ನಿಕಟವರ್ತಿಗಳೂ ಆದರು. ಬಾಲಚಂದ್ರ ರಾವ್ ಪ್ರಾಚೀನ ಭಾರತದ ತತ್ವಜ್ಞಾನ, ಗಣಿತ, ಖಗೋಳ ವಿಜ್ಞಾನ ವಿಷಯಗಳಲ್ಲಿ ಆಳವಾದ ಅಧ್ಯಯನ ಮಾಡಿದ ಒಬ್ಬ ವಿದ್ವಾಂಸರು.

ಬಾಲಚಂದ್ರರಾವ್ ಅವರು 'ಗಣಿತ', 'ಗಣಿತಶಾಸ್ತ್ರದ ಪ್ರವರ್ತಕರು ಮತ್ತು ಸ್ವಾರಸ್ಯಗಳು', 'ಭಾರತೀಯ ಖಗೋಳಶಾಸ್ತ್ರ', 'ವೇದಾಂಗ ಜ್ಯೋತಿಷ', 'ಭಾರತೀಯ ಖಗೋಳ ವಿಜ್ಞಾನದಲ್ಲಿ ಗ್ರಹಣಗಳು', 'ಗ್ರಹಗಣಿತ' ಮುಂತಾದ ಹತ್ತಾರು ಪುಸ್ತಕಗಳನ್ನು ಬರೆದಿದ್ದಾರೆ. 'ನವ ಕರ್ನಾಟಕ'ವು ಪ್ರಕಟಿಸಿರುವ 'ಫಲ ಜ್ಯೋತಿಷ ನಂಬುವಿರಾ?', 'ಸಂಪ್ರದಾಯ ಸಮಾಜ ವಿಜ್ಞಾನ' ಮುಂತಾದ ಪುಸ್ತಕಗಳ ಲೇಖಕರು ಅವರು. ಈ ವಿಷಯಗಳ ಮೇಲೆ ಇಂಗ್ಲೀಷನಲ್ಲಿಯೂ ಪುಸ್ತಕಗಳನ್ನು ಬರೆದಿದ್ದಾರೆ. ಹಲವಾರು ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದ್ದಿದ್ದಾರೆ. ಜನವಿಜ್ಞಾನ ಚಳುವಳಿಯೊಂದಿಗೆ ಗುರುತಿಸಿಕೊಂಡು ವಿಚಾರ ಸಂಕಿರಣ, ಕಾರ್ಯಾಗಾರಗಳಲ್ಲಿ ತಮ್ಮ ಜ್ಞಾನವನ್ನು ಹಂಚಿಕೊಂಡಿದ್ದಾರೆ.

ಬಾಲಚಂದ್ರರಾವ್ ಗಣಿತಜ್ಞರಾಗಿ, ಶಿಕ್ಷಣ ತಜ್ಞರಾಗಿ ರಾಜ್ಯ ಮಟ್ಟದಲ್ಲೂ ಹಾಗೂ ಅಖಿಲ ಭಾರತ ಮಟ್ಟದಲ್ಲೂ ಪಠ್ಯಪುಸ್ತಕ ರಚನಾ ಸಮಿತಿಗಳಲ್ಲಿ, ಪಠ್ಯ ನೀತಿ ನಿರೂಪಿಸುವ ಸಮಿತಿಗಳಲ್ಲೂ ಕೆಲಸ ಮಾಡಿದ ತಜ್ಞರು. ಗಣಿತ, ಖಗೋಳ ವಿಜ್ಞಾನ, ತತ್ವಶಾಸ್ತ್ರ ಮುಂತಾದ ಕ್ಷೇತ್ರಗಳಿಗೆ ಭಾರತದ ಕೊಡುಗೆ-ಅದರ ಹಿರಿಮೆಯನ್ನು ಅವರು ಬಹಳ ನಿಖರವಾಗಿ ಗುರುತಿಸುವವರಾಗಿದ್ದರು. ಆದರೆ ಈ ವಿಷಯಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ಉತ್ಪ್ರೇಕ್ಷೆ, ತಿರುಚುವಿಕೆಯಂತಹ ವಿಷಯಗಳ ಬಗೆಗೆ ಕಟ್ಟೆಚ್ಚರ ವಹಿಸುತ್ತಿದ್ದರು. ಪಠ್ಯದೊಳಗೆ ಮೌಢ್ಯ ಬಿತ್ತುವ ಸರಕಾರಗಳ ಕೇಸರೀಕರಣದ ಪ್ರಯತ್ನಗಳ ವಿರುದ್ಧ ಪಠ್ಯ ರಚನಾ ಸಮಿತಿಗಳಲ್ಲಿ ಅವರು ಬಹಳ ಪರಿಣಾಮಕಾರಿಯಾಗಿ ಮಧ್ಯಪ್ರವೇಶ ಮಾಡಿದ್ದಾರೆ.

ಡಾ.ಎಸ್. ಬಾಲಚಂದ್ರರಾವ್ ಮತ್ತು ಭಾರತದ ಒಬ್ಬ ಶ್ರೇಷ್ಠ ವಿಮಾನ ವಿಜ್ಞಾನಿಯಾಗಿದ್ದ ರೊದ್ದಂ ನರಸಿಂಹ ಅವರು ಬೌದ್ಧಿಕವಾಗಿ ದೀರ್ಘಕಾಲದ ಒಡನಾಡಿಗಳೂ ಆಗಿ ಕೆಲಸ ಮಾಡಿದ್ದಾರೆ. ಇಬ್ಬರೂ ಪ್ರಾಚೀನ ಭಾರತದ ವಿಜ್ಞಾನ ಪರಂಪರೆ ವಿಷಯಗಳಲ್ಲಿ ಬಹಳ ಆಳವಾದ ಅಧ್ಯಯನ ಇದ್ದವರಾಗಿದ್ದು, ಇಬ್ಬರ ನಡುವೆ ಬಹಳಷ್ಟು ವಿಚಾರಗಳಲ್ಲಿ ಸಹಮತವಿದ್ದಿತು. ಭಾರತದ ಕೊಡುಗೆ-ಸಾಧನೆಗಳ ಬಗೆಗೆ ಅಭಿಮಾನ ಹೊಂದಿರುವಾಗಲೇ ಈ ವಿಷಯಗಳಲ್ಲಿ ಉತ್ಪ್ರೇಕ್ಷೆಗಳನ್ನು, ಭಾರತೀಯ ವಿಜ್ಞಾನದ ಹೆಸರಿನ ಹುಸಿ ವೈಭವೀಕರಣವನ್ನು ಇವರಿಬ್ಬರೂ ಸ್ಪಷ್ಟವಾಗಿ ವಿರೋಧಿಸುವವರಾಗಿದ್ದರು. ಈ ಮಾತಿಗೆ ಸಾಕ್ಷಿಯಾಗಿ ಕೆಲವು ಉದಾಹರಣೆಗಳನ್ನು ಗಮನಿಸಬಹುದು.

ಆರ್ಯಭಟನ ಮಹತ್ವದ ಕೊಡುಗೆ

ಕ್ರಿಸ್ತ ಶಕ 6ನೇ ಶತಮಾನದ ಖಗೋಳ ವಿಜ್ಞಾನಿ ಮತ್ತು ಗಣಿತಶಾಸ್ತ್ರಜ್ಞನಾದ ಆರ್ಯಭಟ 'ಭೂಮಿಯು ತನ್ನ ಅಕ್ಷದ ಮೇಲೆ ತಾನು ಸುತ್ತುತ್ತದೆ, ಗ್ರಹಣಗಳು ರಾಹು ಕೇತುಗಳಿಂದಲ್ಲ.. ಆಕಾಶಕಾಯಗಳ ನೆರಳಿನಿಂದ ಉಂಟಾಗುವುದು" ಎಂದಿರುವುದನ್ನು ಇಬ್ಬರು ಹೆಮ್ಮೆಯಿಂದ ಗುರುತಿಸಿದ್ದಾರೆ.



ಭಾರತೀಯ ಗಣಿತ ಮತ್ತು ತರ್ಕಶಾಸ್ತ್ರಗಳ ಹಿರಿಮೆ

ಗಣಿತದಲ್ಲಿ ಭಾರತೀಯರು ಪ್ರಾಚೀನ ಕಾಲದಲ್ಲಿಯೇ ಶ್ರೇಷ್ಠ ಸಾಧನೆಗಳನ್ನು ಮಾಡಿದ್ದರು ಎಂದು ರೊದ್ದಂ ನರಸಿಂಹ, ಪ್ರೊ. ಬಾಲಚಂದ್ರ ರಾವ್ ಇಬ್ಬರೂ ಪ್ರತಿಪಾದಿಸಿದ್ದಾರೆ. ಆದರೆ ಭಾರತೀಯ ತರ್ಕಶಾಸ್ತ್ರದ ಶ್ರೇಷ್ಠ ತರ್ಕಗಳನ್ನು ಭಾರತೀಯರು ಗಣಿತಕ್ಕೆ ಯಾಕೆ ಅನ್ವಯಿಸಲಿಲ್ಲ ಎಂಬ ಪ್ರಶ್ನೆಯನ್ನು ಬಾಲಚಂದ್ರರಾವ್ ಅವರು ಎತ್ತಿ, ಅದಕ್ಕೆ ಅವರೇ ಉತ್ತರವನ್ನೂ ಸಹ ನೀಡಿದ್ದಾರೆ.

ವೇದ ಉಪನಿಷತ್ತುಗಳ ಕಾಲದಲ್ಲಿ ವೈದಿಕರಿಗೆ ತರ್ಕದ ಅವಶ್ಯಕತೆ ಇರಲಿಲ್ಲ. ಅವರಿಗೆ ಶುಲ್ಬ ಸೂತ್ರವೇ ಸಾಕಾಗಿತ್ತು. ಬೌದ್ಧ ತತ್ವಜ್ಞಾನದ ಪ್ರಭಾವ ಜಾಸ್ತಿಯಾದ ಮೇಲೆ, ಬೌದ್ಧತತ್ವದ ಕಡೆಗೆ ವೈದಿಕ ಯುವಜನರ ಸೆಳೆತ ಕಾಣಿಸಿಕೊಳ್ಳತೊಡಗಿದ ನಂತರ ವೈದಿಕರು ತರ್ಕದಲ್ಲಿ ಸಾಮರ್ಥ್ಯವನ್ನು ಬೆಳೆಸಿಕೊಂಡರು. ಪ್ರಾಚೀನ ಭಾರತದ ಮೇಲೆ ಗ್ರೀಕರ ದಾಳಿಯಾಗಿ ಅವರು ಇಲ್ಲಿ ಆಳ್ವಿಕೆ ಮಾಡಿದ ಸಂದರ್ಭದಲ್ಲಿ ಭಾರತೀಯರು ಗ್ರೀಕರ 'ಯೂಕ್ಲಿಡ್'ನ ಗಣಿತವನ್ನು ಒಪ್ಪಿಕೊಳ್ಳಬಹುದಿತ್ತು. ವೈದಿಕರು ಗ್ರೀಕರ ವೈಜ್ಞಾನಿಕ ತಳಹದಿಯೇ ಇಲ್ಲದ ಮೌಢ್ಯಾಧಾರಿತ 'ಫಲಜೋತಿಷ್ಯಶಾಸ್ತ್ರ'ವನ್ನು ಅಪ್ಪಿಕೊಂಡರು. ಆದರೆ ಅದ್ಭುತವಾದ 'ಯೂಕ್ಲಿಡ'ನ ರೇಖಾಗಣಿತವನ್ನು ಒಪ್ಪಿಕೊಳ್ಳಲಿಲ್ಲ, ಕಡೆಗಣಿಸಿದರು ಎಂದು ಬಾಲಚಂದ್ರರಾವ್ ವಿವರಿಸಿದ್ದಾರೆ.


'ವೇದ ಪ್ರಮಾಣ' ನಿರಾಕರಿಸುವ ಧೀಮಂತಿಕೆ

ವೇದಗಳೇ ಎಲ್ಲ ಜ್ಞಾನದ ಮೂಲ, ವೇದ ಪ್ರಮಾಣವನ್ನು ಎಲ್ಲರೂ ಒಪ್ಪಬೇಕು ಎಂಬುದು ಪ್ರಾಚೀನ ಭಾರತದ ಬೌದ್ಧಿಕ ಕ್ಷೇತ್ರದಲ್ಲಿನ ಒಂದು ಬಲಾಢ್ಯವಾದ ಪ್ರವೃತ್ತಿ. ಇಂತಹ ಒತ್ತಡಗಳನ್ನು ನಿರಾಕರಿಸುವ ಧೀಮಂತಿಕೆಯೂ ಭಾರತೀಯ ಪರಂಪರೆಯಲ್ಲೇ ಇದೆ ಎಂದು ಬಾಲಚಂದ್ರರಾವ್ ಹೇಳುತ್ತಿದ್ದರು. "ವೇದಗಳು ಮನುಷ್ಯ ನಿರ್ಮಿತ, ಅವು ದಿವ್ಯಜ್ಞಾನವಾಗಲು ಸಾಧ್ಯವಿಲ್ಲ"(ಅಪೌರುಷೇಯಗಳಲ್ಲ) ಎಂಬುದು ಸಾಂಖ್ಯದ ಒಂದು ತತ್ವ ಎಂದು ಬಾಲಚಂದ್ರರಾವ್ ಮತ್ತು ರೊದ್ದಂ ಅವರು ವಿವರಿಸುತ್ತಿದ್ದರು.

"ಸಂಪ್ರದಾಯದಲ್ಲಿ (ಕುರುಡು) ನಂಬಿಕೆಯುಳ್ಳವರ ಮುಂದೆ ಸತ್ಯವಾದದ್ದನ್ನು ನಿಷ್ಠುರವಾಗಿ ಹೇಳಬೇಕಾಗುತ್ತದೆ. ಹಿಂದಿನವರ ಮಾತುಗಳನ್ನು ಪ್ರಶ್ನಿಸದೇ ಇರಲು ಮತ್ತು ತಪ್ಪಾದಲ್ಲಿ ಖಂಡಿಸದೇ ಇರಲು ಸಾಧ್ಯವಿಲ್ಲ." ಎಂಬ ಪ್ರಾಚೀನ ಭಾರತದ ವಿಜ್ಞಾನಿ ಭಾಸ್ಕರಾಚಾರ್ಯರ ಮಾತನ್ನು ಬಾಲಚಂದ್ರರಾವ್ ತಮ್ಮ ಧೋರಣೆಗೆ ಬೆಂಬಲವಾಗಿ ಉಲ್ಲೇಖಿಸುತ್ತಿದ್ದರು.

'ಪುಷ್ಪಕ ವಿಮಾನ'-ಬರೀ ಕಲ್ಪನೆ

2015ರಲ್ಲಿ ಮುಂಬೈನಲ್ಲಿ ನಡೆದ 102ನೇ ರಾಷ್ಟ್ರೀಯ ವಿಜ್ಞಾನ ಕಾಂಗ್ರೆಸ್‌ನಲ್ಲಿ ಪ್ರಾಚೀನ ಭಾರತದಲ್ಲಿ ಪುಷ್ಪಕ ವಿಮಾನ ಇತ್ತೆಂಬ ಕುರಿತು ವಾದಗಳನ್ನು ಮಂಡಿಸಲಾಗಿತ್ತು. ವಿಮಾನಗಳ ತಂತ್ರಜ್ಞಾನದ ಕುರಿತ ಪ್ರಾಚೀನ ಗ್ರಂಥ ಎಂದು ಹೇಳಲಾದ 'ವಿಮಾನಶಾಸ್ತ್ರ'ದ ಬಗೆಗೆ ಬಣ್ಣಿಸಲಾಗಿತ್ತು. ಸಮ್ಮೇಳನದಲ್ಲಿ ಪ್ರಧಾನಿ ಮೋದಿಯವರು ಮಾತನಾಡಿ, "ಗಣೇಶನಿಗೆ ಆನೆಯ ತಲೆಯನ್ನು ಜೋಡಿಸಿರುವ ಉದಾಹರಣೆಯು ಪ್ರಾಚೀನ ಭಾರತವು 'ಪ್ಲಾಸ್ಟಿಕ್ ಸರ್ಜರಿ'ಯಂತಹ ಶಸ್ತ್ರಕ್ರಿಯಾ ವಿಜ್ಞಾನದಲ್ಲಿ ಔನ್ನತ್ಯ ಸಾಧಿಸಿತ್ತು ಎಂಬುದಕ್ಕೆ ಸಾಕ್ಷಿ" ಎಂದಿದ್ದರು.



ಶ್ರೇಷ್ಠ ವಿಮಾನ ವಿಜ್ಞಾನಿ ರೊದ್ದಂ ಅವರು ಅದೇ ರಾಷ್ಟ್ರೀಯ ವಿಜ್ಞಾನ ಕಾಂಗ್ರೆಸ್‌ನಲ್ಲೇ 'ವಿಮಾನ ಶಾಸ್ತ್ರ' ಗ್ರಂಥದಲ್ಲಿ 'ವಿಮಾನ ವಿಜ್ಞಾನ' ಎಂಬುದು ಏನೂ ಇಲ್ಲ, ಅದು ಬರಿಯ ಕಲ್ಪನೆ ಎಂದು ಸಾರಿದರು, 'ಹುಸಿ ವಿಜ್ಞಾನ'ದ ವಿರುದ್ಧ ಸ್ಪಷ್ಟವಾದ ದನಿ ಎತ್ತಿದ್ದರು.


ಭಾರತೀಯ ವಿಜ್ಞಾನ ಸಂಸ್ಥೆ(ಐ.ಐ.ಎಸ್.ಸಿ.)ಯ ಏರೋನಾಟಿಕಲ್ ಇಂಜಿನೀಯರಿಂಗ್ ವಿಭಾಗದ ಪರಿಣತ ವಿಜ್ಞಾನಿಗಳ ತಂಡವು 'ವಿಮಾನ ಶಾಸ್ತ್ರ' ಎಂಬ ಪುಸ್ತಕದ ಬಗೆಗೆ ಅಧ್ಯಯನವನ್ನು ನಡೆಸಿ ವರದಿ ಸಲ್ಲಿಸಿದೆ. ಇದನ್ನು ಅಭ್ಯಾಸ ಮಾಡಿದ್ದ ಬಾಲಚಂದ್ರರಾವ್ 'ವಿಮಾನಶಾಸ್ತ್ರ' ಪುಸ್ತಕದಲ್ಲಿನ ಮಾದರಿಯಂತೆ ವಿಮಾನವನ್ನು ನಿರ್ಮಾಣ ಮಾಡಿದರೆ ಅದು ಮೇಲೆ ಆಕಾಶಕ್ಕೆ ಹೋಗುವ ಬದಲಿಗೆ 'ಭೂಮಿಯ ಒಳಕ್ಕೆ ಹೋಗುತ್ತದೆ' ಎಂದು ಹರಿತವಾದ ವ್ಯಂಗ್ಯ ಮಾಡುವುದಕ್ಕೂ ಹಿಂಜರಿಯುತ್ತಿರಲಿಲ್ಲ.

ಹರಿದ ಕಿವಿ, ಮೂಗು ಕೂಡಿಸಿ ಹೊಲೆಯುತ್ತಿದ್ದರು ಅಷ್ಟೇ..

ಪ್ರಾಚೀನ ವೈದ್ಯಕೀಯಶಾಸ್ತ್ರ ಗ್ರಂಥ 'ಸುಶ್ರುತ ಸಂಹಿತೆ'ಯು ಮನುಷ್ಯನ ದೇಹ ಛೇದನ ಮತ್ತು ಶಸ್ತ್ರ ಚಿಕಿತ್ಸಾ ವಿಧಾನವನ್ನು ವಿವರಿಸಿದೆ. 121 ಬಗೆಯ ಶಸ್ತ್ರ ಚಿಕಿತ್ಸಾ ಸಾಧನಗಳನ್ನು ಬಳಸಿ ನಡೆಸಬಹುದಾದ ಹತ್ತಾರು ಶಸ್ತ್ರ ಚಿಕಿತ್ಸೆಯ ವಿವರಗಳನ್ನು ನೀಡಿದೆ. ಇಷ್ಟಾದರೂ, ಯುದ್ಧಗಳು, ಸಂಘರ್ಷ, ಅಪಘಾತಗಳಲ್ಲಿ, ಮನುಷ್ಯನ ಕಿವಿ, ಮೂಗು ಇತ್ಯಾದಿ ಅಂಗಗಳು ಹರಿದಂತಹ ಸಂದರ್ಭಗಳಲ್ಲಿ, ಹರಿದ ಭಾಗವನ್ನು ಕೂಡಿಸಿ ಹೊಲೆಯಲಾಗುತ್ತಿತ್ತು ಎಂದು ಹೇಳಬಹುದೇ ಹೊರತು, ಮನುಷ್ಯನ ದೇಹಕ್ಕೆ ಆನೆಯ ತಲೆಯನ್ನು ಕೂಡಿಸುವ 'ಪ್ಲಾಸ್ಟಿಕ್ ಸರ್ಜರಿ ವಿಜ್ಞಾನ' ಗೊತ್ತಿತ್ತು ಎನ್ನುವುದು ವೈಜ್ಞಾನಿಕ ತಿಳುವಳಿಕೆಯಾಗುವುದಿಲ್ಲ ಎನ್ನುವುದು ಪ್ರೊ. ಬಾಲಚಂದ್ರ ರಾವ್ ಅವರ ಖಚಿತವಾದ ನಿಲುವಾಗಿತ್ತು.

ಆಯುರ್ವೇದ ಹೆಮ್ಮೆಯ ಕೊಡುಗೆ, ಆದರೆ..

'ಆಯುರ್ವೇದ'ವು ಜಗತ್ತಿಗೆ ಭಾರತೀಯರ ಹೆಮ್ಮೆಯ ಕೊಡುಗೆ. ಆದರೆ ಈ ಔಷಧ-ಚಿಕಿತ್ಸೆಯ ಬಗೆಗೆ ಆಧುನಿಕ ಜೀವರಸಾಯನ (Bio-chemisrty) ವಿಜ್ಞಾನದ ತಿಳುವಳಿಕೆಯ ಆಧಾರದಲ್ಲಿ ಈಗ ಪ್ರಯೋಗ-ಸಂಶೋಧನೆಗಳನ್ನು ನಡೆಸಿ ಪರಿಶೀಲಿಸಿ ಸೂಕ್ತವಾದವುಗಳನ್ನು ಒಪ್ಪಿಕೊಳ್ಳಬೇಕು, ಏಕೆಂದರೆ ಪ್ರಾಚೀನಕಾಲದಲ್ಲಿ 'ಜೀವ ರಸಾಯನ' ವಿಜ್ಞಾನ ಈಗಿನಂತೆ ಬೆಳೆದಿರಲಿಲ್ಲ ಎಂದು ರೊದ್ದಂ ಮತ್ತು ಬಾಲಚಂದ್ರರಾವ್ ಅವರು ಪ್ರತಿಪಾದಿಸುತ್ತಿದ್ದರು. ಬಾಲಚಂದ್ರ ರಾವ್‌ರವರ ವೈಚಾರಿಕ ನಿಲುವುಗಳನ್ನು ಎತ್ತಿ ಹಿಡಿಯೋಣ. ಅವರಿಗೆ ಅಂತಿಮ ನಮನಗಳು.



'ಸುಶ್ರುತ ಸಂಹಿತೆ'ಯಲ್ಲಿ ವಿವರಿಸಲಾಗಿರುವ 121 ಶಸ್ತ್ರಕ್ರಿಯಾ ಸಾಧನಗಳಲ್ಲಿ ಕೆಲವು. ಹಾಗೂ ಶಸ್ತ್ರ ಚಿಕಿತ್ಸೆ. (ಆಧಾರಗಳು: ಪ್ರಭೀರ್ ಪುರಕಾಯಸ್ಥರ 'ಪೀಪಲ್ಸ್ ಡೆಮಾಕ್ರಸಿ' ಲೇಖನ, ಡಾ.ಟಿ.ವಿ. ವೆಂಕಟೇಶ್ವರನ್, ಡಾ.ಎಸ್. ಚಟರ್ಜಿಯವರ ಲೇಖನಗಳು, ವಿಜ್ಞಾನ ಚಳುವಳಿಯ ಹಿರಿಯರ ಮಾಹಿತಿಗಳು, 'ವಿಕಿಪೀಡಿಯಾ', ಇತರೆ ಮೂಲಗಳು.)



ಕದನ ವಿರಾಮದ ಹಿಂದೆ: ಉತ್ತರ ಸಿಗದ ಪ್ರಶ್ನೆಗಳು

ಪ್ರಕಾಶ್ ಕಾರತ್

> **ವಿರೋಧ ಪಕ್ಷಗಳಿಂದ ಬೆಂಬಲ ಇರುವಾಗಲೂ ಸರಕಾರ ಸಂಸತ್ತನ್ನು ಎದುರಿಸಲು, ಮತ್ತು ಒಂದು ಕಾರ್ಯನಿರತ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎತ್ತುವ ಮತ್ತು ಎತ್ತಬೇಕಾದ ಪ್ರಶ್ನೆಗಳನ್ನು ಎದುರಿಸಲು ಹಿಂದೇಟು ಹಾಕುತ್ತಿದೆ. ವಿದೇಶಾಂಗ ಕಾರ್ಯದರ್ಶಿ ಮತ್ತು ಸಶಸ್ತ್ರ ಪಡೆಗಳ ಪ್ರತಿನಿಧಿಗಳು ಭಾರತ ಒಂದು ಜಾತ್ಯತೀತ ದೇಶ ಮತ್ತು ಕಾರ್ಯನಿರತ' ಪ್ರಜಾಪ್ರಭುತ್ವವಾಗಿದೆ ಎಂದು ವಿವರಿಸಲು ಶ್ರಮಿಸಿದರು. ಆದ್ದರಿಂದ, ತಮ್ಮ 'ನಾಯಕ'ರನ್ನು ಪ್ರಶ್ನಿಸಲಾಗದ ಅವರ ಅನುಯಾಯಿಗಳು ವಿದೇಶಾಂಗ ಕಾರ್ಯದರ್ಶಿಯವರನ್ನು ಗುರಿಯಾಗಿಸುತ್ತಿರುವುದರಲ್ಲಿ ಅಚ್ಚರಿಯೇನಿಲ್ಲ. ಸರ್ಕಾರದ ಮುಂದಿರುವ ಏಕೈಕ ಮಾರ್ಗವೆಂದರೆ ನಡೆದಿರುವ ವಿಷಯಗಳನ್ನು ಮುಚ್ಚುಮರೆಯಿಲ್ಲದೆ ಪ್ರಸ್ತುತಪಡಿಸುವುದು. ಎಂದಿನ ಕಟ್ಟುಕಥೆಗಳು ಮತ್ತು ಭಾವಾವೇಶದ ಮಾತುಗಳು, ಸಂಸತ್ತಿನಲ್ಲಿ ನಡೆಯುವ ವಿಷಯವಾರು ಚರ್ಚೆಗೆ ಪರ್ಯಾಯವಾಗಲಾರವು. ಒಂದು ಕಾರ್ಯನಿರತ ಪ್ರಜಾಪ್ರಭುತ್ವದಲ್ಲಿ ಇಂತಹ ಚರ್ಚೆ ನಡೆಸುವುದು ಕನಿಷ್ಠ ಅವಶ್ಯಕತೆಯಾಗಿದೆ.**

ಭಾರತ ಮತ್ತು ಪಾಕಿಸ್ತಾನ ಗಡಿಯ ಎರಡೂ ಬದಿಗಳಲ್ಲಿರುವ ಜನರು ನಿಟ್ಟುಸಿರು ಬಿಟ್ಟರು. ಎರಡು ದೇಶಗಳ ನಡುವೆ ನಾಲ್ಕು ದಿನಗಳ ಕಾಲ ನಡೆದ ಮಿಲಿಟರಿ ಮುಖಾಮುಖಿ ಮೇ 10 ರ ಮಧ್ಯಾಹ್ನ ಕೊನೆಗೊಂಡಿತು. ಆದರೂ, ರಾತ್ರಿಯಾದ ನಂತರವೂ ಗುಂಡಿನ ಸದ್ದು ಕೇಳಿಬರುತ್ತಿತ್ತು. ಆದರೆ ನಂತರ ಎರಡೂ ದೇಶಗಳ ಡಿಜಿಎಂಒ(ಮಿಲಿಟರಿ ಕಾರ್ಯಾಚರಣೆಗಳ ಮಹಾನಿರ್ದೇಶಕರು)ಗಳು ಕದನ ವಿರಾಮ ಮುಂದುವರಿದಿದೆ ಎಂದು ದೃಢೀಕರಿಸಿದರು. ಯುದ್ಧದ ಕಾರ್ಮೋಡಗಳು ಸದ್ಯಕ್ಕೆ ಚದುರಿವೆ.

ಆದಾಗ್ಯೂ, ಈ ಮೂರು ವಾರಗಳು ದಕ್ಷಿಣ ಏಷ್ಯಾದಲ್ಲಿ ನಾಟಕೀಯವಾದ ಬೆಳವಣಿಗೆಗಳ ಒಂದು ಸರಣಿಯನ್ನು ಅನಾವರಣಗೊಳಿಸಿ ಒಂದು ವಿನಾಶಕಾರಿ ವಿಧಾನದ ಮೇಲ ಬೆಳಕು ಚೆಲ್ಲಿದೆ. 26 ಅಮಾಯಕರ ಜೀವಗಳನ್ನು ಬಲಿತೆಗೆದುಕೊಂಡ ಅಮಾನುಷ ಹತ್ಯಾಕಾಂಡದೊಂದಿಗೆ ಈ ಘಟನೆಗಳ ಸರಣಿಯು ಪ್ರಾರಂಭವಾಯಿತು. ಅಮಾಯಕರಾದ ಪ್ರವಾಸಿಗರನ್ನು ರಕ್ಷಿಸಲು ತನ್ನ ಪ್ರಾಣವನ್ನೇ ತ್ಯಾಗ ಮಾಡಿದ ಸ್ಥಳೀಯ ಕಾಶ್ಮೀರಿ ಕುದುರೆ–ಸವಾರಿ ನಿರ್ವಾಹಕನೂ ಇವರಲ್ಲಿ ಒಬ್ಬ. ಪ್ರವಾಸಿಗರನ್ನು ಗುರಿಯಾಗಿಸಿಕೊಂಡು ಅವರ ಧಾರ್ಮಿಕ ನಂಬಿಕೆಗಳ ಆಧಾರದ ಮೇಲೆ ಅವರನ್ನು ಆಯ್ಕೆ ಮಾಡುವ ಮೂಲಕ ಭಯೋತ್ಪಾದಕರು ಈ ಹತ್ಯಾಕಾಂಡವನ್ನು ಮಾಡಿದ್ದಾರೆ ಎಂಬುದು ಸ್ಪಷ್ಟವಾಗಿದೆ. ಸೇನೆ ಬಿಡುಗಡೆ ಮಾಡಿರುವ ಪುರಾವೆಗಳು ಲಷ್ಕರ್–ಎ–ತೈಬಾ (ಎಲ್‌ಇಟಿ) ಇದರಲ್ಲಿ ಭಾಗಿಯಾಗಿರುವುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಅವರು ಹಂತಕರೊಂದಿಗೆ ದೂರವಾಣಿ ಸಂಪರ್ಕದಲ್ಲಿದ್ದರು. ನಂತರದ ಮಿಲಿಟರಿ ಮುಖಾಮುಖಿಯಲ್ಲಿ, ಪಾಕಿಸ್ತಾನಿ ಆಳುವ ವ್ಯವಸ್ಥೆ ಮಿಲಿಟರಿ ಕಾರ್ಯಾಚರಣೆಯಲ್ಲಿ ಹತರಾದ ಭಯೋತ್ಪಾದಕರನ್ನು ಗೌರವಿಸುವ ಚಿತ್ರಗಳು ಅದನ್ನು ದೃಢಪಡಿಸಿದವು.

ಈ ವಾಸ್ತವ ಬಯಲಾದ ನಂತರ, ದಂಡನಾತ್ಮಕ ಕ್ರಮವನ್ನು ಪ್ರಾರಂಭಿಸುವುದನ್ನು ಬಿಟ್ಟು ಬೇರೆ ದಾರಿಯೇ ಇರಲಿಲ್ಲ. ನ್ಯಾಯವಾಗಿಯೇ ಬಹಳ ಆಕ್ರೋಶಗೊಂಡ ಜನರ ಗಮನಾರ್ಹ ಒಗ್ಗಟ್ಟು ವ್ಯಾಪಕವಾಗಿ ಕಾಣಬಂತು. ದೇಶದ ರಾಜಕೀಯ ಪಕ್ಷಗಳು ಭಯೋತ್ಪಾದನಾ–ವಿರೋಧಿ ಕಾರ್ಯಾಚರಣೆಗೆ ಸರ್ಕಾರಕ್ಕೆ ಬೆಂಬಲವನ್ನು ನೀಡಿದವು. ಅದೇ ಸಮಯದಲ್ಲಿ, ಅಂತಹ ಕಾರ್ಯಾಚರಣೆಗಳನ್ನು ಭಯೋತ್ಪಾದಕರ ವಿರುದ್ಧ ನಿರ್ದೇಶಿಸಬೇಕೇ ಹೊರತು ಪೂರ್ಣ ಪ್ರಮಾಣದ ಯುದ್ಧವಾಗಬಾರದು ಎಂದು ಸುಸ್ಪಷ್ಟಪಡಿಸಲಾಯಿತು.

ದ್ವೇಷ–ಅಭಿಯಾನ

ಈ ಸಮಯದಲ್ಲಿಯೇ ಪ್ರಾರಂಭವಾಯಿತು ಒಂದು ಜುಗುಪ್ಸೆ ಉಂಟುಮಾಡುವ ದ್ವೇಷ ಅಭಿಯಾನ– ನಿರ್ದಿಷ್ಟವಾಗಿ ಕಾಶ್ಮೀರಿಗಳ ವಿರುದ್ಧ, ಒಟ್ಟಾರೆಯಾಗಿ ಮುಸ್ಲಿಮರ ವಿರುದ್ಧ. ಬಹುಕಾಲ ಪೋಷಿಸಿಕೊಂಡು ಬಂದ ದ್ವೇಷದ ಮೂಲರಚನೆ ಸಕ್ರಿಯಗೊಂಡಿತು. ದಾಳಿಯು ಮುಸ್ಲಿಮರನ್ನು ಗುರಿಯಾಗಿಸಿಕೊಂಡು, ಅಷ್ಟೇ ಅಲ್ಲ, ಪೂರ್ಣ ಯುದ್ಧದ ವಿರುದ್ಧ ಮಾತನಾಡಿದ ಯಾರನ್ನಾದರೂ ಗುರಿಯಾಗಿಸಿಕೊಂಡು ಪ್ರಾರಂಭವಾಯಿತು. ಹಾಗೆ ನೋಡಿದರೆ, ಇಂತಹದ್ದೊಂದು ಸಂಭವ ಸೂಕ್ತ ಸಮಯಕ್ಕೆ ಕಾದುಕೊಂಡಂತಿತ್ತು.

ಸಮಾಧಾನದ ಸಂಗತಿಯೆಂದರೆ, ಸಶಸ್ತ್ರ ಪಡೆಗಳು ತಮ್ಮ ಗುರಿ ಭಯೋತ್ಪಾದನೆಯ ಮೂಲಸೌಕರ್ಯವನ್ನು ಕಳಚಿ ಹಾಕುವುದೇ ಹೊರತು, ಪಾಕಿಸ್ತಾನದ ಜನರು ಅಥವಾ ಆಡಳಿತದ ಮೇಲಿನ ದಾಳಿಯಲ್ಲ ಎಂಬುದನ್ನು ಒತ್ತಿ ಹೇಳುವ ರೀತಿಯಲ್ಲಿ ವರ್ತಿಸಿದವು. ಅದಕ್ಕಾಗಿಯೇ ಸಶಸ್ತ್ರ ಪಡೆಗಳ ಪ್ರತಿನಿಧಿಗಳು ಮಾಧ್ಯಮಗಳಿಗೆ ಮಾಹಿತಿಗಳನ್ನು ವೃತ್ತಿಪರತೆಯಿಂದ ಈ ಗುರಿಯ ಮೇಲೆ ಒತ್ತು ನೀಡುತ್ತ ನೀಡುತ್ತಿದ್ದರು. ಸಹಜವಾಗಿಯೇ ಇದರಿಂದ ದ್ವೇಷ ಪ್ರಚಾರಕರು ಕೋಪಗೊಂಡರು. ಈ ದ್ವೇಷಪೂರಿತ ಕೃತ್ಯಗಳ ಬಗ್ಗೆ ಸರ್ಕಾರವನ್ನು ನಡೆಸುವ ರಾಜಕೀಯ ನಾಯಕತ್ವದ ಅನಿಷ್ಟಕಾರಿ ಮೌನ ಕೂಡ ಸ್ಪಷ್ಟಗೊಂಡಿತ್ತು.

ಗಡಿಯ ಎರಡೂ ಬದಿಗಳಲ್ಲಿರುವ ಜನರು ಮಿಲಿಟರಿ ಮುಖಾಮುಖಿ ಕೊನೆಗೊಳ್ಳಲಿ ಎಂದು ಹಾರೈಸುತ್ತಿದ್ದರು. ಗಡಿ ಸಮೀಪದ ಸ್ಥಳಗಳಲ್ಲಿ ಬದುಕುತ್ತಿರುವವರು,ಜನಸಾಮಾನ್ಯರು ಸಂಕಷ್ಟಗಳಿಗೆ ಈಡಾಗುತ್ತಿದ್ದಾರೆ ಎಂಬುದು ಸ್ಪಷ್ಟವಾಗಿತ್ತು. ಪೂಂಚ್ ಮತ್ತು ರಜೌರಿ ಪ್ರದೇಶಗಳಲ್ಲಿ ಜನರು ಇದರಿಂದ ಕಂಗಾಲಾಗಿದ್ದರು. ವಿದ್ಯಾರ್ಥಿಗಳು ಮತ್ತು ವಲಸೆ ಕಾರ್ಮಿಕರು ಅತಿ ಹೆಚ್ಚು ತೊಂದರೆ ಅನುಭವಿಸಿದರು. ಅಂತಿಮವಾಗಿ ಪರಿಸ್ಥಿತಿ ಕೈ ಮೀರುವ ಮುನ್ನವೇ ಕದನ ವಿರಾಮವನ್ನು ಜಾರಿಗೆ ತರಬೇಕಾಗಿತ್ತು.

ನಿಜವಾದ ರಹಸ್ಯ ಬಯಲಾಗಿದ್ದು ಇದೇ ಕ್ಷಣದಲ್ಲಿ. ಯಾವುದೇ ಅಧಿಕೃತ ಘೋಷಣೆಯ ಮೊದಲೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಆಡಳಿತದ ಮಧ್ಯಸ್ಥಿಕೆಯಲ್ಲಿ ಎರಡೂ ಕಡೆಯವರು ಕದನ ವಿರಾಮಕ್ಕೆ ಒಪ್ಪಿಕೊಂಡಿದ್ದಾರೆ ಎಂದು ಟ್ವೀಟ್ ಮಾಡಿದರು. ಇದು ಭಾರತ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿತು, ವಿಶೇಷವಾಗಿ ಪ್ರಧಾನಿ ನರೇಂದ್ರ ಮೋದಿ ಎರಡು ಬಾರಿ ನಡೆದ ಸರ್ವಪಕ್ಷ ಸಭೆಗಳಿಗೆ ಹಾಜರಾಗದಿರುವ ಹಿನ್ನೆಲೆಯಲ್ಲಿ. ಅಧಿಕೃತ ಕಥನ ಮನವರಿಕೆಯಾಗುವಂತೆ ಇಲ್ಲ ಎಂಬುದು ಸ್ಪಷ್ಟ.

ಪ್ರಧಾನಿ ಮೌನ

ಈ ಹಿನ್ನೆಲೆಯಲ್ಲಿ, ಈ ಸಂಪೂರ್ಣ ಬೆಳವಣಿಗೆಯನ್ನು ಚರ್ಚಿಸಲು ಸಂಸತ್ತಿನ ವಿಶೇಷ ಅಧಿವೇಶನವನ್ನು ಕರೆಯಲು ಪ್ರತಿಪಕ್ಷಗಳ ಸಾಮೂಹಿಕ ಆಗ್ರಹ ಹೊಮ್ಮಿ ಬಂತು. ಸರ್ಕಾರ ತನ್ನನ್ನು ರಕ್ಷಿಸಿಕೊಳ್ಳಬೇಕಾಗಿತ್ತು. ಸಂಸತ್ ಭವನದ ಮೆಟ್ಟಿಲುಗಳಿಗೆ ನಮಸ್ಕರಿಸಿ, ಅದನ್ನು 'ಪ್ರಜಾಪ್ರಭುತ್ವದ ದೇಗುಲ' ಎಂದು ಬಣ್ಣಿಸಿ, ತಮ್ಮ ವಿನಮ್ರ ನಿಷ್ಠೆಯನ್ನು ಘೋಷಿಸುವ ಮೂಲಕ ಪ್ರಧಾನಿಯಾಗಿ ತಮ್ಮ ಪ್ರಯಾಣವನ್ನು ಆರಂಭಿಸಿದ ನರೇಂದ್ರ ಮೋದಿ ಈಗ ಮೌನಕ್ಕೆ ಸರಿದರು. ಈ ಪಲ್ಲಟ ಏಕೆ ಎಂಬುದನ್ನು ಅರ್ಥಮಾಡಿಕೊಳ್ಳಲು ನಾವು ಕಳೆದ ಹತ್ತು ವರ್ಷಗಳ ಸಂಪೂರ್ಣ ಇತಿಹಾಸವನ್ನು ಪರಿಶೀಲಿಸಬೇಕಾಗಿಲ್ಲ. ಆದರೆ, ಸಂಸತ್ತಿನ ಅಧಿವೇಶನವನ್ನು ಕರೆಯುವುದು ಅನಿವಾರ್ಯ ಎಂಬುದಂತೂ ಎದ್ದು ಕಾಣುತ್ತದೆ. ಟ್ರಂಪ್‌ರ ಸಾಮ್ರಾಜ್ಯಶಾಹಿ ಘೋಷಣೆಯು ಮೋದಿಯವರ ಭಾವ–ಭಂಗಿಗಳನ್ನು ಛಿದ್ರಗೊಳಿಸಿತು.

ಏನೇ ಆಗಲಿ, ಸರ್ಕಾರ ಕ್ರಮ ಕೈಗೊಳ್ಳಲೇ ಬೇಕಿತ್ತು. ಆದರೆ ವಿರೋಧ ಪಕ್ಷಗಳಿಂದ ಬೆಂಬಲ ಇರುವಾಗಲೂ ಸರಕಾರ ಸಂಸತ್ತನ್ನು ಎದುರಿಸಲು, ಮತ್ತು ಒಂದು ಕಾರ್ಯನಿರತ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎತ್ತುವ ಮತ್ತು ಎತ್ತಬೇಕಾದ ಪ್ರಶ್ನೆಗಳನ್ನು ಎದುರಿಸಲು ಹಿಂದೇಟು ಹಾಕುತ್ತಿದೆ.

ಸಂಭಾವ್ಯ ಮುಜುಗರವನ್ನು ತಪ್ಪಿಸಲು, ಪ್ರಧಾನಿಯವರು ಸಂಸತ್ತನ್ನು ಬದಿಗೊತ್ತುವುದೇ ವಾಸಿ ಎಂದು ಬಗೆದರು, ಮತ್ತು ನೇರವಾಗಿ ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡುವ ಮಾರ್ಗವನ್ನು ಆಯ್ಕೆ ಮಾಡಿಕೊಂಡರು. ಆದರೆ ಪ್ರಧಾನಿಯವರು ತಮ್ಮ ನಿಕಟ ಸ್ನೇಹಿತ ಎಂದು ಘಂಟಾಘೋಷವಾಗಿ ಸಾರಿರುವ ಡೊನಾಲ್ಡ್ ಟ್ರಂಪ್‌ರಿಂದ ಮುಂದಿನ ನಿರ್ಣಾಯಕ ಆಘಾತ ಬಂದಿತು. ಭಾರತ ಮತ್ತು ಪಾಕಿಸ್ತಾನದ ಸರಕಾರಗಳು ಮಿಲಿಟರಿ ತಿಕ್ಕಾಟಗಳನ್ನು ಕೈಬಿಡಲು ಒಪ್ಪುವ ಬಲವಂತಕ್ಕೆ ಒಳಗಾದ ಘಟನಾ ಸರಣಿಯನ್ನು ಅವರು ಬಿಚ್ಚಿಟ್ಟರು. ಟ್ರಂಪ್‌ರವರ ಈ ಎರಡು ಮಧ್ಯಪ್ರವೇಶಗಳು ಒತ್ತಡವನ್ನು ಎದುರಿಸಲಾರದ ಸರ್ಕಾರದ ಅಸಮರ್ಥತೆಯನ್ನುಬಹಿರಂಗಪಡಿಸಿದವು. ಒಂದು ಬಿಲಿಯನ್ ಡಾಲರ್ ಸಾಲ ನೀಡಬೇಕೆಂಬ ಪಾಕಿಸ್ತಾನದ ವಿನಂತಿಯನ್ನು ತ್ವರಿತವಾಗಿ ಸ್ವೀಕರಿಸುವ ಮೂಲಕ ಪಾಕಿಸ್ತಾನಿ ಆಡಳಿತವನ್ನು ಆಶೀರ್ವದಿಸಲಾಯಿತು. ಪಾಕಿಸ್ತಾನದಲ್ಲಿ ಆಡಳಿತದಲ್ಲಿ ಅಲ್ಲಿನ ಸಶಸ್ತ್ರ ಪಡೆಗಳೇ ಪ್ರಬಲ ಪಾತ್ರ ವಹಿಸುತ್ತಿರುವಾಗ ಈ ಹಣ ಯಾರ ಕೈಗಳಿಗೆ ಹೋಗುತ್ತದೆ ಎಂಬುದನ್ನು ಯಾರಾದರೂ ಊಹಿಸಬಹುದು.

ದುರಂತವೆಂದರೆ, ಮಿಲಿಟರಿ ಕಾರ್ಯಾಚರಣೆಯಲ್ಲದೆ, ರಾಜತಾಂತ್ರಿಕ ಸಂಪರ್ಕದಂತಹ ಇತರ ಮಾರ್ಗಗಳನ್ನು ಅನ್ವೇಷಿಸಬೇಕು ಎಂಬ ವಿರೋಧ ಪಕ್ಷಗಳ ಸೂಚನೆಯನ್ನು ನಿರ್ಲಕ್ಷಿಸಲಾಯಿತು. ಈ ಸಲಹೆಯನ್ನು ನಿರ್ಲಕ್ಷಿಸಿದ ಪರಿಣಾಮ ಏನೆಂಬುದು ಈಗ ಎಲ್ಲರಿಗೂ ಸ್ಪಷ್ಟವಾಗಿದೆ. 25 ಸದಸ್ಯರ ಐಎಂಎಫ್ ಕಾರ್ಯಕಾರಿ ಮಂಡಳಿಯಲ್ಲಿ ಮತದಾನದಿಂದ ದೂರ ಉಳಿದ ಏಕೈಕ ಸದಸ್ಯ ಭಾರತ. ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದಕ ಕೃತ್ಯದ ಪುರಾವೆಗಳಿದ್ದರೂ, ಪಾಕಿಸ್ತಾನಕ್ಕೆ ಸಾಲ ಸರ್ವಾನುಮತದಿಂದ ಸಿಕ್ಕಿತು.

ಮೋದಿ ಭಾಷಣದ ಮೊದಲು ಟ್ರಂಪ್ ಉದ್ಗಾರ

ಪ್ರಧಾನಿಯವರ ರಾಷ್ಟ್ರವನ್ನುದ್ದೇಶಿಸಿ ಮಾಡುವ ಭಾಷಣಕ್ಕೆ ಕೆಲವೇ ಗಂಟೆಗಳ ಮೊದಲು ಟ್ರಂಪ್ ಇಂತಹ ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸಿದರು. ಇಲ್ಲಿ ಯಾವುದೇ ಊಹೆಗೆ ಅವರು ಅವಕಾಶವನ್ನೇ ನೀಡಲಿಲ್ಲ, ಎರಡು ನೆರೆಹೊರೆಯ ದೇಶದವರನ್ನು ಮಣಿಯುವಂತೆ ಬಲವಂತ ಪಡಿಸಲು ಹೇಗೆ ಹಣಕಾಸು ಮತ್ತು ವ್ಯಾಪಾರದ ವಿಷಯಗಳನ್ನು ಅಮೆರಿಕವು ಬಳಸಿತು ಎಂದು ಅವರು ಹೇಳಿದರು.


ಹೀಗೆ ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಭಾರತೀಯರ ಸಾವು ನೋವುಗಳ ಬಗ್ಗೆ ಯಾವುದೇ ಉಲ್ಲೇಖವಿಲ್ಲ, ಪಹಲ್ಗಾಮ್ ದಾಳಿಯ ಅಪರಾಧಿಗಳನ್ನು ಹಸ್ತಾಂತರಿಸಬೇಕೆಂಬ ಬೇಡಿಕೆಯೂ ಇಲ್ಲ, ಸಾಮಾನ್ಯ ಭಾರತೀಯ ನಾಗರಿಕರು ಎದುರಿಸುತ್ತಿರುವ ತೀವ್ರ ಒತ್ತಡದ ಬಗ್ಗೆಯಂತೂ ಏನೂ ಇಲ್ಲ. ಇದೆಲ್ಲ ನಮ್ಮ ಶೋಚನೀಯ ಸ್ಥಿತಿಯನ್ನು ಬಿಂಬಿಸಿತಷ್ಟೇ.

ವಿದೇಶಾಂಗ ಕಾರ್ಯದರ್ಶಿ ಮುಚ್ಚುಮರೆಯಿಲ್ಲದೆ ಒಪ್ಪಿಕೊಂಡಂತೆ, ಭಯೋತ್ಪಾದಕರು ಕೋಮು ಧ್ರುವೀಕರಣವನ್ನು ಪ್ರಚೋದಿಸಲು ಸಕ್ರಿಯವಾಗಿ ಪ್ರಯತ್ನಿಸುತ್ತಿರುವುದರಿಂದ, ದ್ವೇಷದ ವಿರುದ್ಧದ ಸಮರವು ಭಯೋತ್ಪಾದನೆಯ ವಿರುದ್ಧದ ವಿಶಾಲ ಹೋರಾಟದ ಅವಿಭಾಜ್ಯ ಅಂಗವಾಗುವುದು ಅತ್ಯಗತ್ಯವಾಗಿತ್ತು. ಆದರೆ ದುರದೃಷ್ಟವಶಾತ್, ಹಿಂದುತ್ವ ಬ್ರಿಗೇಡ್‌ನ ದ್ವೇಷದ ಮೂಲರಚನೆ ತನ್ನ ರಕ್ತದಾಹವನ್ನು ತೀರಿಸಿಕೊಳ್ಳಲು ಹವಣಿಸುತ್ತಿತ್ತು. ಈ ಬ್ರಿಗೇಡಿನವರು ಈ ಫಲಿತಾಂಶವನ್ನು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ, ಅವರ ಕೋಪವು ಸ್ಪಷ್ಟವಾಗಿ ಕಾಣುತ್ತಿತ್ತು. ಮೇ 8ರ ಸಂಜೆ ಅವರು ವೀರಾವೇಶದಿಂದ ಕೂಗಾಡಿದರು, ಮುಖ್ಯವಾಹಿನಿಯ ಮಾಧ್ಯಮ ವಿಭಾಗಗಳು ಸಹ ಶುದ್ಧ ಸುಳ್ಳು ಕತೆಗಳನ್ನು ಕಟ್ಟಿ ಕೈಜೋಡಿಸಿದವು ಸಾಮಾಜಿಕ ಮಾಧ್ಯಮಗಳ ದ್ವೇಷಕೋರರು ಇದನ್ನು ಇನ್ನಷ್ಟು ವಿಸ್ತರಿಸುತ್ತ ಪಾಕಿಸ್ತಾನ ಎಂತಹ ವಿನಾಶಲೀಲೆಗೆ ಈಡಾಗಿದೆ ಎಂದು ಬಿಂಬಿಸಲು ಕತೆಗಳನ್ನು ಹರಡಿದರು.

ಇದು ದೇಶದ ಹಿತಾಸಕ್ತಿಗಳಿಗೆ ಹಾನಿ ಮಾಡಿದೆ. ಈ ಮೂಲಕ ಪುಟ 11 ಕ್ಕೆ



ವ್ಯಂಗ್ಯಚಿತ್ರ: ಸತೀಶ ಆಚಾರ್ಯ@ ಫೇಸ್‌ಬುಕ್



ಚನ್ನರಾಯಪಟ್ಟಣ ರೈತರ ಭೂಮಿ ಹೋರಾಟ: ಮುಂದೇನು?

ತಮ್ಮ ಫಲವತ್ತಾದ 1777 ಎಕರೆ ಕೃಷಿ ಭೂಮಿ ಉಳಿವಿಗಾಗಿ ಕಳೆದ ಮೂರೂವರೆ ವರ್ಷಗಳಿಂದ ದೇವನಹಳ್ಳಿ ತಾಲೂಕಿನ, ಚನ್ನರಾಯಪಟ್ಟಣ ಹೋಬಳಿಯ ನಾಡಕಛೇರಿ ಮುಂಭಾಗ ಪಟ್ಟು ಹಿಡಿದು ಕುಳಿತಿರುವ 13 ಹಳ್ಳಿಗಳ ರೈತರು ಸರ್ಕಾರಕ್ಕೆ ಎಸೆಯದ ಸವಾಲುಗಳಿಲ್ಲ, ಅವರು ತೋರದ ಪ್ರತಿರೋಧಗಳಿಲ್ಲ. ಮಂತ್ರಿಗಳಿಗೆ ಕಂಡ ಕಂಡಲ್ಲಿ ಘೇರಾವ್ ಹಾಕುವುದರಿಂದ ಹಿಡಿದು, ದೇವನಹಳ್ಳಿಯನ್ನು ಬಂದ್ ಮಾಡುವವರೆಗೆ,... ಇದೆಲ್ಲದರ ನಡುವೆ ಈಗ ಸರ್ಕಾರ ಸರ್ಕಾರ 13 ಹಳ್ಳಿಗಳ ಪೈಕಿ 10 ಹಳ್ಳಿಗಳ 1280 ಎಕರೆಗೆ ಅಂತಿಮ ಅಧಿಸೂಚನೆ ಹೊರಡಿಸಿದೆ. ಈ ಸಂದರ್ಭದಲ್ಲಿ ರೈತರ ಮುಂದಿರುವ ಆಯ್ಕೆಗಳೇನು, ಇದನ್ನು ಹೇಗೆ ನಿಭಾಯಿಸಬೇಕು ಅನ್ನೋದನ್ನ ಯೋಚಿಸುವ ಸಮಯ ಇದು.



ರಮೇಶ್ ಚೀಮಾಚನಹಳ್ಳಿ

ಚನ್ನರಾಯಪಟ್ಟಣ ಭೂಸ್ವಾಧೀನ ವಿರೋಧಿ ಹೋರಾಟ ಕೊನೆಯ ಘಟ್ಟಕ್ಕೆ ಬಂದು ನಿಂತಿದೆ. ಸರ್ಕಾರ 13 ಹಳ್ಳಿಗಳ ಪೈಕಿ 10 ಹಳ್ಳಿಗಳ 1280 ಎಕರೆಗೆ ಅಂತಿಮ ಅಧಿಸೂಚನೆ ಹೊರಡಿಸಿದೆ. ಮೂರುವರೆ ವರ್ಷಗಳಿಂದ ಎದೆಯಲ್ಲಿ ಭರವಸೆ ಒತ್ತು, ಉಸಿರು ಬಿಗಿಹಿಡಿದು ಕಾಯುತ್ತಿದ್ದ ಅಲ್ಲಿನ ರೈತ ಸಮುದಾಯ ಈ ವಿಷಯ ತಿಳಿದ ದಿನದಿಂದ ದಿಕ್ಕು ತೋಚದೆ ಸ್ತಬ್ಧವಾಗಿ ನಿಂತುಬಿಟ್ಟಿದೆ.

ಕರ್ನಾಟಕದ ನೆಲದಲ್ಲಿ ನಡೆಯುತ್ತಿರುವ ಈ ಸುದೀರ್ಘ ಹೋರಾಟದ ಬಗ್ಗೆ ಹೊಸದಾಗಿ ಹೇಳಬೇಕಿಲ್ಲ. ಕಳೆದ ಮೂರೂವರೆ ವರ್ಷಗಳಿಂದ ತಮ್ಮ ಫಲವತ್ತಾದ 1777 ಎಕರೆ ಕೃಷಿ ಭೂಮಿ ಉಳಿವಿಗಾಗಿ ದೇವನಹಳ್ಳಿ ತಾಲೂಕಿನ, ಚನ್ನರಾಯಪಟ್ಟಣ ಹೋಬಳಿಯ ನಾಡಕಛೇರಿ ಮುಂಭಾಗ ಪಟ್ಟು ಹಿಡಿದು ಕುಳಿತಿರುವ 13 ಹಳ್ಳಿಗಳ ರೈತರು ಸರ್ಕಾರಕ್ಕೆ ಎಸೆಯದ ಸವಾಲುಗಳಿಲ್ಲ, ಅವರು ತೋರದ ಪ್ರತಿರೋಧಗಳಿಲ್ಲ. ಮಂತ್ರಿಗಳಿಗೆ ಕಂಡಕಂಡಲ್ಲಿ ಘೇರಾವ್ ಹಾಕುವುದರಿಂದ ಹಿಡಿದು, ದೇವನಹಳ್ಳಿಯನ್ನು ಬಂದ್ ಮಾಡುವವರೆಗೆ, ಕಾಲ್ನಡಿಗೆ ಜಾಥಾದಿಂದ ಟ್ರಾಕ್ಟರ್ ರ್ಯಾಲಿಯವರೆಗೆ, ಮಂತ್ರಿಗಳ ಭಾಷಣಕ್ಕೆ ಅಡ್ಡಿಪಡಿಸುವುದರಿಂದ ಹಿಡಿದು ಚುನಾವಣಾ ಬಹಿಷ್ಕಾರದವರೆಗೆ ಎಲ್ಲವನ್ನು ಮಾಡಿ ಮುಗಿಸಿದ್ದಾರೆ. ರಾಜ್ಯದ ಎಲ್ಲ ಪ್ರಗತಿಪರ ಸಂಘಟನೆಗಳು, ಕೆಂಪು, ಹಸಿರು, ನೀಲಿ ಎಲ್ಲ ಬಣ್ಣದ ಬಾವುಟಗಳು ಜೊತೆಯಾಗಿವೆ. ಆ ಸಂಘಟನೆಗಳ ನಾಯಕರುಗಳು ಹೋರಾಟಕ್ಕೆ ಬಂದು ಜೊತೆಯಾಗಿದ್ದಾರೆ. ಅಶೋಕ್ ದವಳೆ, ರಾಕೇಶ್ ಟಿಕಾಯತ್, ಯೋಗೇಂದ್ರ ಸಿಂಗ್ ಯಾದವ್ ಮುಂತಾದ ರಾಷ್ಟ್ರ ನಾಯಕರುಗಳು ಬಂದು ಬೆಬಲಿಸಿದ್ದಾರೆ. ಆದ್ದರಿಂದ ಕರ್ನಾಟಕದ ಯಾವುದೇ ಮೂಲೆಯಲ್ಲಿದ್ದರೂ ಒಮ್ಮೆಯಾದರು ಈ ಹೋರಾಟದ ಬಗ್ಗೆ ಕೇಳಿರುತ್ತೀರಿ.

ಇದು ದೆಹಲಿ ಮಾದರಿಯ ಬೃಹತ್ ಹೋರಾಟವಲ್ಲದಿದ್ದರೂ, ಇಲ್ಲಿನ 400–500 ಸಣ್ಣ ರೈತ ಕುಟುಂಬಗಳು ತುಂಬಾ ಪ್ರಾಮಾಣಿಕವಾಗಿ, ಬದ್ಧತೆಯಿಂದ ಕಟ್ಟಿದ ಹೋರಾಟ ಇದು. ಕಡು ಕಷ್ಟಗಳ ನಡುವೆಯೂ ಹೋರಾಟದ ಪಾಲುದಾರರಾಗಿ ಸ್ವಾಭಿಮಾನದಿಂದ ಕಟ್ಟಿದ ಹೋರಾಟ. ಬಹುಶಃ ಇದು ದೊಡ್ಡ ಸಂಖ್ಯೆಯ ಮತದಾರರನ್ನು ಒಳಗೊಂಡ ಹೋರಾಟವಾಗಿದ್ದರೆ ಸರ್ಕಾರಗಳು ಇತ್ತ ಗಮನಹರಿಸುತ್ತಿದ್ದವೇನೊ. ಆದರೆ ಇಲ್ಲಿರುವುದು ಕೆಲವು ಬಡ ರೈತ ಕುಟುಂಬಗಳು. ಸಂವೇದನೆಗಳೇ ಇಲ್ಲದ ಈ ವ್ಯವಸ್ಥೆಯಲ್ಲಿ ಅವರ ಪ್ರಾಮಾಣಿಕತೆ, ಸ್ವಾಭಿಮಾನ, ಅವರ ಒಂದೆರಡು ಸಾವಿರ ಮತಗಳು ಯಾರಿಗೆ ತಾನೆ ಬೇಕು ಹೇಳಿ. ಅದರೆ, ವಿರೋಧ ಪಕ್ಷದಲ್ಲಿದ್ದಾಗ ಧರಣಿ ಸ್ಥಳಕ್ಕೆ ಬಂದು ರೈತರ ಬೆಂಬಲಕ್ಕೆ ನಿಲ್ಲುವುದಾಗಿ ಹೇಳಿ, ನಮ್ಮೆಲ್ಲರಲ್ಲಿ ಭ್ರಮೆಗಳನ್ನು ಹುಟ್ಟಿಸಿ ಅಧಿಕಾರಕ್ಕೆ ಬಂದಿರುವ, ಪ್ರಗತಿಪರರ ನೆಚ್ಚಿನ ರಾಣಕಾರಣಿ ಸಿದ್ದರಾಮಯ್ಯನವರ ಬೂಟಾಟಿಕೆಯ ನಡೆ ಮಾತ್ರ ಅಸಹ್ಯ. ಸದಾ ನುಡಿದಂತೆ ನಡೆಯುತ್ತೇನೆ ಎಂದು ಕೊಚ್ಚಿಕೊಳ್ಳುವ ಮುಖ್ಯಮಂತ್ರಿಗಳು, ತಾವೇ ಕೊಟ್ಟ ಮಾತನ್ನು ಮರೆತು ಚನ್ನರಾಯಪಟ್ಟಣ ರೈತರ ಭೂಮಿ ಕಸಿದು ವಚನ ಭ್ರಷ್ಟರಾಗಲಾರರೆಂದು ನಂಬಿದ್ದೆವು. ಇರಲಿ...

ಚನ್ನರಾಯಪಟ್ಟಣ ರೈತ ಹೋರಾಟಕ್ಕೆ ಬೆನ್ನೆಲುಬಾಗಿದ್ದ ಕಾಮ್ರೆಡ್ ಬಯ್ಯಾರೆಡ್ಡಿಯವರು ಇಂದು ನಮ್ಮೊಂದಿಗಿಲ್ಲ. ಪ್ರತೀ ಬಾರಿಯೂ ಮಂತ್ರಿಗಳೊಂದಿಗೋ, ಮುಖ್ಯಮಂತ್ರಿಗಳೊಂದಿಗೋ ಮಾತುಕತೆಗೆ ಹೋದಾಗ, ಕೆಲವೊಮ್ಮೆ ನಾಜೂಕಾಗಿ ಮತ್ತೆ ಕೆಲವೊಮ್ಮೆ ಕಠೋರವಾಗಿ ರೈತರ ಬೆನ್ನಿಗೆ ನಿಲ್ಲುತ್ತಿದ್ದವರು ಅವರು. ಅದೆಷ್ಟೋ ಬಾರಿ ಸಿದ್ದರಾಮಯ್ಯನವರನ್ನು ಇಕ್ಕಟ್ಟಿಗೆ ಸಿಕ್ಕಿಸಿ ಮುಜುಗರಕ್ಕೆ ದೂಡಿದ್ದೂ ಇದೆ. ಯಾವುದೇ ಕಾರಣಕ್ಕೂ ರಾಜಿಯಾಗದೆ ಆತಂಕದಲ್ಲಿದ್ದ ರೈತ ಸಮುದಾಯದ ಜೊತೆ ನಿಲ್ಲುವುದೇ ಆದ್ಯತೆ ಎಂದುಕೊಂಡವರು ಅವರು. ಅನುಭವಿ ಮಾರ್ಗದರ್ಶಕರಾಗಿದ್ದ ಅವರ ಸ್ಥಾನ ಇಂದಿಗೂ ಖಾಲಿಯಾಗಿಯೇ ಇದೆ. ಆದ್ದರಿಂದ ಇಂದು ಚನ್ನರಾಯಪಟ್ಟಣ ರೈತರಿಗೆ, ಮುಂದೆ ಸಾಗಬೇಕಾದ ದಾರಿ ಅಸ್ಪಷ್ಟವಾಗಿಯೇ ಇದೆ ಎನ್ನುವ ಅಭಿಪ್ರಾಯದೊಂದಿಗೆ ತಮ್ಮ ಜೊತೆ ಕೆಲವು ವಿಷಯಗಳನ್ನು ಹಂಚಿಕೊಳ್ಳಲು ಇದನ್ನು ಬರೆಯುಬೇಕೆನ್ನಿಸಿತು. ಸರ್ಕಾರ ಅಂತಿಮ ಅದಿಸೂಚನೆ ಹೊರಡಿಸಿದ ಈ ಸಂದರ್ಭದಲ್ಲಿ ನಮ್ಮ ಮುಂದಿರುವ ಆಯ್ಕೆಗಳೇನು, ನಾವದನ್ನು ಹೇಗೆ ನಿಭಾಯಿಸಬೇಕು ಅನ್ನೋದನ್ನ ಯೋಚಿಸುವ ಸಮಯ ಇದು.

ಈಗಲೂ ನಮ್ಮ ಮುಂದೆ ಕೆಲವು ಸಾದ್ಯತೆಗಳಿವೆ. ಒಂದು, ಇಂದೂ ಕೂಡ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಅಂತಿಮ ಅಧಿಸೂಚನೆಯನ್ನು ಹಿಂಪಡೆಯಲು ಸಾದ್ಯವಿದೆ. ಇದು ಹೌಸಿಂಗ್ ಉದ್ದೇಶಕ್ಕೋ ಅಥವಾ ಇತರೆ ಅಭಿವೃದ್ಧಿ ಉದ್ದೇಶಗಳಿಗೊ ಸ್ವಾಧೀನವಾಗಿದ್ದರೆ ಕಷ್ಟ ಸಾದ್ಯವಾಗಿತ್ತು. ಆದರೆ ಇದು ಕೈಗಾರಿಕಾ ಉದ್ದೇಶಕ್ಕಾದ್ದರಿಂದ ಇದು ಸಾದ್ಯವಿದೆ. ಹಿಂದೆಯೂ ಈ ರೀತಿ ನಡೆದಿರುವ ಉದಾಹರಣೆಗಳಿವೆ. ಆದರೆ "ಇಷ್ಟು ದಿನ ಮಾಡದವರು ಇಂದು ಮಾಡುತ್ತಾರೆಯೆ" ಎಂದುಕೊಳ್ಳದೆ ನಮ್ಮ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗುತ್ತದೆ. ಇದು ಚನ್ನರಾಯಪಟ್ಟಣ ರೈತರ ಹೋರಾಟದಿಂದ ಮಾತ್ರ ಸಾದ್ಯವಾಗುವುದಿಲ್ಲ. ಇದಕ್ಕೆ ನಮ್ಮನ್ನು ಬೆಂಬಲಿಸುವ ಮುಖ್ಯಮಂತ್ರಿಗಳ ಮೇಲೆ ಪ್ರಭಾವ ಬೀರುವ ಒಂದು ಪಡೆಯೇ ಬೇಕಾಗುತ್ತದೆ. ಒಂದು ನಿಯೋಗ ಮುಖ್ಯಮಂತ್ರಿಗಳನ್ನು ಬೇಟಿ ಮಾಡಿ ಒತ್ತಡ ಹೇರುತ್ತಿರುವಾಗ, ಮತ್ತೊಂದೆಡೆ, ರೈತರು ಮತ್ತು ಬೆಂಬಲಿಗರು (ರಾಜ್ಯ ಮತ್ತು ರಾಷ್ಟ್ರಮಟ್ಟದ ನಾಯಕರುಗಳು, ಸ್ವಾಮೀಜಿಗಳು, ಸಾಹಿತಿಗಳು, ಹೋರಾಟಗಾರರು ಸೇರಿದಂತೆ) ಉಪವಾಸ ಸತ್ಯಾಗ್ರಹ ಅಥವ ನಿರಂತರದ ಧರಣಿ ಇಂತದ್ದೇನಾದರು ಮಾಡಿ ಗಮನ ಸೆಳೆಯುವಂತೆ ಮಾಡುವ ಮೂಲಕ ಒತ್ತಡ ಹೇರಿ ಇದನ್ನು ಸಾದ್ಯವಾಗಿಸಬೇಕು. ಎಲ್ಲರಿಗೂ ಚಿರಪರಿಚಿತವಾದ ಹೋರಾಟದ ಮುಖಗಳು ಇದರ ನೇತೃತ್ವ ವಹಿಸಬೇಕು.

ಮತ್ತೊಂದು ಕಾನೂನು ಹೋರಾಟ. ಮೊದಲಿನಿಂದಲೂ ಜೊತೆಗಿರುವ ಜಸ್ಟೀಸ್ ಗೋಪಾಲಗೌಡರು ಇದರ ನೇತೃತ್ವ ವಹಿಸಲು ಸಿದ್ದರಿದ್ದಾರೆ ಅನಿಸುತ್ತದೆ. ಅವರು ತುಂಬಾ ವಿಶ್ವಾಸದಿಂದ ಹಿಂದಿನ ಕೆಲವು ಜಡ್ಜ್ ಮೆಂಟ್ ಮತ್ತು ಕಾನೂನಿನ ಸಾದ್ಯತೆಗಳ ಬಗ್ಗೆ ಹೇಳಿದ್ದರಾದರೂ ಕೆಲವು ನ್ಯಾಯವಾದಿಗಳು ಇದು ನ್ಯಾಯ ಮತ್ತು ಕಾನೂನಿನ ನಡುವಿನ ಸಂಘರ್ಷವಾಗುವ ಅಭಿಪ್ರಾಯ ವ್ಯಕ್ತಪಡಿಸಿದರು. ಏನೇ ಆದರೂ ಅಂತದೊಂದು ಪ್ರಯತ್ನ ಮಾಡಬಹುದಾಗಿದೆ.

ಮೊದಲೆರಡೂ ಪ್ರಯತ್ನಗಳು ವಿಫಲವಾಗಲಾರವು. ಅಕಸ್ಮಾತ್ ವಿಫಲವಾದರೆ ಕುಗ್ಗಿಹೋದ ರೈತರಿಗೆ ಧೈರ್ಯ ಹೇಳಿ ನಿರಾಶ್ರಿತರಾಗುವ ರೈತರು ಜೊತೆಗೆ ನಿಂತು, ಮುಂದಿನ ದಾರಿಗಳ ಬಗ್ಗೆ ಸಮಾಲೋಚಿಸಿ, ತಮ್ಮ ಬದುಕುಗಳನ್ನು ಸ್ವಾವಲಂಭಿಯಾಗಿ ಕಟ್ಟಿಕೊಳ್ಳಲು ಇರುವ ಸಾದ್ಯತೆಗಳು. ಅದಕ್ಕೆ ಯಾವ ರೀತಿಯ ಮದ್ಯಸ್ಥಿಕೆ ವಹಿಸಬಹುದು ಎಂಬುದನ್ನ ಯೋಜಿಸುವ ಅಗತ್ಯವಿದೆ. ಹೋರಾಟದ ಸಂಧರ್ಭದಲ್ಲಿ ಜೊತೆಗಿರುವುದರಂತೆ ಅವರು ಎಲ್ಲವನ್ನೂ ಕಳೆದುಕೊಂಡ ಮನಸ್ಥಿತಿಯಲ್ಲಿಯೂ ಕೂಡ ಜೊತೆಗಿರುವುದು ಮುಖ್ಯ ಅನ್ನಿಸುತ್ತದೆ. ಇದು ವ್ಯವಸ್ಥೆಯ ವಂಚನೆಗೊಳಗಾದ ಪ್ರಾಮಾಣಿಕ ಹೋರಾಟಕ್ಕೆ ಸಂಘಟನಾತ್ಮಕವಾಗಿ ಮಾಡಬಹುದಾದ ಸಮಾಧಾನ.

ನಿಮಗೂ ಗೊತ್ತಿದೆ, ಇದೊಂದು ವರ್ಗ ಸಂಘರ್ಷ. ಬಂಡವಾಳಶಾಹಿಗಳು ಅಧಿಕಾರಶಾಹಿ ರಾಜಕಾರಣಿಗಳ ಮೂಲಕ ಎಲ್ಲವನ್ನೂ ನೇರವಾಗಿ ತಮ್ಮ ತೆಕ್ಕೆಗೆ ತೆಗೆದುಕೊಳ್ಳುತ್ತಿರುವ ಪ್ರಯತ್ನದ ಭಾಗ ಇದು. ತಮ್ಮ ಪಾಡಿಗೆ ತಾವು ಬದುಕುವ ಸ್ವಾವಲಂಬಿ ಸಮುದಾಯಗಳೇ ಅವರಿಗೆ ಬಹುದೊಡ್ಡ ಥ್ರೆಟ್. ಗ್ರಾಮ ಸ್ವರಾಜ್, ರೈತರಿಂದ ನೇರ ಮಾರಾಟ ಇದ್ಯಾವುದನ್ನೂ ಅವರು ಸಹಿಸಲಾರರು. ಎಲ್ಲರೂ ಅವರಿಗಾಗಿ ದುಡಿಯುತ್ತಿರಬೇಕು. ಕಾಲಾಳುಗಳಾಗಿ, ಕೊನೆಗೆ ಗುಲಾಮರಾಗಿ. ಇವೆಲ್ಲವೂ ಆ ಪ್ರಕ್ರಿಯೆಯ ಭಾಗವಷ್ಟೆ. ಇದು ಚನ್ನರಾಯಪಟ್ಟಣದ ಕಥೆ ಮಾತ್ರವಲ್ಲ ಅನ್ನೋದು ನಮ್ಮ ಎಷ್ಟು ಜನ ಮುಗ್ದ ರೈತರಿಗೆ ಅರ್ಥವಾಗುತ್ತದೆ ಹೇಳಿ. ಆದ್ದರಿಂದ, ದೀರ್ಘಾವಧಿಯ ಕಾರ್ಯತಂತ್ರಗಳನ್ನು ರೂಪಿಸಿ ನಾವು ಸಂಘಟನಾತ್ಮಕವಾಗಿ ಅವರನ್ನು ಎದುರುಗೊಳ್ಳಲೇಬೇಕು. ಚನ್ನರಾಯಪಟ್ಟಣ ಅದಕ್ಕೊಂದು ಮಾದರಿಯಾಗಲಿ.

ಈಗ ನೀವು ಹೇಳಿ, ಏನು ಮಾಡೋಣ? ನಾವೇನು ಮಾಡಬೇಕು?



ಚುನಾವಣಾ ಸುಧಾರಣೆಗಳು ಸಮಗ್ರವಾಗಿರಬೇಕು ಮತ್ತು ಕಳವಳಗಳನ್ನು ನಿವಾರಿಸಬೇಕು

ಭಾರತದ ಚುನಾವಣಾ ಆಯೋಗಕ್ಕೆ ಸಿಪಿಐ(ಎಂ)ನ ಟಿಪ್ಪಣಿ

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ, ಪೊಲಿಟ್‌ಬ್ಯೂರೋ ಸದಸ್ಯರಾದ ನಿಲೋತ್ಪಲ್ ಬಸು ಮತ್ತು ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮುರಳೀಧರನ್ ಅವರು ಮೇ 10ರಂದು ಮೂವರು ಚುನಾವಣಾ ಆಯುಕ್ತರನ್ನು ಭೇಟಿಯಾದರು. ನಂತರ ಅವರು ಆಯೋಗಕ್ಕೆ ಸಲ್ಲಿಸಿದ ಟಿಪ್ಪಣಿಯನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಿದರು.



ಭಾರತದ ಚುನಾವಣಾ ಆಯೋಗ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳನ್ನು ಚರ್ಚೆಗೆ ಆಹ್ವಾನಿಸಿದ್ದ ಪ್ರಕಾರ ಸಿಪಿಐ(ಎಂ) ನಿಯೋಗ ಚುನಾವಣಾ ಆಯುಕ್ತರುಗಳನ್ನು ಭೇಟಿ ಮಾಡಲು ಹೋಗಿತ್ತು. ಆಯೋಗದ ಉಪಕ್ರಮವು ಸ್ವಾಗತಾರ್ಹ ಎಂದಿರುವ ನಿಯೋಗವು, ರಾಜಕೀಯ ಪಕ್ಷಗಳೊಂದಿಗೆ ಹೀಗೆ ತೊಡಗಿಸಿಕೊಳ್ಳುವುದು ಮತ್ತು ಸಮಾಲೋಚನೆಗಳನ್ನು ನಡೆಸುವುದನ್ನು ನಿಯಮಿತವಾದ ಅಭ್ಯಾಸವಾಗಿಸಿಕೊಳ್ಳುತ್ತದೆ ಎಂದು ಆಶಿಸಿತು.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬಹಳ ಸಮಯದಿಂದಲೂ ಚುನಾವಣೆಗಳನ್ನು ನಡೆಸುವ ಬಗ್ಗೆ ಮತ್ತು ಪ್ರಜಾಪ್ರಭುತ್ವದ ಸಂರಕ್ಷಣೆ ಮತ್ತು ಅದನ್ನು ಆಳಗೊಳಿಸುವುದಕ್ಕೆ ಸಂಬಂಧಿಸಿದಂತೆ ಅನೇಕ ವಿಷಯಗಳನ್ನು ಎತ್ತುತ್ತ ಬಂದಿದೆ, ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತ ಬಂದಿದೆ. ಈ ಟಿಪ್ಪಣಿಯಲ್ಲಿ ಸುಮಾರಾಗಿ ಅವೇ ಪ್ರಶ್ನೆಗಳನ್ನು, ವಿಶೇಷವಾಗಿ, ಕಳೆದ ಕೆಲವು ವರ್ಷಗಳಲ್ಲಿ ಎತ್ತಿರುವ ಪ್ರಶ್ನೆಗಳನ್ನು ಪುನರುಚ್ಚರಿಸುತ್ತಿದ್ದೇವೆ ಎಂದು ಸಿಪಿಐ(ಎಂ)ನ ಈ ಟಿಪ್ಪಣಿ ಹೇಳಿದೆ.

ಚುನಾವಣಾ ಆಯೋಗದ ಅಧಿಕಾರ ವ್ಯಾಪ್ತಿಯ ಇತಿ–ಮಿತಿಗಳನ್ನು ನಾವು ಅರ್ಥಮಾಡಿಕೊಂಡಿದ್ದರೂ, ಅದು ತನ್ನ ಅಧಿಕಾರವನ್ನು ಮತ್ತು ಪಾರುಪತ್ಯವನ್ನು ಬಳಸಿಕೊಂಡು ಸಾಧ್ಯವಾದಷ್ಟು ನೀತಿಗಳನ್ನು ಸಕಾರಾತ್ಮಕವಾಗಿ ಬದಲಾಯಿಸುತ್ತದೆ ಎಂಬ ನಿರೀಕ್ಷೆಯೊಂದಿಗೆ, ಚರ್ಚೆಗಾಗಿ ಇನ್ನೂ ಹೆಚ್ಚು ವ್ಯಾಪಕವಾದ ಪ್ರಶ್ನೆಗಳನ್ನು ಮುನ್ನೆಲೆಗೆ ತರುವ ಸ್ವಾತಂತ್ರ್ಯವನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ ಎನ್ನುತ್ತ, ಚುನಾವಣಾ ಸುಧಾರಣೆಗಳು ಸಮಗ್ರವಾಗಿರಬೇಕು ಮತ್ತು ಎಲೆಕ್ಟ್ರಾನಿಕ್ ಮತದಾನ ಯಂತ್ರ(ಇವಿಎಂ)ಗಳು, ಚುನಾವಣಾ ಹಣಕಾಸು, ಭ್ರಷ್ಟಾಚಾರ, ಕಾರ್ಪೊರೇಟ್ ನಿಯಂತ್ರಣ, ಭಾಗಶಃ ಆನುಪಾತಿಕ ಪ್ರಾತಿನಿಧ್ಯ, ಚುನಾವಣಾ ಸಂಸ್ಥೆಗಳ ನಿಷ್ಪಕ್ಷಪಾತತೆ ಮತ್ತು ಸ್ವಾತಂತ್ರ್ಯ ಮತ್ತು ಮಾಧ್ಯಮಗಳ ಪಾತ್ರ ಇತ್ಯಾದಿಗಳ ಬಗ್ಗೆ ಇರುವ ಕಳವಳಗಳನ್ನು ನಿವಾರಿಸಬೇಕು ಎಂದು ತಾವು ಬಯಸುವುದಾಗಿ ಸಿಪಿಐ(ಎಂ) ಟಿಪ್ಪಣಿ ಹೇಳಿದೆ. ಈ ಟಿಪ್ಪಣಿಯಲ್ಲಿ ಎತ್ತಿರುವ ವಿಷಯಗಳು ಈ ಮುಂದೆ ವಿವರಿಸಿದಂತೆ ಇವೆ.

ಭಾಗಶಃ ಆನುಪಾತಿಕ ಪ್ರಾತಿನಿಧ್ಯ

ಪ್ರಸ್ತುತ ಇರುವ ಸರಳ ಬಹುಮತ ವ್ಯವಸ್ಥೆ ('ಫಸ್ಟ್–ಪಾಸ್ಟ್–ದಿ–ಪೋಸ್ಟ್' ಅಂದರೆ ಮೊದಲು ಗೆರೆ ದಾಟಿದವರಿಗೆ ಗೆಲುವು ಎಂಬ ವ್ಯವಸ್ಥೆ) ಕೆಲಸಕ್ಕೆ ಬಾರದವು ಎಂದು ಹೆಚ್ಚೆಚ್ಚು ಸಾಬೀತಾಗುತ್ತಿವೆ. ಏಕೆಂದರೆ ರಾಜಕೀಯ ಪಕ್ಷಗಳು ಸಂಸತ್ತು/ ಶಾಸಕಾಂಗಗಳಲ್ಲಿ ಪಡೆಯುವ ಸ್ಥಾನಗಳ ಸಂಖ್ಯೆಯು ಅವು ಪಡೆಯುವ ಮತಗಳ ಸಂಖ್ಯೆಗೂ ಸಂಬಂಧವಿಲ್ಲದಂತೆ ಆಗಿರುವುದರಿಂದಾಗಿ ಅವು ಜನಾದೇಶವನ್ನು ಬಿಂಬಿಸುತ್ತಿಲ್ಲ ಎಂದನಿಸುವಂತಾಗಿದೆ.

ಇತ್ತೀಚಿನ ಚುನಾವಣೆಗಳಲ್ಲಿ ಮತ ಹಂಚಿಕೆ ಮತ್ತು ಸ್ಥಾನ ಹಂಚಿಕೆಯ ಅನುಪಾತದ ನಡುವೆ ಭಾರಿ ವ್ಯತ್ಯಾಸವಿದೆ ಎಂದು ಅನುಭವವು ತೋರಿಸಿದೆ. ಗಣನೀಯ ಮತ ಹಂಚಿಕೆ ಹೊಂದಿರುವ ಪಕ್ಷಗಳು ಅದೇ ಪ್ರಮಾಣದಲ್ಲಿ ಸ್ಥಾನಗಳನ್ನು ಗೆಲ್ಲುವಲ್ಲಿ ವಿಫಲವಾದ ಮತ್ತು ಕಡಿಮೆ ಮತ ಹಂಚಿಕೆ ಹೊಂದಿರುವ ಪಕ್ಷಗಳು ಹೆಚ್ಚಿನ ಸ್ಥಾನಗಳನ್ನು ಗೆದ್ದಿರುವ ಹಲವಾರು ನಿದರ್ಶನಗಳಿವೆ.

2014ರಲ್ಲಿ ಮೊದಲ ಬಾರಿಗೆ ಕೇವಲ 31 ಪ್ರತಿಶತ ಮತಪಾಲು ಪಡೆದಿದ್ದ ಬಿಜೆಪಿ, ಲೋಕಸಭಾ ಚುನಾವಣೆಯಲ್ಲಿ ಅರ್ಧಕ್ಕಿಂತ ಹೆಚ್ಚು ಸ್ಥಾನಗಳನ್ನು ಗೆದ್ದಿತು. ಇದಕ್ಕೆ ವ್ಯತಿರಿಕ್ತವಾಗಿ, ಶೇ.19.3ರಷ್ಟು ಮತ ಪಾಲು ಪಡೆದ ಕಾಂಗ್ರೆಸ್ ಕೇವಲ 44 ಸ್ಥಾನಗಳನ್ನು ಗೆದ್ದಿತು. 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಶೇ.36.56 ಮತಗಳೊಂದಿಗೆ 240 ಸ್ಥಾನಗಳನ್ನು ಗೆದ್ದಿತು, ಆದರೆ ಕಾಂಗ್ರೆಸ್ ತನ್ನ ಮತ ಪಾಲನ್ನು ಕೇವಲ ಶೇ.1.89ರಷ್ಟು ಹೆಚ್ಚಿಸಿಕೊಂಡಿತು ಮತ್ತು 2014ಕ್ಕೆ ಹೋಲಿಸಿದರೆ 55 ಹೆಚ್ಚಿನ ಸ್ಥಾನಗಳನ್ನು ಗೆದ್ದಿತು.

ಕೆಲವು ರಾಜ್ಯಗಳನ್ನು ನೋಡುವುದಾದರೆ:

ಉತ್ತರ ಪ್ರದೇಶದಲ್ಲಿ 2024ರ ಲೋಕಸಭಾ ಚುನಾವಣೆಯಲ್ಲಿ, ಬಹುಜನ ಸಮಾಜ ಪಕ್ಷವು ಶೇ.9.39 ಮತಗಳನ್ನು ಪಡೆಯಿತು, ಆದರೆ ಅದು ಒಂದೇ ಒಂದು ಸ್ಥಾನವನ್ನು ಗೆಲ್ಲಲಿಲ್ಲ. ಆದರೆ, ಶೇ.9.46ರಷ್ಟು ಮತಗಳನ್ನು ಪಡೆದ ಕಾಂಗ್ರೆಸ್ 6 ಸ್ಥಾನಗಳನ್ನು ಗೆದ್ದಿತು.

ಒಡಿಶಾದಲ್ಲಿ ಬಿಜೆಪಿ ಶೇ.45.34ರಷ್ಟು ಮತಗಳೊಂದಿಗೆ 20 ಸ್ಥಾನಗಳನ್ನು ಗೆದ್ದರೆ, ಶೇ.37.53ರಷ್ಟು ಮತಗಳನ್ನು ಪಡೆದ ಬಿಜು ಜನತಾದಳ ಒಂದೇ ಒಂದು ಸ್ಥಾನವನ್ನು ಗೆಲ್ಲಲಿಲ್ಲ. ಶೇ.12.52ರಷ್ಟು ಮತಗಳನ್ನು ಪಡೆದ ಕಾಂಗ್ರೆಸ್ ಕೇವಲ 1 ಸ್ಥಾನವನ್ನು ಗೆದ್ದಿದೆ.

ಆಂಧ್ರಪ್ರದೇಶದಲ್ಲಿ ವೈಎಸ್‌ಆರ್ ಕಾಂಗ್ರೆಸ್ ಪಕ್ಷವು ಶೇಕಡಾ 39.61ರಷ್ಟು ಮತಗಳನ್ನು ಗಳಿಸಿ ಕೇವಲ 4 ಸ್ಥಾನಗಳನ್ನು ಪಡೆದರೆ, ತೆಲುಗು ದೇಶಂ ಪಕ್ಷವು ಶೇ.37.79ರಷ್ಟು ಮತಗಳನ್ನು ಪಡೆದು ಅದರ ನಾಲ್ಕು ಪಟ್ಟು (16) ಹೆಚ್ಚು ಸ್ಥಾನಗಳನ್ನು ಗಳಿಸಿದೆ.

ದೆಹಲಿಯಲ್ಲಿ ಬಿಜೆಪಿ ಶೇ.54.35ರಷ್ಟು ಮತಗಳನ್ನು ಪಡೆದು 7 ಸ್ಥಾನಗಳನ್ನು ಗೆದ್ದಿದ್ದರೆ, ಶೇ.24.17ರಷ್ಟು ಮತಗಳನ್ನು ಪಡೆದ ಆಮ್ ಆದ್ಮಿ ಪಕ್ಷವಾಗಲಿ, ಶೇ.18.91ರಷ್ಟು ಮತಗಳನ್ನು ಪಡೆದ ಕಾಂಗ್ರೆಸ್ ಆಗಲಿ ಒಂದೇ ಒಂದು ಸ್ಥಾನವನ್ನು ಗೆಲ್ಲಲು ಸಾಧ್ಯವಾಗಲಿಲ್ಲ.

2024ರ ವಿಧಾನಸಭಾ ಚುನಾವಣೆಯಲ್ಲಿ, ಆಂಧ್ರಪ್ರದೇಶದಲ್ಲಿ ಶೇ.39.37ರಷ್ಟು ಮತಗಳನ್ನು ಗಳಿಸಿದ್ದ ವೈಎಸ್‌ಆರ್ ಕಾಂಗ್ರೆಸ್ ಪಕ್ಷವು ಕೇವಲ 11 ಸ್ಥಾನಗಳನ್ನು ಗೆದ್ದಿತ್ತು. ಆದರೆ ಅದೇ ಸಮಯದಲ್ಲಿ, ಶೇ.6ರಷ್ಟು ಹೆಚ್ಚಿನ ಮತಗಳನ್ನು ಪಡೆದ ತೆಲುಗು ದೇಶಂ ಪಕ್ಷವು 135 ಸ್ಥಾನಗಳನ್ನು ಗೆದ್ದಿತು. ಕೇವಲ ಶೇ.2.83ರಷ್ಟು ಮತಗಳನ್ನು ಪಡೆದ ಬಿಜೆಪಿ 8 ಸ್ಥಾನಗಳನ್ನು ಗಳಿಸಿತು.

ಒಡಿಶಾದಲ್ಲಿ, ಬಿಜು ಜನತಾದಳವು ಬಿಜೆಪಿಗಿಂತ ಸ್ವಲ್ಪ ಹೆಚ್ಚು ಮತಗಳನ್ನು ಪಡೆದರೂ, ಸ್ಥಾನ ಹಂಚಿಕೆಯಲ್ಲಿ ಇದಕ್ಕೆ ತದ್ವಿರುದ್ಧವಾದ ಚಿತ್ರಣವಿದೆ. ಬಿಜು ಜನತಾದಳ ಕೇವಲ 51 ಸ್ಥಾನಗಳನ್ನು ಗೆಲ್ಲಲು ಸಾಧ್ಯವಾದರೆ, ಕಡಿಮೆ ಮತ ಪಾಲನ್ನು ಪಡೆದ ಬಿಜೆಪಿ 78 ಸ್ಥಾನಗಳನ್ನು ಗೆದ್ದಿತು.

ಈ ಅಂಶವನ್ನು ಎತ್ತಿ ತೋರಲು ಈ ಉದಾಹರಣೆಗಳು ಸಾಕು ಎಂದು ನಾವು ಭಾವಿಸುತ್ತೇವೆ. ವಿವಿಧ ಕ್ಷೇತ್ರಗಳಲ್ಲಿ ವಿಶಾಲ ನೆಲೆಯನ್ನು ಹೊಂದಿರುವ ಸಣ್ಣ ಪಕ್ಷಗಳು, ಅವುಗಳ ಗಮನಾರ್ಹ ಮತ ಪಾಲಿನ ಹೊರತಾಗಿಯೂ, ಒಂದೇ ಒಂದು ಸ್ಥಾನವನ್ನು ಗೆಲ್ಲಲು ಸಾಧ್ಯವಾಗದಿರಬಹುದು ಎಂಬುದು ಸ್ಪಷ್ಟವಾಗಿದೆ. ಮತ ಹಂಚಿಕೆಯಲ್ಲಿ ಸಣ್ಣ ಬದಲಾವಣೆಯಾದರೂ, ಸ್ಥಾನಗಳ ಸಂಖ್ಯೆಯಲ್ಲಿ ನಾಟಕೀಯ ಬದಲಾವಣೆಯ ಸಾಧ್ಯತೆಯೂ ಇದೆ. ಇಂತಹ ಅಸಂಗತತೆಗಳು ಮತ್ತು ಜನಾದೇಶದ ವಿರೂಪಗಳನ್ನು ಸರಿಪಡಿಸುವ ಉದ್ದೇಶದಿಂದ ನಾವು 'ಭಾಗಶಃ ಪಟ್ಟಿ ವ್ಯವಸ್ಥೆಯೊಂದಿಗೆ ಆನುಪಾತಿಕ ಪ್ರಾತಿನಿಧ್ಯ' (proportional representation with a partial list system) ವನ್ನು ಪ್ರತಿಪಾದಿಸುತ್ತ ಬಂದಿದ್ದೇವೆ.

ಈ ಸಂದರ್ಭದಲ್ಲಿ, ಕಾನೂನು ಆಯೋಗವು ಈ ಹಿಂದೆ ಮಾಡಿದ ಶಿಫಾರಸುಗಳಲ್ಲಿ ಒಂದನ್ನು ಉಲ್ಲೇಖಿಸಬಹುದು. ಲೋಕಸಭೆಯಲ್ಲಿ ಪ್ರಸ್ತುತ 543 ಸ್ಥಾನಗಳನ್ನು ನೇರ ಚುನಾವಣೆಗಳ ಮೂಲಕ ಭರ್ತಿ ಮಾಡಲಾಗುತ್ತದೆ, ಭಾಗಶಃ ಆನುಪಾತಿಕ ಪ್ರಾತಿನಿಧ್ಯದ ಆಧಾರದ ಮೇಲೆ ಲೋಕಸಭೆಯಲ್ಲಿನ ಸ್ಥಾನಗಳ ಸಂಖ್ಯೆಯಲ್ಲಿ ಶೇ. 25ರಷ್ಟು ಹೆಚ್ಚಳ ಮಾಡಬೇಕು ಎಂದು ಅದು ಶಿಫಾರಸು ಮಾಡಿತ್ತು. ರಾಜ್ಯ ಶಾಸಕಾಂಗಗಳಲ್ಲೂ ಇದೇ ರೀತಿಯ ವಿಸ್ತರಣೆ ಆಗಬೇಕು. ಇದನ್ನು ಮೊದಲ ಹಂತದಲ್ಲಿ ಪ್ರಯತ್ನಿಸಬಹುದು; ನಂತರ ಆನುಪಾತಿಕ ಪ್ರಾತಿನಿಧ್ಯ ವ್ಯವಸ್ಥೆಯಲ್ಲಿ ಸ್ಥಾನಗಳ ಪಾಲನ್ನು ವಿಸ್ತರಿಸಬಹುದು.

ಪ್ರಸ್ತಾವಿತ ಕ್ಷೇತ್ರ ಪುನರ್ವಿಂಗಡಣೆಯನ್ನು ಹೇಗೆ ಕಾರ್ಯಗತಗೊಳಿಸಲಾಗುತ್ತಿದೆ ಎಂಬುದರ ಕುರಿತು ಹಲವು ಸಮಸ್ಯೆಗಳು ಮತ್ತು ಆತಂಕಗಳಿವೆ. ನಾವು ಅವುಗಳನ್ನು ಇಲ್ಲಿ ಅನ್ವೇಷಿಸಲು ಹೋಗುವುದಿಲ್ಲ.

ಏಕಕಾಲದಲ್ಲಿ ಚುನಾವಣೆಗೆ ವಿರೋಧ

"ಒಂದು ದೇಶ, ಒಂದು ಚುನಾವಣೆ"(ಒಎನ್‌ಒಇ) ಎಂಬ ಕಲ್ಪನೆಯನ್ನು ನಾವು ವಿರೋಧಿಸುತ್ತೇವೆ. ಇದು ಕೇಂದ್ರೀಕೃತ ಏಕಘಟಕ ಪ್ರಭುತ್ವವನ್ನು ರಚಿಸುವ ಗುರಿಯನ್ನು ಹೊಂದಿದೆ ಎಂಬುದು ನಮ್ಮ ಬಲವಾದ ನಂಬಿಕೆ.

ಒಎನ್‌ಒಇ ಪ್ರಸ್ತಾವವು ಕೆಲವು ಶಾಸಕಾಂಗ ಸಭೆಗಳಿಗೆ ಚುನಾವಣೆಗಳನ್ನು ಲೋಕಸಭಾ ಚುನಾವಣೆಗಳೊಂದಿಗೆ ಜೋಡಿಸುವುದಕ್ಕಾಗಿ ಅವುಗಳ ಜೀವಿತಾವಧಿಯನ್ನು ಕಡಿತಗೊಳಿಸುವ ಗುರಿಯನ್ನು ಹೊಂದಿದೆ. ಇದಲ್ಲದೆ, ಒಂದು ರಾಜ್ಯ ಸರ್ಕಾರ ಉರುಳಿ ವಿಧಾನಸಭೆ ವಿಸರ್ಜಿಸಲ್ಪಟ್ಟರೆ, ನಡೆಯುವ ಉಪಚುನಾವಣೆಗಳು ವಿಧಾನಸಭೆಯ ಉಳಿದ ಅವಧಿಗೆ ಮಾತ್ರ ಇರುತ್ತದೆ.

"ಒಂದು ದೇಶ, ಒಂದು ಚುನಾವಣೆ" ಎಂಬುದು ಸಂವಿಧಾನದ ಎರಡು ಮೂಲಭೂತ ಅಂಶಗಳನ್ನು (ಪ್ರಜಾಪ್ರಭುತ್ವ ಮತ್ತು ಒಕ್ಕೂಟ ತತ್ವ) ದುರ್ಬಲಗೊಳಿಸುತ್ತದೆ. ಕೇಶವಾನಂದ ಭಾರತಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ಸಂವಿಧಾನದ ಮೂಲ ರಚನೆಯನ್ನು ಬದಲಾಯಿಸುವ ಅಧಿಕಾರ ಸಂಸತ್ತಿಗೆ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದೆ.

ಚುನಾವಣಾ ಭರವಸೆಗಳ ಬಗ್ಗೆ

ಶಶಾಂಕ ಜೆ.ಶ್ರೀಧರ ವರ್ಸಸ್ ಬಿ.ಝಡ್. ಜಮೀರ್ ಅಹ್ಮದ್ ಖಾನ್ ಪ್ರಕರಣದಲ್ಲಿ, ಸುಪ್ರೀಂ ಕೋರ್ಟ್, ರಾಜಕೀಯ ಪಕ್ಷವು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಗಳು ಸಾರ್ವಜನಿಕರಿಗೆ ನೇರ ಅಥವಾ ಪರೋಕ್ಷ ಆರ್ಥಿಕ ನೆರವು ನೀಡುತ್ತವೆ ಎಂಬುದರಿಂದಾಗಿ ಅವನ್ನು ಭ್ರಷ್ಟ ಆಚರಣೆ ಎಂದು ಪರಿಗಣಿಸಬೇಕು ಎಂಬ ವಾದವನ್ನು ತಿರಸ್ಕರಿಸಿದರೂ, ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಭರವಸೆಗಳ ಮೇಲಿನ ಬಜೆಟ್ ವೆಚ್ಚವನ್ನು ಯಾವ ಮೂಲಗಳಿಂದ ಪೂರೈಸುತ್ತವೆ ಎಂಬುದನ್ನು ಸೂಚಿಸಬೇಕು ಎಂದು ತೀರ್ಪು ನೀಡಿತು.

ಮೇಲ್ನೋಟಕ್ಕೆ ಚುನಾವಣಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯ ಮಹತ್ವವನ್ನು ಇದು ಒತ್ತಿಹೇಳುತ್ತದೆ ಎಂದು ತೋರುತ್ತದೆಯಾದರೂ, ವಾಸ್ತವದಲ್ಲಿ ಇದು ರಾಜಕೀಯ ಪಕ್ಷಗಳು ತಮ್ಮ ನೀತಿಗಳು, ಕಾರ್ಯಕ್ರಮಗಳು ಮತ್ತು ಭರವಸೆಗಳನ್ನು ಜನರಿಗೆ ಮುಕ್ತವಾಗಿ ವ್ಯಕ್ತಪಡಿಸುವ ಹಕ್ಕಿನ ವಿರುದ್ಧವಾಗಿದೆ. ಯಾವುದೇ ಪ್ರಾಧಿಕಾರ, ಸಂಘಟನೆ ಅಥವಾ ಸಂಸ್ಥೆಯ ಹಸ್ತಕ್ಷೇಪದ ಮೂಲಕ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿನ ಉಲ್ಲಂಘನೆಯು ರಾಜಕೀಯ ಪಕ್ಷ ವ್ಯವಸ್ಥೆ ಮತ್ತು ಮುಕ್ತ ಹಾಗೂ ನ್ಯಾಯಯುತ ಚುನಾವಣೆಗಳ ಅಡಿಪಾಯವನ್ನೇ ಹಾಳು ಮಾಡುತ್ತದೆ.

ಈ ಉದ್ದೇಶಕ್ಕಾಗಿ ಯಾವುದೇ ಕಾನೂನು ಜಾರಿಗೆ ತರುವುದಕ್ಕೆ ನಾವು ಈ ಮೊದಲೂ ನಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದೇವೆ. ಇವುಗಳಿಗೆ ಅವಕಾಶವನ್ನು ಈಗಾಗಲೇ 'ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳ ಮಾರ್ಗದರ್ಶನಕ್ಕಾಗಿ ಮಾದರಿ

ಪುಟ 10 ಕ್ಕೆ

ಚುನಾವಣಾ ಸುಧಾರಣೆಗಳು ಸಮಗ್ರವಾಗಿರಬೇಕು ಮತ್ತು ಕಳವಳಗಳನ್ನು ನಿವಾರಿಸಬೇಕು

– ಪುಟ 9 ರಿಂದ –

ನೀತಿ ಸಂಹಿತೆ'ಯ 'ಸಾಮಾನ್ಯ ನಡವಳಿಕೆ' ವಿಭಾಗದಲ್ಲಿ ಒದಗಿಸಲಾಗಿದೆ.

ಹಣಬಲದ ಪಾತ್ರ

ಚುನಾವಣಾ ಫಲಿತಾಂಶಗಳನ್ನು ನಿರ್ಧರಿಸುವಲ್ಲಿ ಹಣದ ಪ್ರಭಾವ ಹೆಚ್ಚುತ್ತಿರುವುದು ಕೂಡ ಬಹಳ ಮುಖ್ಯವಾದ ವಿಷಯವಾಗಿದೆ. ಹೆಚ್ಚಿನ ಹಣವನ್ನು ಹೊಂದಿರುವ ಜನರು ನೀತಿಗಳು ಮತ್ತು ಜನರ ಭವಿಷ್ಯವನ್ನು ನಿರ್ಧರಿಸುವ ಚುನಾಯಿತ ಸಂಸ್ಥೆಗಳಲ್ಲಿ ತಮ್ಮ ಸ್ಥಾನಗಳನ್ನು ಪಡೆದುಕೊಳ್ಳುತ್ತಿರುವುದು ಹೆಚ್ಚುತ್ತಿರುವುದು ಗಂಭೀರ ಕಳವಳಕಾರಿ ವಿಷಯವಾಗಿದೆ. ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ADR) ವರದಿಯ ಪ್ರಕಾರ, 2024ರ ಲೋಕಸಭಾ ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳಲ್ಲಿ ಶೇ.93ರಷ್ಟು ಜನರು "ಕೋಟ್ಯಧಿಪತಿಗಳು"!.

ಹಣಬಲವು ಸಮಾನ ಅವಕಾಶಗಳ ಸನ್ನಿವೇಶವನ್ನು ಕದಡುತ್ತಿದೆ ಮತ್ತು ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಯ ಅತ್ಯಗತ್ಯ ಲಕ್ಷಣವಾಗಿರುವ ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳ ಸಂಪೂರ್ಣ ಪ್ರಕ್ರಿಯೆಯನ್ನು ಹಾಳುಗೆಡವುತ್ತಿದೆ. ಹಣಕಾಸಿನ ಮೇಲ್ಮೆ ಹೆಚ್ಚುವರಿ ಚುನಾವಣಾ ಪ್ರಯೋಜನವಾಗಿ ಪರಿಣಮಿಸುತ್ತದೆ ಎಂಬುದು ಸ್ಪಷ್ಟವಾಗಿದೆ, ಆದ್ದರಿಂದ ಹೆಚ್ಚಿನ ಹಣಕಾಸು ಸಂಪನ್ಮೂಲಗಳನ್ನು ಹೊಂದಿರುವ ಪಕ್ಷಗಳು ಮತ್ತು ಅಭ್ಯರ್ಥಿಗಳು ಚುನಾವಣೆಗಳನ್ನು ಗೆಲ್ಲುವ ಹೆಚ್ಚಿನ ಅವಕಾಶವನ್ನು ಹೊಂದಿರುತ್ತಾರೆ. ಕಪ್ಪು ಹಣ, ಲಂಚ ಮತ್ತು ಹಣಕ್ಕೆ ಪ್ರತಿಯಾಗಿ ಪ್ರಯೋಜನಗಳನ್ನು ಗಿಟ್ಟಿಸುವ ಪ್ರವೃತ್ತಿ ವ್ಯಾಪಕವಾಗಿ ಹರಡಿದೆ. ಇದು ಅಂತಹ ಅಭ್ಯರ್ಥಿಗಳು ತಮ್ಮ ಪ್ರಚಾರಗಳಿಗೆ ಹಣಕಾಸು ಒದಗಿಸಲು ಸಹಾಯ ಮಾಡುತ್ತದೆ.

ಚುನಾವಣಾ ಸುಧಾರಣೆಗಳ ಕುರಿತಾದ ಭಾರತೀಯ ಕಾನೂನು ಆಯೋಗದ ವರದಿಯು ಈ ಬಗ್ಗೆ ಕಟುವಾಗಿ ಟಿಪ್ಪಣಿ ಮಾಡಿದೆ: "ಅನಿಯಂತ್ರಿತ ಅಥವಾ ಸಾಕಷ್ಟು ನಿಯಂತ್ರಣಗಳಿಲ್ಲದ ಚುನಾವಣಾ ಹಣಕಾಸು ನೀಡಿಕೆ ಎರಡು ರೀತಿಯಲ್ಲಿ ಸೆರೆಹಿಡಿಯಲು ದಾರಿ ಮಾಡಿಕೊಡುತ್ತದೆ: ಮೊದಲನೆಯದಾಗಿ, ಕಟ್ಟುನಿಟ್ಟಾದ ಪರಿಶೀಲನೆಯನ್ನು ತಪ್ಪಿಸುವ ಉದ್ದೇಶದಿಂದ ಉದ್ದಿಮೆ/ಖಾಸಗಿ ಕಂಪನಿಗಳ ಹೆಸರಿನಲ್ಲಿ ಹಣವನ್ನು ಬಳಸುವುದು; ಅವರು ಈ ಹಣವನ್ನು ಚುನಾವಣೆಗಳಿಗೆ ಹಣಕಾಸು ಒದಗಿಸಲು ಬಳಸುತ್ತಾರೆ; ಮತ್ತು ಅದರ ಮೂಲಕ ಅಷ್ಟೇನೂ ಕಟ್ಟುನಿಟ್ಟಾಗಿರದ ನಿಯಮಗಳನ್ನು ಪಡೆಯುತ್ತಾರೆ; ಮತ್ತು ಚುನಾವಣೆಗಳಿಗೆ ಒದಗಿಸುವ ಹಣಕಾಸು ಅವರಿಗೆ ಪ್ರಯೋಜನಕಾರಿಯಾದ ನೀತಿಗಳಿಗೆ ದಾರಿ ಮಾಡಿಕೊಡುತ್ತದೆ; ಎರಡನೆಯದಾಗಿ, 'ಆಳವಾದ ಸೆರೆ'– ಇದರಲ್ಲಿ ಕಾರ್ಪೊರೇಟ್‌ಗಳು ತಮ್ಮ ಅಳತೆಮೀರಿದ ಮತ್ತು ಸ್ವಹಿತಕಾರೀ ಪ್ರಭಾವವನ್ನು ನಿಯಂತ್ರಕರನ್ನಷ್ಟೇ ಅಲ್ಲ, 'ಸಾರ್ವಜನಿಕ ಹಿತಾಸಕ್ತಿ'ಯ ಹೆಸರಿನಲ್ಲಿ ಅಭಿಪ್ರಾಯಗಳನ್ನು ಬದಲಾಯಿಸುವ ಮೂಲಕ ಸಾಮಾನ್ಯ ನಾಗರಿಕರನ್ನು ಸಹ ಸೆರೆಹಿಡಿಯಲು ಬಳಸುತ್ತಾರೆ" ಎಂದು ಅದು ಹೇಳಿತ್ತು.

ಫೆಬ್ರವರಿ 2024 ರಲ್ಲಿ ಸುಪ್ರೀಂ ಕೋರ್ಟ್, ಚುನಾವಣಾ ಬಾಂಡ್ ಯೋಜನೆಯನ್ನು ಅಸಂವಿಧಾನಿಕ ಎಂದು ಪರಿಗಣಿಸುತ್ತಾ, ಈ ಯೋಜನೆಯು "ಸ್ಪಷ್ಟವಾಗಿಯೂ ಲಂಗುಲಗಾಮಿಲ್ಲದ್ದು" ಎಂದು ಹೇಳಿದೆ. ಏಕೆಂದರೆ ಮಿತಿಯಿಲ್ಲದ ನಿಧಿ ನೀಡಿಕೆ "ಚುನಾವಣಾ ಪ್ರಕ್ರಿಯೆಯ ಮೇಲೆ ಕಂಪನಿಗಳ ಕಡಿವಾಣವಿಲ್ಲದ ಪ್ರಭಾವ"ಕ್ಕೆ ಕಾರಣವಾಗಬಹುದು ಮತ್ತು ಅದು ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳ ತತ್ವವನ್ನು ಉಲ್ಲಂಘಿಸುತ್ತದೆ. ಈ ಯೋಜನೆಯು ದುರುಪಯೋಗಕ್ಕೆ ಅವಕಾಶವೇ ಇಲ್ಲದಂತೆ (fool-proof) ಕಟ್ಟುನಿಟ್ಟಾಗಿಲ್ಲ ಮತ್ತು ಪ್ರತಿಫಲಾಪೇಕ್ಷೆ (quid pro quo) ವ್ಯವಸ್ಥೆಯನ್ನು ನಿರ್ಮಿಸುತ್ತದೆ, ಇದರಲ್ಲಿ ದೇಣಿಗೆದಾರರಿಗೆ "ಶಾಸಕರ ಲಭ್ಯತೆ' ಹೆಚ್ಚಿನ ರೀತಿಯಲ್ಲಿ ಇರುತ್ತದೆ, ಇದು "ನೀತಿ ರಚನೆಯ ಮೇಲೆ ಪ್ರಭಾವವಾಗಿ ಪರಿಣಮಿಸಬಹುದು" ಎಂದೂ ಸುಪ್ರಿಂ ಕೋರ್ಟ್ ತೀರ್ಪು ಹೇಳಿದೆ.

ರಾಜಕೀಯ ಪಕ್ಷಗಳಿಗೆ ಸರ್ಕಾರದ ನಿಧಿ

ಅನೇಕ ದೇಶಗಳಲ್ಲಿ, ಚುನಾವಣೆಗಳಲ್ಲಿ ದೊಡ್ಡ ಹಣದ ಪಾತ್ರವನ್ನು ಮತ್ತು ಅದಕ್ಕೆ ಸಂಬಂಧಿಸಿದ ಲಂಚ, ಸುಲಿಗೆ, ಲಾಬಿ ಮತ್ತು ಸಾಂಸ್ಥಿಕ ಭ್ರಷ್ಟಾಚಾರದ ಪಾತ್ರವನ್ನು ಸಾರ್ವಜನಿಕ ನಿಧಿ ನೀಡಿಕೆ ಅಥವಾ ಚುನಾವಣೆಗಳಿಗೆ ಪ್ರಭುತ್ವದಿಂದ ಹಣ ನೀಡಿಕೆಯ ಮೂಲಕ ತಗ್ಗಿಸುವ ಪ್ರಯತ್ನಗಳು ನಡೆದಿವೆ. ಉದಾಹರಣೆಗೆ, ಜರ್ಮನಿಯಲ್ಲಿ, ಹಿಂದಿನ ಚುನಾವಣೆಗಳಲ್ಲಿ ಕೇಂದ್ರ ಮತ್ತು ರಾಜ್ಯ ಶಾಸಕಾಂಗಗಳಲ್ಲಿ ಪಕ್ಷಗಳ ಸ್ಥಾನಗಳು ಮತ್ತು ಮತ ಹಂಚಿಕೆಯ ಆಧಾರದ ಮೇಲೆ ಮೂಲಧನ(corpus)ದಿಂದ ಪಕ್ಷಗಳಿಗೆ ಪ್ರಭುತ್ವದಿಂದ ಹಣವನ್ನು ಒದಗಿಸಲಾಗುತ್ತದೆ. ಇದಲ್ಲದೆ, ಎಲ್ಲ ರಾಜಕೀಯ ಪಕ್ಷಗಳಿಗೆ ಟಿವಿ ಸುದ್ದಿಗಳಲ್ಲಿ ಪ್ರಮಾಣಾನುಗುಣ ಮತ್ತು ನ್ಯಾಯಯುತ ಸಮಯದ ಹಂಚಿಕೆಯನ್ನು ಖಚಿತಪಡಿಸುವಂತಹ ಪರೋಕ್ಷ ಸಬ್ಸಿಡಿಗಳನ್ನು ಸಹ ಒದಗಿಸಲಾಗುತ್ತದೆ. ದಿನೇಶ್ ಗೋಸ್ವಾಮಿ ಮತ್ತು ಇಂದ್ರಜಿತ್ ಗುಪ್ತಾ ಸಮಿತಿಗಳು ಶಿಫಾರಸು ಮಾಡಿದಂತೆ, ಚುನಾವಣೆಗಳಿಗೆ ಭಾಗಶಃ ಸರ್ಕಾರಿ ನಿಧಿ ನೀಡಿಕೆ ಇರಬೇಕು. ಭಾಗಶಃ ಸರ್ಕಾರಿ ನಿಧಿ ನೀಡಿಕೆಯು ಪಕ್ಷಗಳು ಮತ್ತು ಅಭ್ಯರ್ಥಿಗಳಿಗೆ ಒಂದು ಕನಿಷ್ಟ "ಹಣಕಾಸು ಆಧಾರ"ವನ್ನು ಒದಗಿಸುತ್ತದೆ.

ರಾಜಕೀಯ ಪಕ್ಷಗಳ ವೆಚ್ಚ ಮಿತಿಯ ಪರಿಷ್ಕರಣೆ

ಇದಕ್ಕೆ ಲಗತ್ತಿಸಿಕೊಂಡಂತೆ ಪಕ್ಷವೊಂದು ಮಾಡುವ ಖರ್ಚುಗಳಿಗೆ ಯಾವುದೇ ಮಿತಿ ಇಲ್ಲದಿರುವ ಪ್ರಶ್ನೆಯೂ ಇದೆ. ಜನತಾ ಪ್ರಾತಿನಿಧ್ಯ ಕಾಯ್ದೆಯ 'ಸೆಕ್ಷನ್ 77' ಅಭ್ಯರ್ಥಿಗಳ ಚುನಾವಣಾ ವೆಚ್ಚದ ಮೇಲೆ ಮಿತಿ ವಿಧಿಸುತ್ತದೆ, ಆದರೆ ಒಂದು ರಾಜಕೀಯ ಪಕ್ಷವು ಯಾವುದೇ ನಿರ್ದಿಷ್ಟ ಅಭ್ಯರ್ಥಿಗಲ್ಲದೆ, ಪಕ್ಷದ ಪ್ರಚಾರಗಳಿಗೆ ಮಾಡಬಹುದಾದ ಖರ್ಚಿನ ಮೇಲೆ ಅಂತಹ ಮಿತಿಯಿಲ್ಲ. ಚುನಾವಣೆಯ ಸಮಯದಲ್ಲಿ ಪಕ್ಷದ ಖರ್ಚಿನ ಮೇಲೆ ಮಿತಿ ಇಲ್ಲದಿದ್ದರೆ, ಅಭ್ಯರ್ಥಿಗಳಿಗೆ ನಿಗದಿಪಡಿಸಿದ ಮಿತಿ ಅರ್ಥಹೀನವಾಗುತ್ತದೆ. ಇಂಗ್ಲೆಂಡ್ ಮತ್ತು ಇತರ ಕೆಲವು ದೇಶಗಳಲ್ಲಿ ಇರುವಂತೆ ರಾಜಕೀಯ ಪಕ್ಷಗಳು ಮಾಡುವ ಖರ್ಚಿನ ಮೇಲೆ ಮಿತಿಗಳನ್ನು ನಿಗದಿಪಡಿಸಲು ಜನತಾ ಪ್ರಾತಿನಿಧ್ಯ ಕಾಯ್ದೆಗೆ ಸೂಕ್ತ ತಿದ್ದುಪಡಿಗಳನ್ನು ಮಾಡಬೇಕು.

ಇದಲ್ಲದೆ, ಜನತಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 77ರ ಮತ್ತೊಂದು ನ್ಯೂನತೆಯೆಂದರೆ, ಅದು ನಾಮಪತ್ರ ಸಲ್ಲಿಸಿದ ದಿನಾಂಕದಿಂದ ಫಲಿತಾಂಶ ಘೋಷಣೆಯ ದಿನಾಂಕದವರೆಗೆ ಮಾತ್ರ ಅಭ್ಯರ್ಥಿಯ ಚುನಾವಣಾ ವೆಚ್ಚದ ಮೇಲೆ ಮಿತಿಯನ್ನು ವಿಧಿಸುತ್ತದೆ. ಆದರೆ, ಖರ್ಚು ಮಾಡುವ ವಾಸ್ತವಿಕ ಕಾಲಮಿತಿಯು ಹೆಚ್ಚು ದೀರ್ಘವಾಗಿದೆ. ಈ ಅಸಂಗತತೆಯನ್ನು ಸರಿಪಡಿಸಲು ಸೂಕ್ತ ತಿದ್ದುಪಡಿಗಳನ್ನು ಮಾಡಬೇಕು.

ಬೆದರಿಕೆಯ ಭಾವನೆ ಮತ್ತು ಭದ್ರತೆಯ ನೆಪದಲ್ಲಿ, ಕೆಲವು ಉನ್ನತ ಹುದ್ದೆಯಲ್ಲಿರುವ 'ಬಹು ಪ್ರಮುಖ ವ್ಯಕ್ತಿ(ವಿಐಪಿ)ಗಳು ಸರ್ಕಾರಿ ಸ್ವಾಮ್ಯದ ವಿಮಾನಗಳು ಮತ್ತು ಇತರ ಸಾರಿಗೆ ಸಾಧನಗಳನ್ನು ಉಚಿತವಾಗಿ ಬಳಸಲು ಅನುಮತಿಸಲಾಗಿದೆ. ಇದು ಅವರಿಗೆ ಅವರ ಪ್ರತಿಸ್ಪರ್ಧಿಗಳಿಗಿಂತ ಹೆಚ್ಚಿನ ಅನಗತ್ಯ ಪ್ರಯೋಜನವನ್ನು ನೀಡುತ್ತದೆ.

ಮಾಧ್ಯಮಗಳ ಪಾತ್ರ

ಮಾಧ್ಯಮವನ್ನು ನಿಯಂತ್ರಿಸುವ ದೊಡ್ಡ ಕೂಟಗಳು ಮತ್ತು ಅಧಿಪತಿಗಳು ಆಳುವ ಪಕ್ಷಗಳಿಗೆ ಸಹಾಯ ಮಾಡುತ್ತಿರುವುದು ಸ್ಪಷ್ಟ. ನಿರ್ದಿಷ್ಟವಾಗಿ, 2014ರ ನಂತರದ ಪರಿಸ್ಥಿತಿಯಲ್ಲಿ ಭಾರತದಲ್ಲಿ ಇದು ಸ್ಪಷ್ಟವಾಗಿ ಕಂಡುಬಂದಿದೆ. ಇದು ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳ ಮೇಲೆ ದೂಷಣೆಗಳ ಮೂಲಕ ಬೆನ್ನಟ್ಟುವ ಮತ್ತು ಚಾರಿತ್ರ್ಯವಧೆ ಮಾಡುವ ಉದಾಹರಣೆಗಳೂ ಇವೆ. ಇತ್ತೀಚಿನ ದಿನಗಳಲ್ಲಿ ಬಹಳ ಪ್ರಭಾವಶಾಲಿ ಪಾತ್ರವನ್ನು ವಹಿಸುವ ಸಾಮಾಜಿಕ ಮಾಧ್ಯಮ ಸೇರಿದಂತೆ ಈ ವಲಯದಲ್ಲಿ ಸೂಕ್ತ ನಿಯಂತ್ರಕ ಕಾರ್ಯವ್ಯವಸ್ಥೆಗಳು ಅತ್ಯಗತ್ಯ.

ಖಾಸಗಿ ವಲಯಕ್ಕೆ ರೇಡಿಯೋ ತರಂಗಗಳನ್ನು ತೆರೆದ ನಂತರ, ಸುದ್ದಿ ವಲಯದ ಮೇಲೆ ಖಾಸಗಿ ಮಾಧ್ಯಮಗಳ ಪ್ರಭಾವ ಹೆಚ್ಚಿದೆ. ಆದ್ದರಿಂದ, ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ತಮ್ಮ ಅಭಿಪ್ರಾಯಗಳನ್ನು ತಾರತಮ್ಯವಿಲ್ಲದೆ ಪ್ರಸಾರ ಮಾಡಲು ಖಾಸಗಿ ಮಾಧ್ಯಮ ಚಾನೆಲ್‌ಗಳಲ್ಲಿ ಸಮಯ ನಿಗದಿಪಡಿಸುವುದು ಸೂಕ್ತವಾಗಿರುತ್ತದೆ.

ಎಲೆಕ್ಟ್ರಾನಿಕ್ ಮತಯಂತ್ರಗಳು ಮತ್ತು ವಿವಿಪ್ಯಾಟ್

ಈ ಹಿಂದೆ, ಎಲೆಕ್ಟ್ರಾನಿಕ್ ಮತದಾನ ಯಂತ್ರಗಳನ್ನು ಸಿಪಿಐ(ಎಂ) ಬೆಂಬಲಿಸಿತ್ತು. ಎಲೆಕ್ಟ್ರಾನಿಕ್ ಮತದಾನ ಯಂತ್ರಗಳ ದುರುಪಯೋಗಕ್ಕೆ ಪಕ್ಕಾಗುವ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚುತ್ತಿರುವ ಸಂದೇಹದ ನಡುವೆಯೂ, ಅದು ವಿವಿಪ್ಯಾಟ್ (VVPAT)ಗಳ ಪರಿಚಯವನ್ನು ಸಹ ಬೆಂಬಲಿಸಿತು. ಸಾರ್ವಜನಿಕರ ಕೆಲವು ವಿಭಾಗಗಳಲ್ಲಿ ಇನ್ನೂ ಅನುಮಾನಗಳು ಉಳಿದಿವೆ.

ಯಂತ್ರಗಳನ್ನು ಇರಿಸುವ ಪ್ರಸ್ತುತ ಕ್ರಮ ಹೀಗಿದೆ:

ಮೊದಲು ಬ್ಯಾಲೆಟ್ ಯೂನಿಟ್, ನಂತರ VVPAT ಮತ್ತು ಸಾಲಿನಲ್ಲಿ ಕೊನೆಯದು ನಿಯಂತ್ರಣ ಘಟಕ. ಮತದಾರರು ತಮ್ಮ ಹಕ್ಕು ಚಲಾಯಿಸಿದ ನಂತರ, ಅವರ ಆಯ್ಕೆಯನ್ನು ವಿವಿಪ್ಯಾಟ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ಆದರೆ, ನಿಯಂತ್ರಣ ಘಟಕ(control unit)ದಲ್ಲಿ ನಿಜವಾಗಿ ದಾಖಲಾಗಿರುವುದು ನಿಜವಾಗಿಯೂ ಅವರ ಆಯ್ಕೆಯೇ ಎಂಬುದರಲ್ಲಿ ಸಂದೇಹವಿದೆ. ವಿವಿಪ್ಯಾಟ್ ಅನ್ನು ನಿಯಂತ್ರಣ ಘಟಕದ ನಂತರ ಕೊನೆಯಲ್ಲಿ ಇರಿಸಬೇಕೆಂದು ನಾವು ಮತ್ತು ಅನೇಕರು ಶಿಫಾರಸು ಮಾಡುತ್ತಿದ್ದೇವೆ. ಇದು ಈ ಪ್ರಕ್ರಿಯೆಯ ಸಮಗ್ರತೆಯ ಬಗ್ಗೆ ಈಗ ಇರುವ ಅನುಮಾನಗಳನ್ನು ನಿವಾರಿಸುತ್ತದೆ.

ವಿವಿಪ್ಯಾಟ್ ಪರಿಚಯವು ಈ ವ್ಯವಸ್ಥೆಯ ದುರುಪಯೋಗದ ವಿಷಯದಲ್ಲಿ ಒಂದು ನಿರ್ಣಾಯಕ ಮತ್ತು ವಿಶಿಷ್ಟ ಪರಿಣಾಮ ಬೀರಿರುವುದರಿಂದ ಇದು ಮುಖ್ಯವಾಗಿದೆ.

ವಿವಿಪ್ಯಾಟ್ ಗೂ ಮುಂಚಿನ ದಿನಗಳಲ್ಲಿ, ಎಲೆಕ್ಟ್ರಾನಿಕ್ ಮತದಾನ ಯಂತ್ರದ ಪಾವಿತ್ರ್ಯಕ್ಕೆ ದೊಡ್ಡ ರಕ್ಷಣೆಯೆಂದರೆ, ವಿದ್ಯುನ್ಮಾನ ಮತ ಯಂತ್ರದಲ್ಲಿ 'ಚಿಪ್' ಇದ್ದು, ಪರಿಶೀಲನೆಗೆ ಇಡುವ ಮೊದಲು ಅಭ್ಯರ್ಥಿಗಳ ಹೆಸರುಗಳು ಮತ್ತು ಚಿಹ್ನೆಗಳ ಬಗ್ಗೆ ಯಂತ್ರಕ್ಕೇ ಏನೂ ಗೊತ್ತಿರುವುದಿಲ್ಲ. ವಿವಿಪ್ಯಾಟ್ ಇದನ್ನೆಲ್ಲಾ ಬದಲಾಯಿಸಿದೆ. ಅದು ಅಭ್ಯರ್ಥಿಗಳ ಹೆಸರುಗಳು, ಅವರ ಚಿಹ್ನೆಗಳು ಮತ್ತು ಮತಯಂತ್ರದಲ್ಲಿ ಹೆಸರುಗಳು ಕಾಣಿಸಿಕೊಳ್ಳುವ ಕ್ರಮದ ಬಗ್ಗೆ ಪೂರ್ವ–ಜ್ಞಾನದ ಅಂಶಗಳನ್ನು ಪರಿಚಯಿಸುತ್ತದೆ. ವಾಸ್ತವವಾಗಿ ನಡೆಯುವ ಕ್ರಿಯೆ ಮತ್ತು ಇತರ ವಾಸ್ತವಿಕ ಪುರಾವೆಗಳು, ಮತಯಂತ್ರದಲ್ಲಿ ಹೆಸರುಗಳು, ಚಿಹ್ನೆಗಳು ಮತ್ತು ಅನುಕ್ರಮಗಳನ್ನು ಸೇರಿಸಿರುವುದು ಮತ್ತು ವಿವಿಪ್ಯಾಟ್ ನಿರ್ವಹಣೆಯಲ್ಲಿ ಖಾಸಗಿ ಕಂಪನಿಗಳನ್ನು ಒಳಗೊಂಡಿರುವುದು ಪರಸ್ಪರ ತಳುಕು ಹಾಕಿಕೊಂಡಿವೆ ಎಂದು ತೋರಿಸುತ್ತವೆ. ಆದ್ದರಿಂದ ಮೊದಲು ವಿವಿಪ್ಯಾಟ್ ನಲ್ಲಿ ಕೈಚಳಕ ನಡೆಸಿ ನಂತರ ಕಂಟ್ರೋಲ್ ಯೂನಿಟ್‌ಗೆ ಜೋಡಿಸಿದರೆ, ಅದು ಮತವನ್ನು ದಾಖಲಿಸುವಲ್ಲಿ ಅದು ಬಿಂಬಿತವಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ, ನಾವು ಈ ಕೆಳಗಿನವುಗಳನ್ನು ಶಿಫಾರಸು ಮಾಡುತ್ತೇವೆ:

1) ಮೂರು ಘಟಕಗಳ ಅನುಕ್ರಮವನ್ನು ಮರುಹೊಂದಿಸುವುದು, ಮತಪತ್ರ ಘಟಕದಲ್ಲಿ ಚಲಾಯಿಸಿದ ಮತದಾರರ ಆಯ್ಕೆಯು ಎಲೆಕ್ಟ್ರಾನಿಕ್ ಮತದಾನ ಯಂತ್ರ(ಇವಿಎಂ)ದ ನಿಯಂತ್ರಣ ಘಟಕಕ್ಕೆ ಹೋಗಿ, ಅಲ್ಲಿ ದಾಖಲಾಗುವಂತೆ ಮತ್ತು ಅದು ವಿವಿಪ್ಯಾಟ್‌ಗೆ ಹೋಗುವಂತೆ ಖಚಿತಗೊಳಿಸುವುದು.
2) ಪ್ರತಿ ಮತಗಟ್ಟೆಯಲ್ಲಿನ ಎಲೆಕ್ಟ್ರಾನಿಕ್ ಮತಯಂತ್ರ(ಇವಿಎಂ)ದಲ್ಲಿ ದಾಖಲಾದ ದತ್ತಾಂಶವು ವಿವಿಪ್ಯಾಟ್‌ನಲ್ಲಿ ಇರುವುದರೊಂದಿಗೆ ನೂರು ಪ್ರತಿಶತ ಹೊಂದಿಸುವುದು.
3) ಸಾಕಷ್ಟು ಸುರಕ್ಷತೆಗಳನ್ನು ಖಚಿತಪಡಿಸಲು ಮಾರ್ಗಸೂಚಿಗಳನ್ನು ಪುನರ್ ರೂಪಿಸಬೇಕು ಹಾಗೂ ಇವಿಎಂ ಮತ್ತು ವಿವಿಪ್ಯಾಟ್‌ಗಳಿಗೆ ಸಂಬಂಧಿಸಿದ ಯಾವುದೇ ವಿನ್ಯಾಸ, ತಯಾರಿಕೆ, ನಿರ್ವಹಣೆ ಮತ್ತು ದುರಸ್ತಿ ಚಟುವಟಿಕೆಗಳಿಂದ ಖಾಸಗಿ ಮಾರಾಟಗಾರರು ಇರದಂತೆ ಮಾಡಬೇಕು, ಹೊರಗಿಡಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಬೇಕು. ಇದಕ್ಕೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಪುನರ್ವಿನ್ಯಾಸಗೊಳಿಸಬೇಕಾಗಿದೆ.

ಮತದಾನದ ದತ್ತಾಂಶದಲ್ಲಿನ ಅಸಂಗತತೆ

ಮತದಾನದ ದತ್ತಾಂಶದಲ್ಲಿ ಅಸಂಗತತೆಗಳಿವೆ ಎಂಬ ಆರೋಪಗಳಿವೆ. ಚುನಾವಣಾ ಆಯೋಗವು ತನ್ನ ವೆಬ್‌ಸೈಟ್‌ನಲ್ಲಿ ಅಂಕಿಅಂಶಗಳನ್ನು ಸಕಾಲಿಕಗೊಳಿಸುವಲ್ಲಿ ತೋರಿಸಿರುವ ವಿಳಂಬದ ಪಾತ್ರದಲ್ಲಿ ಕಡಿಮೆಯೇನಲ್ಲ. 2024ರ ಲೋಕಸಭಾ ಚುನಾವಣೆಯ ಮೊದಲ ಹಂತದ ನಂತರ, ಚುನಾವಣಾ ಆಯೋಗವು ತನ್ನ ವೆಬ್‌ಸೈಟ್‌ನಲ್ಲಿ ದತ್ತಾಂಶವನ್ನು ಹಾಕಲು 11 ದಿನಗಳನ್ನು ತೆಗೆದುಕೊಂಡಿತು ಮತ್ತು ಎರಡನೇ ಹಂತದಲ್ಲಿ ನಾಲ್ಕು ದಿನಗಳನ್ನು ತೆಗೆದುಕೊಂಡಿತು. ಮತದಾನದ ಕೊನೆಯಲ್ಲಿ ಬಿಡುಗಡೆಯಾದ ಆರಂಭಿಕ ದತ್ತಾಂಶ ಮತ್ತು ಹಲವಾರು ದಿನಗಳ ವಿಳಂಬದ ನಂತರ ಬಿಡುಗಡೆಯಾದ ಅಂತಿಮ ದತ್ತಾಂಶದ ನಡುವೆ ವ್ಯತ್ಯಾಸವಿದ್ದಾಗ ಅನುಮಾನಗಳು ಬಲಗೊಳ್ಳುತ್ತವೆ.



ಮಹಿಳೆಯರಿಗೂ ಅವಮಾನ, ಸೇನೆಗೂ ಅವಮಾನ: ಕರ್ನಲ್ ಸೋಫಿಯಾ ಖುರೇಷಿ ವಿರುದ್ಧ ಮಧ್ಯಪ್ರದೇಶ ಸಚಿವರ ಟಿಪ್ಪಣಿಗೆ ಎಐಡಿಡಬ್ಲ್ಯುಎ ಖಂಡನೆ

ಹಿರಿಯ ಸೇನಾಧಿಕಾರಿ, ಆಪರೇಷನ್ ಸಿಂಧೂರ್ ಮಿಲಿಟರಿ ಕಾರ್ಯಾಚರಣೆಯ ವೇಳೆಯಲ್ಲಿ ಸೇನಾಪಡೆಗಳ ವಕ್ತಾರೆಯಾಗಿ ಕಾರ್ಯನಿರ್ವಹಿಸಿದ ಕರ್ನಲ್ ಸೋಫಿಯಾ ಖುರೇಷಿ ಅವರ ವಿರುದ್ಧ ಮಧ್ಯಪ್ರದೇಶದ ಬುಡಕಟ್ಟು ವ್ಯವಹಾರಗಳ ಮಂತ್ರಿ ವಿಜಯ್ ಶಾರವರ ಟಿಪ್ಪಣಿ ಅತ್ಯಂತ ಬೇಜವಾಬ್ದಾರಿ, ತಿರಸ್ಕಾರಾರ್ಹ ಮತ್ತು ಕೋಮುವಾದಿ ಸ್ವರೂಪದ್ದು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ (ಎಐಡಿಡಬ್ಲ್ಯುಎ) ಬಲವಾಗಿ ಖಂಡಿಸಿದೆ, ಅವರು ಸೇನೆಯಲ್ಲಿ ಮೂರು ತಲೆಮಾರುಗಳ ಸೇವೆಯ ಹೆಮ್ಮೆಯ ಇತಿಹಾಸವನ್ನು ಹೊಂದಿರುವ ಕುಟುಂಬದಿಂದ ಬಂದವರು ಎಂಬುದನ್ನು ಸಂಘಟನೆ ಈ ಸಂದರ್ಭದಲ್ಲಿ ನೆನಪಿಸಿದೆ.

ಕರ್ನಲ್ ಸೋಫಿಯಾ ಖುರೇಶಿ ವಿರುದ್ಧ ಶಾ ಅವರ ಸಂಪೂರ್ಣ ಪೂರ್ವಾಗ್ರಹಪೀಡಿತ ಹೇಳಿಕೆಯು ನಾಚಿಕೆಗೇಡಿನ ಸಂಗತಿ ಮಾತ್ರವಲ್ಲದೆ, ಸೇನೆ ಮತ್ತು ಮಹಿಳೆಯರಿಗೆ ಅವಮಾನವಾಗಿದೆ. ಸಂವಿಧಾನದ ಅಡಿಯಲ್ಲಿ ಪ್ರಮಾಣವಚನ ಸ್ವೀಕರಿಸಿದ ಸಚಿವರು ಇಂತಹ ಸ್ತ್ರೀದ್ವೇಷದ ಹೇಳಿಕೆಗಳನ್ನು ನೀಡಿರುವುದು ನಾಚಿಕೆಗೇಡಿನ ಸಂಗತಿ. ಸೇನಾ ಅಧಿಕಾರಿ ಅಥವಾ ಸೈನಿಕರನ್ನು ಹಿಂದೂ ಅಥವಾ ಮುಸ್ಲಿಂ ಎಂದು ಮತೀಯ ಕನ್ನಡಕದಿಂದ ನೋಡಲಾಗುವುದಿಲ್ಲ, ಆದರೆ ಈ ರೀತಿಯ ವಿಭಜಕ ಭಾಷೆಯು ಮುಸ್ಲಿಮರ ವಿರುದ್ಧ ಮತೀಯ ವಿಷವನ್ನು ಆಧರಿಸಿದ, ಎಲ್ಲ ಮುಸಲ್ಮಾನರನ್ನು ಭಯೋತ್ಪಾದನೆಯೊಂದಿಗೆ ಸಮೀಕರಿಸುವ ಬಿಜೆಪಿಯ ಹಿಂದುತ್ವ ಸಿದ್ಧಾಂತದ ಮೂಲಾಂಶವನ್ನು ಸ್ಪಷ್ಟವಾಗಿ ಬಯಲಿಗೆ ತಂದಿದೆ. ಈ ಹೇಳಿಕೆಯು ಒಂದು ಅಪಾಯಕಾರಿ ಮನಸ್ಥಿತಿಯನ್ನು ಬಿಂಬಿಸುವುದಲ್ಲದೆ, ಪಾಕಿಸ್ತಾನದ ವಿರುದ್ಧ ಭಾರತೀಯ ಸೇನೆ ನಡೆಸಿದ 'ಆಪರೇಷನ್ ಸಿಂಧೂರ್' ನಂತರ ಉದ್ವಿಗ್ನತೆಯನ್ನು ಶಮನಗೊಳಿಸಲು ಮತ್ತು ಶಾಂತಿಯನ್ನು ಕಾಪಾಡಬೇಕೆಂಬ ವಾತಾವರಣವನ್ನು ಕಲುಷಿತಗೊಳಿಸುವ ಪ್ರಯತ್ನವಾಗಿದೆ ಎಂದು ಎಐಡಿಡಬ್ಲ್ಯುಎ ಖಂಡಿಸಿದೆ.

ಕರ್ನಲ್ ಖುರೇಷಿ ಅವರ ಮುಸ್ಲಿಂ ಅಸ್ಮಿತೆಯನ್ನು ಪಾಕಿಸ್ತಾನದೊಂದಿಗೆ ಜೋಡಿಸುವ ಇಂತಹ ಅಸಹ್ಯಕರ ಕೃತ್ಯವನ್ನು ಅವರ ಸಹೋದರ ಬಂಟಿ ಸುಲೇಮಾನ್ ಸರಿಯಾಗಿಯೇ ಎದುರಿಸಿದ್ದಾರೆ, ಅವರು "ಆಕೆ ನನ್ನ ಸೋದರಿ ಎನ್ನುವುದಕ್ಕಿಂತ ಮೊದಲು ನಮ್ಮ ದೇಶದ ಮಗಳು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಇದನ್ನು ಗಮನಕ್ಕೆ ತಗೊಳ್ಳಬೇಕು" ಎಂದು ಅವರು ಸರಿಯಾಗಿಯೇ ಹೇಳಿದ್ದಾರೆ.

ತಮ್ಮ ಹೇಳಿಕೆಯ ವಿರುದ್ಧ ವ್ಯಕ್ತಗೊಂಡಿರುವ ಆಕ್ರೋಶದ ನಡುವೆ ವಿಜಯ್ ಶಾ ಕೇವಲ ಕ್ಷಮೆ ಕೇಳಿರುವುದು ಅಥವ ಸ್ಪಷ್ಟೀಕರಣ ನೀಡಿರುವುದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಆಡಳಿತಾರೂಢ ಬಿಜೆಪಿ ಸರ್ಕಾರವು ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು ಮತ್ತು ಸಂಕುಚಿತ ಮತ್ತು ವಿವಾದಾತ್ಮಕ ಹೇಳಿಕೆಗಳನ್ನು ನೀಡುವ ಇತಿಹಾಸ ಹೊಂದಿರುವ ಅದರ ಸಚಿವರು ಸಂವಿಧಾನದ ಆಶಯಕ್ಕೆ ವಿರುದ್ಧವಾದ ಇಂತಹ ಪೂರ್ವಾಗ್ರಹ ಪೀಡಿತ ಮತ್ತು ಪ್ರತಿಗಾಮಿ ಆಲೋಚನೆಗಳನ್ನು ಪ್ರಚಾರ ಮಾಡಿದ್ದಕ್ಕಾಗಿ ಆದಷ್ಟು ಬೇಗನೆ ರಾಜೀನಾಮೆ ನೀಡಬೇಕೆಂದು ಕೇಳಬೇಕು ಎಂದು ಜನವಾದಿ ಮಹಿಳಾ ಸಂಘಟನೆ ಆಗ್ರಹಿಸಿದೆ.

➘ ಏಪ್ರಿಲ್ 19 ಮತ್ತು ಏಪ್ರಿಲ್ 26ರಂದು ಮತದಾನ ಮುಗಿದ ನಂತರ, ಸಂಜೆ 7 ಗಂಟೆಯ ಹೊತ್ತಿಗೆ, ಚುನಾವಣಾ ಆಯೋಗವು ಮೊದಲ ಮತ್ತು ಎರಡನೇ ಹಂತದ ಚುನಾವಣೆಗಳಲ್ಲಿ ಸುಮಾರು 60 ಪ್ರತಿಶತ ಮತದಾರರು ತಮ್ಮ ಮತದಾನವನ್ನು ಚಲಾಯಿಸಿದ್ದಾರೆ ಎಂದು ತಾತ್ಕಾಲಿಕವಾಗಿ ಅಂದಾಜಿಸಿತು. ಏಪ್ರಿಲ್ 30 ರಂದು ಅಪ್‌ಲೋಡ್ ಮಾಡಲಾದ ಅಂತಿಮ ದತ್ತಾಂಶದಲ್ಲಿ, ಈ ಅಂಕಿಅಂಶಗಳು ಕ್ರಮವಾಗಿ 66.14 ಮತ್ತು 66.71 ಪ್ರತಿಶತವನ್ನು ಮುಟ್ಟಿವೆ.

ಸ್ವಲ್ಪ ವ್ಯತ್ಯಾಸಗಳು ಸಾಧ್ಯವಿಲ್ಲ ಎಂದು ಯಾರೂ ವಾದಿಸುತ್ತಿಲ್ಲವಾದರೂ, ಒಂದು ಕ್ಷೇತ್ರದಲ್ಲಿ ಮತದಾನ ಮುಗಿದ ತಕ್ಷಣ ಚುನಾವಣಾ ಆಯೋಗದ ವೆಬ್‌ಸೈಟ್‌ನಲ್ಲಿ ಫಾರ್ಮ್ 17C ಯ ಭಾಗ 1 ಅನ್ನು ಅಪ್‌ಲೋಡ್ ಮಾಡಲು ಅನುಕೂಲವಾಗುವಂತೆ ನಿಯಮಗಳನ್ನು ತಿದ್ದುಪಡಿ ಮಾಡುವುದು ಸೂಕ್ತವಾಗಿರುತ್ತದೆ. ಅಲ್ಲದೆ, ಫಲಿತಾಂಶಗಳು ಪ್ರಕಟವಾದ ನಂತರ ಭಾಗ 2 ಅನ್ನು ಸಹ ಅಪ್‌ಲೋಡ್ ಮಾಡಬಹುದು. ಶೇಕಡಾವಾರು ಬದಲಿಗೆ ನಿಖರವಾದ ಅಂಕಿಅಂಶಗಳನ್ನು ಒದಗಿಸುವುದರಿಂದ ಈ ವಿಷಯದಲ್ಲಿನ ಅನುಮಾನಗಳನ್ನು ಕೊನೆಗೊಳಿಸಲು ಸಹಾಯವಾಗುತ್ತದೆ.

ಈ ನಿಟ್ಟಿನಲ್ಲಿ, ಆರು ತಿಂಗಳಿಗಿಂತ ಕಡಿಮೆ ಅವಧಿಯಲ್ಲಿ ಮಹಾರಾಷ್ಟ್ರದಲ್ಲಿ ಮತದಾರರ ಸಂಖ್ಯೆಯಲ್ಲಿ ಪ್ರಮಾಣ ಮೀರಿದ ಹೆಚ್ಚಳದ ಬಗ್ಗೆಯೂ ಸಂದೇಹಗಳು ವ್ಯಕ್ತವಾದವು. ನವೆಂಬರ್ 2024ರಲ್ಲಿ ರಾಜ್ಯ ವಿಧಾನಸಭಾ ಚುನಾವಣೆಗಳು ನಡೆದಾಗ ನೋಂದಾಯಿತ ಮತದಾರರ ಸಂಖ್ಯೆ 9,77,93,350 ಆಗಿತ್ತು. ಆದರೆ ಅದಕ್ಕೆ ಮೊದಲು ಸಾರ್ವತ್ರಿಕ ಚುನಾವಣೆಗಳಲ್ಲಿ ಅದು 9,28,90,445 ಆಗಿತ್ತು.

ಮಾದರಿ ನೀತಿ ಸಂಹಿತೆ

ಮಾದರಿ ನೀತಿ ಸಂಹಿತೆ ಮತ್ತು ಚುನಾವಣಾ ಆಯೋಗವು ಕಾಲಕಾಲಕ್ಕೆ ಹೊರಡಿಸುವ ಸಲಹಾ ಆದೇಶಗಳ ಅನುಷ್ಠಾನದ ಕೊರತೆಯು ಒಂದು ಕಳವಳಕಾರಿ ವಿಷಯವಾಗಿದೆ. 2024ರ ಲೋಕಸಭಾ ಚುನಾವಣೆಯ ಸಮಯದಲ್ಲಿ, ಚುನಾವಣಾ ಆಯೋಗವು ತನ್ನ ಸಿವಿಜಿಲ್ ಆಪ್ ಮೂಲಕ ಸಾವಿರಾರು ದೂರುಗಳನ್ನು ಸ್ವೀಕರಿಸಿದೆ ಎಂದು ವರದಿಯಾಗಿದೆ.

ಅಕ್ರಮ ಜಾಹೀರಾತು ಫಲಕಗಳು, ಬ್ಯಾನರ್‌ಗಳು, ಮದ್ಯ ವಿತರಣೆ, ಉಡುಗೊರೆ ವಸ್ತುಗಳು ಇತ್ಯಾದಿಗಳಿಗೆ ಸಂಬಂಧಿಸಿದ ದೂರುಗಳನ್ನು ಹೆಚ್ಚು ಕಡಿಮೆ ಪರಿಹರಿಸಲಾಯಿತು. ಚುನಾವಣಾ ಆಯೋಗವು ಎಡವುತ್ತಿರುವುದು ಕಂಡುಬಂದಿರುವುದು ಧರ್ಮ ಮತ್ತು ಜಾತಿಯ ಆಧಾರದ ಮೇಲೆ ಪ್ರಚಾರ ಮಾಡುವ ರಾಜಕೀಯ ಪಕ್ಷಗಳು ಮತ್ತು ನಾಯಕರ ಮೇಲೆ ಕಡಿವಾಣ ಹಾಕುವಲ್ಲಿ ಅಸಮರ್ಥವಾದ ಪ್ರಶ್ನೆಯಲ್ಲಿ ಮತ್ತು ಅಭಿಯಾನ ಮತ್ತು ಪ್ರಚಾರಕ್ಕಾಗಿ ಪೂಜಾ ಸ್ಥಳಗಳನ್ನು ದುರುಪಯೋಗಪಡಿಸಿಕೊಳ್ಳುವುದರ ವಿಷಯದಲ್ಲಿ ಕೂಡ.

ಸಾರ್ವಜನಿಕ ಪ್ರವಚನದ ಮಟ್ಟಗಳು ಪಾತಾಳಕ್ಕೆ ಇಳಿಯುತ್ತಿವೆ ತಾನೇ ಸಲಹಾ ಆದೇಶಗಳನ್ನು ಹೊರಡಿಸಿದ್ದರೂ, ಪ್ರಧಾನ ಮಂತ್ರಿ ಮೋದಿಯವರ ವಿರುದ್ಧ ಅವರ ಬಹಿರಂಗ ಕೋಮುವಾದಿ ಪ್ರಚಾರಕ್ಕಾಗಿ ಸಲ್ಲಿಸಲಾದ ಹಲವಾರು ದೂರುಗಳನ್ನು ಪರಿಗಣಿಸಲು ಆಯೋಗವು ಆರಂಭದಲ್ಲಿ ನಿರಾಕರಿಸಿದ್ದು ಸ್ಪಷ್ಟವಾಗಿ ಎದ್ದು ಕಾಣುತ್ತಿತ್ತು.

ಚುನಾವಣೆಗಳ ಸಮಯದಲ್ಲಿ ಪ್ರಧಾನ ಮಂತ್ರಿಗಳು, ಗೃಹ ಮಂತ್ರಿಗಳು ಮತ್ತು ಇತರರು ಅಧಿಕಾರದ ದುರುಪಯೋಗ ಮಾಡಿಕೊಂಡ ಹಲವಾರು ನಿದರ್ಶನಗಳಿವೆ. ರಾಷ್ಟ್ರೀಯ ಚಿಹ್ನೆಗಳನ್ನು ಸಹ ಪಕ್ಷಪಾತದ ಉದ್ದೇಶಗಳಿಗಾಗಿ ಸ್ಪಷ್ಟವಾಗಿ ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ. ಖಂಡಿತವಾಗಿಯೂ, 'ಆಪರೇಷನ್ ಸಿಂಧೂರ'ವನ್ನು ಆಳುವ ಪಕ್ಷ ಚುನಾವಣಾ ಲಾಭಕ್ಕಾಗಿ ಬಳಸಿಕೊಳ್ಳುತ್ತಿರುವುದು ಖಂಡಿತಾ ನೋಡಲು ಸಿಗಲಿದೆ.

ಭಾರತದ ಚುನಾವಣಾ ಆಯೋಗದ ವಿಶ್ವಾಸಾರ್ಹತೆಯನ್ನು ಪುನಃಸ್ಥಾಪಿಸಲು, ಚುನಾವಣಾ ನೀತಿ ಸಂಹಿತೆಯನ್ನು ಸಕಾಲಿಕ ಅನುಷ್ಠಾನವನ್ನು ಖಚಿತಪಡಿಸಬೇಕು. ಭಾರತದ ಚುನಾವಣಾ ಆಯೋಗವು ನಿಷ್ಪಕ್ಷಪಾತವಾಗಿರುವುದು ಮಾತ್ರವಲ್ಲದೆ, ರಾಜಕೀಯ ಪಕ್ಷಗಳು ಮತ್ತು ಸಾರ್ವಜನಿಕರು ಅದನ್ನು ನಿಷ್ಪಕ್ಷಪಾತಿ ಎಂದು ಕಾಣುವಂತಿರಬೇಕು.

ಕ್ರಿಮಿನಲ್ ಹಿನ್ನೆಲೆಗಳು

ಸ್ಪರ್ಧಿಸುವ ಅಭ್ಯರ್ಥಿಗಳು ತಮ್ಮ "ಕ್ರಿಮಿನಲ್ ಹಿನ್ನೆಲೆ"ಯನ್ನು ಬಹಿರಂಗಪಡಿಸಬೇಕು ಎಂಬ ಸುಪ್ರೀಂ ಕೋರ್ಟ್‌ನ ಆದೇಶವು ಜನರ ಆಯ್ಕೆಗಳ ಮೇಲೆ ಪ್ರಭಾವ ಬೀರುವಲ್ಲಿ ವಿಫಲವಾಗಿದೆ ಎಂಬುದು ಸ್ಪಷ್ಟವಾಗಿದೆ. ಇದು ಅಭ್ಯರ್ಥಿಗಳು ಮತ್ತು ರಾಜಕೀಯ ಪಕ್ಷಗಳ ಖರ್ಚು ಹೆಚ್ಚಿಸಿದೆ. ಸಿಪಿಐ(ಎಂ)ಗೆ ಹೀಗೆ ತಿಳಿಯಪಡಿಸಬೇಕಾದ ಪ್ರಕರಣಗಳಲ್ಲಿ ಹೆಚ್ಚಿನವು ಅವರ ರಾಜಕೀಯ ಚಟುವಟಿಕೆಗಳ ಕಾರಣದಿಂದಾಗಿ ದಾಖಲಾಗಿರುವ ಪ್ರಕರಣಗಳು ಮತ್ತು ಗಂಭೀರ ಅಪರಾಧಗಳೊಂದಿಗೆ ಯಾವುದೇ ಸಂಬಂಧವಿರುವುದಿಲ್ಲ. ವಿಶೇಷವಾಗಿ ಈ ರೀತಿ ಹಲವಾರು ಮಾಧ್ಯಮಗಳಲ್ಲಿ ಹಲವಾರು ಬಾರಿ ತಿಳಿಯ ಪಡಿಸಬೇಕಾಗಿರುವುದು ಸಾಕಷ್ಟು ಹಣಸಂಗ್ರಹವಿಲ್ಲದ ನಮ್ಮಂತಹ ಪಕ್ಷಗಳಿಗೆ ಮತ್ತು ಇತರರಿಗೆ ಒಂದು ದೊಡ್ಡ ಹೊರೆಯಾಗಿದೆ.

ಚುನಾವಣೆಗಳ ಸಮಯದಲ್ಲಿ "ಏರು ಬೆಲೆ" (ಸರ್ಜ್ ಪ್ರೈಸಿಂಗ್) ವಿಧಿಸಿ ತಮ್ಮನ್ನು ಶ್ರೀಮಂತಗೊಳಿಸಿಕೊಳ್ಳುವ ಮಾಧ್ಯಮ ಸಂಸ್ಥೆಗಳಿಗೆ ಮಾತ್ರ ಇದು ಸಹಾಯ ಮಾಡುತ್ತದೆ.

ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್‌ನ ವರದಿಯ ಪ್ರಕಾರ, ಗೆಲುವು ಸಾಧಿಸಿದ 543 ಅಭ್ಯರ್ಥಿಗಳಲ್ಲಿ, 251 (ಶೇ.46) ಜನರು ತಮ್ಮ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ಘೋಷಿಸಿಕೊಂಡಿದ್ದಾರೆ. ಈ ಪೈಕಿ 170 (ಶೇ.31) ಜನರ ಮೇಲೆ ಬಲಾತ್ಕಾರ, ಕೊಲೆ ಮತ್ತು ಅಪಹರಣದಂತಹ ಗಂಭೀರ ಅಪರಾಧಗಳ ಆರೋಪಗಳಿವೆ.

ಮತದಾರರಿಗೆ ಮಾಹಿತಿ ನೀಡುವ ನ್ಯಾಯಾಲಯದ ಆಶಯ ಸರಿಯಾಗಿಲ್ಲ ಎಂಬುದು ಸ್ವಯಂವೇದ್ಯ. ಅಭ್ಯರ್ಥಿಗಳ ಆಯ್ಕೆಯು ಅವರ ಬಗ್ಗೆ ಮಾಹಿತಿಯ ಕೊರತೆಯಿಂದಲ್ಲ. ಕೊಲೆ, ಬಲಾತ್ಕಾರ ಅಥವಾ ಇತರ ಗಂಭೀರ ಅಪರಾಧಗಳ ಆರೋಪ ಹೊತ್ತಿರುವವರನ್ನು ಅವರು ಆಯ್ಕೆ ಮಾಡಲು ಕಾರಣಗಳು ಬೇರೆಯೇ ಅಂಶಗಳಲ್ಲಿವೆ. ಈ ಹಿನ್ನೆಲೆಯನ್ನು ಪರಿಗಣಿಸಿ ಮತ್ತು ಅಂದಿನಿಂದ ಗಳಿಸಿದ ಅನುಭವದ ಆಧಾರದ ಮೇಲೆ ಚುನಾವಣಾ ಆಯೋಗವು ತನ್ನ ಆದೇಶವನ್ನು ಪರಿಷ್ಕರಿಸುವಂತೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಮರುಪರಿಶೀಲನಾ ಅರ್ಜಿಯನ್ನು ಸಲ್ಲಿಸಬೇಕು.

ಚುನಾವಣಾ ಆಯೋಗದ ಸುಧಾರಣೆ

ಒಂದು ಸ್ವತಂತ್ರ ಸಾಂವಿಧಾನಿಕ ಸಂಸ್ಥೆಯಾಗಿ ಚುನಾವಣಾ ಆಯೋಗದ ಪಾತ್ರವನ್ನು ಬಲಪಡಿಸುವಲ್ಲಿ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯು ಬಹಳ ಮುಖ್ಯವಾಗಿದೆ ಎಂದು ಸಿಪಿಐ(ಎಂ) ನಂಬುತ್ತದೆ. ಈ ತಿಳುವಳಿಕೆಯ ಆಧಾರದ ಮೇಲೆಯೇ ಪಕ್ಷವು 2023ರ ಸುಪ್ರೀಂ ಕೋರ್ಟ್ ತೀರ್ಪನ್ನು ಸ್ವಾಗತಿಸಿತು. ಒಂದು ಸಂವಿಧಾನ ಪೀಠವು ತನ್ನ ತೀರ್ಪಿನಲ್ಲಿ, ಮುಖ್ಯ ಚುನಾವಣಾ ಆಯುಕ್ತರು ಮತ್ತು ಚುನಾವಣಾ ಆಯುಕ್ತರನ್ನು ಪ್ರಧಾನ ಮಂತ್ರಿ, ಲೋಕಸಭೆಯ ವಿರೋಧ ಪಕ್ಷದ ನಾಯಕರು ಮತ್ತು ಭಾರತದ ಮುಖ್ಯ ನ್ಯಾಯಾಧೀಶರನ್ನು ಒಳಗೊಂಡ ಸಮಿತಿಯು ನೇಮಿಸಬೇಕು ಎಂದು ಹೇಳಿತ್ತು.

ಆದಾಗ್ಯೂ, ಸರ್ಕಾರವು ಭಾರತದ ಮುಖ್ಯ ನ್ಯಾಯಾಧೀಶರ ಬದಲು "ಪ್ರಧಾನಮಂತ್ರಿ ನಾಮನಿರ್ದೇಶನ ಮಾಡುವ ಕೇಂದ್ರ ಸಂಪುಟದ ಮಂತ್ರಿ" ಎಂದು ವಿಧಿಸುವ ಕಾನೂನನ್ನು ಅಂಗೀಕರಿಸುವ ಮೂಲಕ ಸುಪ್ರೀಂ ಕೋರ್ಟ್‌ನ ಈ ತೀರ್ಪನ್ನು ದುರ್ಬಲಗೊಳಿಸಿತು; ಇದು ಕಾರ್ಯಾಂಗದ ಬಹುಮತದ ಅಭಿಪ್ರಾಯವು ಯಾವಾಗಲೂ ಮೇಲುಗೈ ಸಾಧಿಸುವುದನ್ನು ಖಚಿತಪಡಿಸುತ್ತದೆ. ಇದು ಚುನಾವಣಾ ಆಯೋಗದ ನಿಷ್ಪಕ್ಷಪಾತತೆ ಮತ್ತು ಸ್ವಾತಂತ್ರ್ಯವನ್ನು ನಾಶಪಡಿಸುತ್ತದೆ ಎಂದು ನಾವು ಬಲವಾಗಿ ನಂಬುತ್ತೇವೆ.

ಚುನಾವಣಾ ಆಯೋಗದ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯನ್ನು ಅದರ ಹೊಣೆಗಾರಿಕೆಯ ಅಗತ್ಯದೊಂದಿಗೆ ಪುಷ್ಟೀಕರಿಸಬೇಕು. 2024ರ ಲೋಕಸಭಾ ಚುನಾವಣೆಗಳನ್ನು ಅದು ನಡೆಸಿದ ರೀತಿಯ ಬಗ್ಗೆ ಮತ್ತು ಅದರ ನಿಷ್ಪಕ್ಷಪಾತತೆಯ ವಿಶ್ವಾಸಾರ್ಹತೆಯು ಕ್ಷಯಿಸಿರುವುದರ ಬಗ್ಗೆ ಬಗ್ಗೆ ಕಳವಳಗಳು ವ್ಯಕ್ತಗೊಂಡವು. ಇದು ಎಷ್ಟೊಂದು ಎದ್ದು ಕಂಡಿತೆಂದರೆ, ಕೆಲವು ಮಾಜಿ ಮುಖ್ಯ ಚುನಾವಣಾ ಆಯುಕ್ತರುಗಳು ಸಹ ತಮ್ಮ ಕಳವಳಗಳನ್ನು ಬಹಿರಂಗವಾಗಿಯೇ ವ್ಯಕ್ತಪಡಿಸಿದರು.

ಇದನ್ನು ಪರಿಗಣಿಸಬೇಕಾಗಿದೆ ಮತ್ತು ಸರಿಪಡಿಸಬೇಕಾಗಿದೆ.

ಕದನ ವಿರಾಮದ ಹಿಂದೆ........ ಪುಟ 7 ರಿಂದ

ಅಂತರರಾಷ್ಟ್ರೀಯ ಸಮುದಾಯದಲ್ಲಿ ಭಾರತದ ಪ್ರತಿಷ್ಠೆಗೆ ಹಾನಿ ಉಂಟಾಗಿದೆ. ಆದರಿಂದಾಗಿಯೇ, ವಿದೇಶಾಂಗ ಕಾರ್ಯದರ್ಶಿ ಮತ್ತು ಸಶಸ್ತ್ರ ಪಡೆಗಳ ಪ್ರತಿನಿಧಿಗಳು ಭಾರತ ಒಂದು ಜಾತ್ಯತೀತ ದೇಶ ಮತ್ತು ಕಾರ್ಯನಿರತ ಪ್ರಜಾಪ್ರಭುತ್ವವಾಗಿದೆ ಎಂದು ವಿವರಿಸಲು ಶ್ರಮಿಸಿದರು. ಆದ್ದರಿಂದ, ತಮ್ಮ 'ನಾಯಕ'ರನ್ನು ಪ್ರಶ್ನಿಸಲಾಗದ ಅವರ ಅನುಯಾಯಿಗಳು ವಿದೇಶಾಂಗ ಕಾರ್ಯದರ್ಶಿಯವರನ್ನು ಗುರಿಯಾಗಿಸುತ್ತಿರುವುದರಲ್ಲಿ ಅಚ್ಚರಿಯೇನಿಲ್ಲ. ಅವರ ಕೆಟ್ಟ ಟ್ರೋಲಿಂಗ್‌ಗೆ ಹಿಮಾಂಶಿ ನರ್ವಾಲ್ ನಂತರ, ಬಲಿಯಾದವರು ವಿದೇಶಾಂಗ ಕಾರ್ಯದರ್ಶಿ.

ಈ ಬಿಕ್ಕಟ್ಟಿನಿಂದ ಹೊರಬರಲು ಸರ್ಕಾರಕ್ಕೆ ಇರುವ ಏಕೈಕ ಮಾರ್ಗವೆಂದರೆ ನಡೆದಿರುವ ವಿಷಯಗಳನ್ನು ಮುಚ್ಚುಮರೆಯಿಲ್ಲದೆ ಪ್ರಸ್ತುತಪಡಿಸುವುದು. ಎಂದಿನ ಕಟ್ಟುಕಥೆಗಳು ಮತ್ತು ಭಾವಾವೇಶದ ಮಾತುಗಳು, ಸಂಸತ್ತಿನಲ್ಲಿ ನಡೆಯುವ ವಿಷಯವಾರು ಚರ್ಚೆಗೆ ಪರ್ಯಾಯವಾಗಲಾರವು. ಒಂದು ಕಾರ್ಯನಿರತ ಪ್ರಜಾಪ್ರಭುತ್ವದಲ್ಲಿ ಇಂತಹ ಚರ್ಚೆ ನಡೆಸುವುದು ಕನಿಷ್ಠ ಅವಶ್ಯಕತೆಯಾಗಿದೆ.

ಏತನ್ಮಧ್ಯೆ, ದಕ್ಷಿಣ ಏಷ್ಯಾದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಯು ತನ್ನ ಪ್ರಾಬಲ್ಯವನ್ನು ಮತ್ತೆ ತೋರಲು ಎಂತಹದೊಂದು ಹೊಸ ಆತಂಕಕಾರಿ ಕ್ರೂರ ವಿಧಾನಕ್ಕೆ ಇಳಿಯುತ್ತಿದೆ ಎಂಬುದು ಅನಾವರಣಗೊಳ್ಳುತ್ತಿದೆ. ಭಾರತದ ಜನತೆಗೆ ಗಂಭೀರ ಅಪಾಯವನ್ನು ತಂದೊಡ್ಡುವ ಪರಿಸ್ಥಿತಿ ಉಂಟಾಗಿದೆ. ಈ ಪೀಡೆಯನ್ನು ಎದುರಿಸುವ ನಮ್ಮ ದೃಢನಿರ್ಧಾರ ಮತ್ತು ಸಂಕಲ ದ್ವಿಗುಣಗೊಳ್ಳಬೇಕಾದ ಸಮಯ ಇದು.

ಅನು: ಸಿ.ಸಿದ್ದಯ್ಯ

ಕಾಮ್ರೇಡ್ ನೇಪಾಳದೇವ ಭಟ್ಟಾಚಾರ್ಯ ನಿಧನ



ರಾಜ್ಯಸಭಾ ಮಾಜಿ ಸಂಸದ ಮತ್ತು ಹಿರಿಯ ಸಿಐಟಿಯು ಸದಸ್ಯ ಕಾಮ್ರೇಡ್ ನೇಪಾಳದೇವ ಭಟ್ಟಾಚಾರ್ಯ ಅವರು ಮೇ 13ರಂದು ಮುಂಜಾನೆ ಕೋಲ್ಕತ್ತಾದ ಖಾಸಗಿ ನರ್ಸಿಂಗ್ ಹೋಂನಲ್ಲಿ ನಿಧನರಾದರು. ಕೆಲವು ದಿನಗಳ ಹಿಂದೆ ಗಂಭೀರ ಅನಾರೋಗ್ಯದಿಂದಾಗಿ ಭಟ್ಟಾಚಾರ್ಯ ಅವರನ್ನು ಕೋಲ್ಕತ್ತಾದ ನರ್ಸಿಂಗ್ ಹೋಂನಲ್ಲಿ ದಾಖಲಿಸಲಾಗಿತ್ತು. ಅವರಿಗೆ 74 ವರ್ಷ ವಯಸ್ಸಾಗಿತ್ತು.

ಕಾಮ್ರೇಡ್ ನೇಪಾಳದೇವ ಭಟ್ಟಾಚಾರ್ಯ ಅವರು ಸಿಪಿಐ(ಎಂ) ನಿಂದ 1981 ರಿಂದ 1988 ರವರೆಗೆ ಪಶ್ಚಿಮ ಬಂಗಾಳದಿಂದ ರಾಜ್ಯಸಭಾ ಸದಸ್ಯರಾಗಿದ್ದರು. ಅವರು ಸರಳ ಸಜ್ಜನ ಕಮ್ಯುನಿಸ್ಟ್ ನೇತಾರ. ಅವರು ಸಂಸದೀಯ ರಂಗದಲ್ಲಿ ಹಾಗೂ ಜನರ ಹಿತವನ್ನು ಪ್ರತಿಪಾದಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

2019ರ ಲೋಕಸಭಾ ಚುನಾವಣೆಯಲ್ಲಿ ಅವರು ಡಮ್ ಡಮ್ ಕ್ಷೇತ್ರದಿಂದ ಸಿಪಿಐ(ಎಂ)ನ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಆರೋಗ್ಯ ಸಮಸ್ಯೆಗಳ ಹೊರತಾಗಿಯೂ, ಅವರು ತೀವ್ರವಾಗಿ ಅನಾರೋಗ್ಯಕ್ಕೆ ಒಳಗಾದ ಮತ್ತು ಇತ್ತೀಚೆಗೆ ಆಸ್ಪತ್ರೆಗೆ ದಾಖಲಾಗುವವರೆಗೂ ಟ್ರೇಡ್ ಯೂನಿಯನ್ ಚಳುವಳಿಯಲ್ಲಿ ಸಕ್ರಿಯರಾಗಿದ್ದರು. ಈ ವರ್ಷ (2025ರ) ಮಾರ್ಚ್ 24ರಂದು ರಸ್ತೆ ಸಾರಿಗೆ ಕಾರ್ಮಿಕರ ಸಂಸತ್ತಿನ ಚಲೋ ಕಾರ್ಯಕ್ರಮದಲ್ಲಿ ಅವರು ಸೇರಿಕೊಂಡರು ಮತ್ತು ಏಪ್ರಿಲ್ 20 ರಂದು ನಡೆದ ಬ್ರಿಗೇಡ್ ರ್‍ಯಾಲಿಯಲ್ಲಿಯೂ ಭಾಗವಹಿಸಿದರು.

ಅರವತ್ತರ ದಶಕದ ಉತ್ತರಾರ್ಧದಲ್ಲಿ ತಮ್ಮ ಯೌವನದಲ್ಲಿಯೇ ಕಾಮ್ರೇಡ್ ನೇಪಾಳದೇವ ಭಟ್ಟಾಚಾರ್ಯ ವಿದ್ಯಾರ್ಥಿ ಚಳುವಳಿ ಮತ್ತು ಕಮ್ಯುನಿಸ್ಟ್ ಚಳುವಳಿಯನ್ನು ಸೇರಿದರು. ಅವರು ವಿದ್ಯಾರ್ಥಿ ಚಳುವಳಿಯ ಮುಂಚೂಣಿಯ ಸಂಘಟಕರಲ್ಲಿ ಒಬ್ಬರಾಗಿದ್ದರು. 1979ರಿಂದ ಏಳು ವರ್ಷಗಳ ಕಾಲ SFIನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. ನಂತರ ಟ್ರೇಡ್ ಯೂನಿಯನ್ ಚಳುವಳಿಗೆ ಸೇರಿದರು. ಪಶ್ಚಿಮ ಬಂಗಾಳದಲ್ಲಿ ಅಸಂಘಟಿತ ಕಾರ್ಮಿಕರನ್ನು ಸಂಘಟಿಸುವಲ್ಲಿ ಅವರು ನಿರ್ಣಾಯಕ ಪಾತ್ರ ವಹಿಸಿದರು. ಪಶ್ಚಿಮ ಬಂಗಾಳದಲ್ಲಿ ರೈಲು ವ್ಯಾಪಾರಿ ಒಕ್ಕೂಟವನ್ನು ಕಟ್ಟುವುದರಲ್ಲಿ ಪ್ರಮುಖ ಪಾತ್ರ ವಹಿಸಿದರು. ನಂತರ ಪಶ್ಚಿಮ ಬಂಗಾಳ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಸಾರಿಗೆ ಕಾರ್ಮಿಕರ ಚಳುವಳಿಯ ಮುಂಚೂಣಿಯ ಸಂಘಟಕರಾದರು. ಜುಲೈ, 2022ರಲ್ಲಿ ನಡೆದ 11 ನೇ ಅಖಿಲ ಭಾರತ ಸಮ್ಮೇಳನದಲ್ಲಿ ಅವರು ಅಖಿಲ ಭಾರತ ರಸ್ತೆ ಸಾರಿಗೆ ಕಾರ್ಮಿಕರ ಒಕ್ಕೂಟದ ಅಧ್ಯಕ್ಷರಾಗಿ ಆಯ್ಕೆಯಾದರು. ಅವರು ದೀರ್ಘಕಾಲದವರೆಗೆ ಸಿಐಟಿಯುನ ಅಖಿಲ ಭಾರತ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದರು. ಸಿಐಟಿಯು ಉತ್ತರ 24 ಪರಗಣ ಜಿಲ್ಲಾ ಸಮಿತಿಯ ಅಧ್ಯಕ್ಷರೂ ಆಗಿದ್ದರು.

ಮೇ 13ರ ಬೆಳಿಗ್ಗೆ ಅವರ ಪಾರ್ಥಿವ ಶರೀರವನ್ನು ಕೋಲ್ಕತ್ತಾದ ಶ್ರಮಿಕ್ ಭವನದಲ್ಲಿರುವ ಸಿಐಟಿಯು ಕಚೇರಿಗೆ ತರಲಾಯಿತು. ಅಲ್ಲಿ ಎಡಪಂಥೀಯರು ಮತ್ತು ಕಾರ್ಮಿಕ ಸಂಘದ ಸದಸ್ಯರು ಗೌರವ ಸಲ್ಲಿಸಿದರು. ನಂತರ ಅವರ ಪಾರ್ಥಿವ ಶರೀರವನ್ನು ಮುಜಾಫರ್ ಅಹ್ಮದ್ ಭವನಕ್ಕೆ, ಆ ನಂತರ ಎಸ್‌ಎಫ್‌ಐ ರಾಜ್ಯ ಕಚೇರಿಯಾದ ದಿನೇಶ್ ಮಜುಂದಾರ್ ಭವನಕ್ಕೆ ಕೊಂಡೊಯ್ಯಲಾಯಿತು. ಭಟ್ಪಾರ ಸ್ಮಶಾನದಲ್ಲಿ ಅವರ ಅಂತ್ಯಕ್ರಿಯೆ ನಡೆಯಿತು.

ಕಾಮ್ರೇಡ್ ನೇಪಾಳದೇವ ಭಟ್ಟಾಚಾರ್ಯ ಅವರ ನಿಧನಕ್ಕೆ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು) ತೀವ್ರ ದುಃಖ ವ್ಯಕ್ತಪಡಿಸಿದೆ. ಅವರ ನಿಧನದಿಂದ ಟ್ರೇಡ್ ಯೂನಿಯನ್ ಚಳುವಳಿಯು ಹಿರಿಯ ಮುಂಚೋಣಿಯ ಅನುಭವಿ ನಾಯಕನನ್ನು ಕಳೆದುಕೊಂಡಿದೆ, ಇದು ದೊಡ್ಡ ನಷ್ಟ ಎಂದಿರುವ ಸಿಐಟಿಯು, ಅವರ ಪತ್ನಿ ಮಂಜುಳಾ ಭಟ್ಟಾಚಾರ್ಯ ಮತ್ತು ಕುಟುಂಬದ ಇತರ ಸದಸ್ಯರು ಮತ್ತು ಒಡನಾಡಿಗಳಿಗೆ ಸಂತಾಪ ವ್ಯಕ್ತಪಡಿಸಿದೆ.

ಮಧ್ಯಪ್ರದೇಶ ಪೋಲೀಸರಿಗೆ ಮತ್ತೆ ಹೈಕೋರ್ಟ್ ತರಾಟೆ

ಬಿಜೆಪಿ ಮಂತ್ರಿಯ ಈ ವಿಷಪೂರಿತ ಟಿಪ್ಪಣಿಯನ್ನು ತಾನಾಗಿಯೇ ಗಮನಕ್ಕೆ ತಗೊಂಡು ಆತನ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಎಂದು ಹೈಕೋರ್ಟ್ ವಿಭಾಗೀಯ ಪೀಠ ಮಧ್ಯಪ್ರದೇಶ ಪೋಲೀಸ್‌ಗೆ ತಾಕೀತು ಮಾಡಿದ ಮೇಲೆ ಭಾರೀ ಮುಜುಗರಕ್ಕೆ ಒಳಗಾಗಿದ್ದರೂ, ಬಿಜೆಪಿ ಮತ್ತು ಅದರ ರಾಜ್ಯಸರಕಾರ ಇನ್ನೂ ಕಠಿಣ ಕ್ರಮ ಕೈಗೊಳ್ಳಲು ಹಿಂಜರಿಯುವುದು ಕಂಡು ಬಂದಿದೆ. ಇದರಿಂದಾಗಿ ಅವು ಮತ್ತೊಮ್ಮೆ ಹೈಕೋರ್ಟಿನ ತರಾಟೆಗೆ ಗುರಿಯಾಗಬೇಕಾಗಿ ಬಂದಿದೆ ಎಂದು ವರದಿಯಾಗಿದೆ. ಹೈಕೋರ್ಟಿನ ಕಟ್ಟುನಿಟ್ಟಾದ ನಿರ್ದೇಶನದ ನಂತರ ಮಧ್ಯಪ್ರದೇಶ ಪೊಲೀಸ್ ಮೂರು ದಿನಗಳ ನಂತರ ಕೊನೆಗೂ ಎಫ್‌ಐಆರ್ ದಾಖಲಿಸಿದರೂ, ಅದರಲ್ಲಿ ಮಂತ್ರಿಗಳ ಮೇ 12ರ ವೈರಲ್ ಆದ ಭಾಷಣವನ್ನು ಪ್ರಸ್ತಾಪಿಸಿಲ್ಲ. ಇದನ್ನು ಗಮನಿಸಿದ, ನ್ಯಾಯಮೂರ್ತಿ ಅತುಲ್ ಶ್ರೀಧರನ್ ಮತ್ತು ನ್ಯಾಯಮೂರ್ತಿ ಅನುರಾಧಾ ಮಲಿಕ್‌ರವರ ಮಧ್ಯಪ್ರದೇಶ ಹೈಕೋರ್ಟ್ ವಿಭಾಗೀಯ ಪೀಠ ಮತ್ತೆ ಪೊಲಿಸನ್ನು ತರಾಟೆಗೆ ತಗೊಳ್ಳಬೇಕಾಗಿ ಬಂದಿದೆ. ಈ ಪ್ರಸ್ತಾಪವಿಲ್ಲದ ಎಫ್‌ಐಆರ್ ವಜಾ ಆಗಬಹುದಾಗಿದೆ. ತನ್ನ ಮೇ14ರ ಆದೇಶವನ್ನು ಈ ಎಫ್‌ಐಆರ್‌ನ ಭಾಗವಾಗಿ ಮಾಡಬೇಕು ಎಂದು ಮತ್ತೊಂದು ನಿರ್ದೇಶನವನು ಪೊಲಿಸ್‌ಗೆ ನೀಡಿದ ವಿಭಾಗೀಯ ಪೀಠ ಈ ಪ್ರಕರಣದ ತನಿಖೆ ತನ್ನ ಮೇಲುಸ್ತುವಾರಿಯಲ್ಲಿ ನಡೆಯಬೇಕು ಎಂದೂ ಹೇಳಿರುವುದಾಗಿ ವರದಿಯಾಗಿದೆ.



ನಾವು "ಅವರ ವೇಷ – ಭೂಷಣದಿಂದ ಗುರುತಿಸ" ಲಾರದಷ್ಟು ಕುರುಡಾಗಿ ಬಿಟ್ಟಿದ್ದೇವೆ

ವ್ಯಂಗ್ಯಚಿತ್ರ: ಸಜಿತ್‌ಕುಮಾರ್, ಡೆಕ್ಕನ್ ಹೆರಾಲ್ಡ್

ಫ್ಯಾಸಿಸಂ ವಿರುದ್ಧ ವಿಜಯದ 80ನೇ ವಾರ್ಷಿಕೋತ್ಸವ.....

ಪುಟ 16 ರಿಂದ

ಕ್ರಮಗಳನ್ನು ಕೈಗೊಂಡಿತು. ಮಹಾಯುದ್ಧದ ಉತ್ತರಾರ್ಧದಲ್ಲಿ 'ಜ್ಯೂ ಸಮಸ್ಯೆಯ ಅಂತಿಮ ಪರಿಹಾರ' ಎಂಬ ಹೆಸರಿನಲ್ಲಿ ಅವರನ್ನು ಮನೆಗಳಿಂದ ಸಾಮೂಹಿಕವಾಗಿ ಯಾತನಾ ಶಿಬಿರಗಳಿಗೆ ಕಳಿಸಲಾಯಿತು. ಹೆಚ್ಚಿನವರನ್ನು ಹಲವು ರೀತಿಗಳಲ್ಲಿ ಅಲ್ಲಿ ಸಾಮೂಹಿಕ ಕೊಲೆ ಮಾಡಲಾಯಿತು. ಅಂತಿಮ ಘಟ್ಟದಲ್ಲಿ ಶಿಬಿರಗಳಿಗೆ ತಂದ ಕೂಡಲೇ ನೇರವಾಗಿ 'ಗ್ಯಾಸ್ ಚೆಂಬರ್'ಗಳಿಗೆ ಕಳಿಸಲಾಯಿತು. ಯಾತನಾ ಶಿಬಿರಗಳಲ್ಲಿ ಮತ್ತು ಇತರ ಸಾಮೂಹಿಕ ಕಗ್ಗೊಲೆಗಳು ಸೇರಿ 60 ಲಕ್ಷದಷ್ಟು ಜ್ಯೂಗಳು ಫ್ಯಾಸಿಸಂ ಗೆ ಬಲಿಯಾದರು.



ದಚಾವ್ ಯಾತನಾ ಶಿಬಿರದಲ್ಲಿ ಐಸ್ ನಲ್ಲಿಟ್ಟು 'ವೈದ್ಯಕೀಯ ಪ್ರಯೋಗ'

ಎರಡನೇ ಮಹಾಯುದ್ಧದಲ್ಲಿ 2.5 ಕೋಟಿ ಸೈನಿಕರು ಮಡಿದರು. 3.5 ಕೋಟಿ ಸೈನಿಕರು ಗಾಯಗೊಂಡರು. ನಾಜಿಗಳ ಆಕ್ರಮಣಕ್ಕೆ ಒಳಗಾದ ಸೋವಿಯೆತ್ ಒಕ್ಕೂಟ ಸುಮಾರು ಒಂದು ಕೋಟಿ ಸೈನಿಕರನ್ನು ಕಳೆದುಕೊಂಡಿತು. ಜರ್ಮನಿಯ 53 ಲಕ್ಷ ಸೈನಿಕರು ಹತರಾದರು. ಚೀನಾದ 38 ಲಕ್ಷ, ಜಪಾನಿನ 14 ಲಕ್ಷ, ಅಮೆರಿಕದ 4.5 ಲಕ್ಷ ಮತ್ತು ಬ್ರಿಟನ್ನಿನ 3.75 ಲಕ್ಷ ಸೈನಿಕರು ಹತರಾದರು. ಒಟ್ಟು 5 ಕೋಟಿ ನಾಗರೀಕರು ಸತ್ತರು. ರಶ್ಯ (1.9 ಕೋಟಿ) ಮತ್ತು ಚೀನಾ (1.6 ಕೋಟಿ) ಅತ್ಯಂತ ಹೆಚ್ಚು ನಾಗರಿಕರ ಜೀವಹಾನಿಯನ್ನು ಅನುಭವಿಸಿತು. ಭಾರೀ ಸಂಖ್ಯೆಯಲ್ಲಿ ನಾಗರೀಕ ಸಾವು–ನೋವುಗಳನ್ನು ಕಂಡ ಉಳಿದ ಪ್ರಮುಖ ದೇಶಗಳೆಂದರೆ–ಪೋಲೆಂಡ್ (50 ಲಕ್ಷ), ಇಂಡೋನೇಶ್ಯಾ (20 ಲಕ್ಷ), ಜರ್ಮನಿ (20 ಲಕ್ಷ). ಈ ಚರಿತ್ರೆಯಲ್ಲೇ ಅತ್ಯಂತ ಭೀಕರ ಯುದ್ಧದ ಸಾವು–ನೋವುಗಳಿಗೆ ಫ್ಯಾಸಿಸಂ ಉದಯವೊಂದು ಪ್ರಮುಖ ಕಾರಣವಾಗಿತ್ತು.



ಆಶ್ ವಿಟ್ಜ್ ನ ಯಾತನಾ ಶಿಬಿರದಲ್ಲಿ ಗ್ಯಾಸ್ ಚೆಂಬರ್: ನೀರು ಬದಲು ವಿಷ ಗ್ಯಾಸ್ ಬರುವ ಶವರ್


ಹಿಟ್ಲರ್ ಜರ್ಮನಿ ಅಣ್ವಸ್ತ್ರ ತಯಾರಿಗೆ ಯೋಜನೆ ಹಾಕಿದೆ ಎಂಬ ಸುದ್ದಿ ಹರಡಿ, ತರಾತುರಿಯಲ್ಲಿ ಯುಎಸ್ ನ ಅಣ್ವಸ್ತ್ರ ತಯಾರಿ ಯೋಜನೆಗೆ ಕಾರಣವಾಯಿತು. ಫ್ಯಾಸಿಸಂ ಮತ್ತು ಯುದ್ಧಗಳಿಗೆ ವಿರೋಧಿಗಳಾಗಿದ್ದ ಹಲವು ವಿಜ್ಞಾನಿಗಳು ಈ ಯೋಜನೆಯಲ್ಲಿ ಭಾಗವಹಿಸಿ ಅದು ಯಶಸ್ಸು ಕಂಡಿತು. ಅವರ ಉದ್ದೇಶ ಹಿಟ್ಲರನ ಅಣ್ವಸ್ತ್ರಕ್ಕೆ ಪ್ರತಿ ಬೆದರಿಕೆ ಹಾಕುವುದಾಗಿದ್ದರೂ, ಅದನ್ನು ಅಮೆರಿಕ ಜಪಾನಿನ ಮೇಲೆ ಬಳಸಿತು. ಜಪಾನ್ ಶರಣಾಗತವಾಗಿ ಮಹಾಯುದ್ಧ ಕೊನೆಗೊಳಿಸಲು ಅಗತ್ಯವಾಗಿತ್ತು ಎಂದು ಅದು ಸಮರ್ಥಿಸಿಕೊಂಡರೂ, ಅದು ಅಗತ್ಯವಿರಲಿಲ್ಲವೆಂದು ಅಭಿಪ್ರಾಯ ಪಡಲಾಗಿದೆ. ಹೀಗೆ ಇಂದೂ ಜಾಗತಿಕ ಶಾಂತಿಗೆ ಪ್ರಮುಖ ಸವಾಲಾಗಿರುವ ಅಣ್ವಸ್ತ್ರಗಳ ಬೆಳವಣಿಗೆಗೆ ಸಹ ಫ್ಯಾಸಿಸಂ ಪ್ರಮುಖ ಕಾರಣವಾಗಿತ್ತು.

3. ಫ್ಯಾಸಿಸಂ ವಿರುದ್ಧ ಜಾಗತಿಕ ಸಮರ ಮತ್ತು ವಿಜಯದಲ್ಲಿ ಸೋವಿಯೆಟ್ ಒಕ್ಕೂಟ, ಯುರೋಪಿನ ದೇಶಗಳ ಜನತಾ ಹೋರಾಟಗಾರರ ಮತ್ತು ಪಾಶ್ಚಿಮಾತ್ಯ ದೇಶಗಳ ಸೈನ್ಯಗಳ ಪಾತ್ರವಿದೆ ಎಂದು ಹೇಳಲಾಗುತ್ತದೆ. ಯಾರ ಪಾತ್ರ ಎಷ್ಟಿತ್ತು?

ಫ್ಯಾಸಿಸಂ ವಿರುದ್ಧ ಹೋರಾಟದಲ್ಲಿ ವಿವಿಧ ಶಕ್ತಿಗಳ ಪಾತ್ರ ತಿಳಿಯಬೇಕಾದರೆ, ಫ್ಯಾಸಿಸಂ ನ ಹುಟ್ಟು, ಅದಕ್ಕೆ ವಿರೋಧವಾಗಿದ್ದ ಶಕ್ತಿಗಳ ಮತ್ತು ಎರಡನೇ ಮಹಾಯುದ್ಧದ ಪ್ರಮುಖ ಹಂತಗಳ ಸ್ಥೂಲ ಪರಿಚಯ ಅಗತ್ಯ.

(ಭಾಗ 2 ಮತ್ತು 3ರಲ್ಲಿ ಮುಂದುವರೆಯುವುದು)

ಪಶ್ಚಿಮ ಆಫ್ರಿಕಾ: ನವ-ವಸಾಹತುಶಾಹಿಯ ವಿರುದ್ಧ ಹೋರಾಟದ ಹೊಸ ಅಧ್ಯಾಯ



ಆಫ್ರಿಕಾ, ಮುಂಬರುವ ದಿನಗಳಲ್ಲಿ ಒಂದು ಕಡೆ ಸಾಮ್ರಾಜ್ಯಶಾಹಿ, ಮತ್ತೊಂದೆಡೆ ವಸಾಹತುಶಾಹಿಯನ್ನು ಕಿತ್ತೆಸೆಯಬಯಸುವ ಶಕ್ತಿಗಳು, ಇವುಗಳ ನಡುವಿನ ತೀವ್ರ ಹೋರಾಟದ ರಣಭೂಮಿಯಾಗಿ ಹೊರಹೊಮ್ಮಲಿದೆ. ಸಾಮ್ರಾಜ್ಯಶಾಹಿಯು ಆಫ್ರಿಕಾದ ಶ್ರೀಮಂತ ನೈಸರ್ಗಿಕ ಸಂಪನ್ಮೂಲಗಳನ್ನು ತನ್ನ ಸ್ವಾರ್ಥಸಾಧನೆಗಾಗಿ ವಶಪಡಿಸಿಕೊಳ್ಳಲು ಬಯಸುತ್ತಿದ್ದರೆ, ವಸಾಹತುಶಾಹಿ ಮತ್ತು ನವ-ವಸಾಹತುಶಾಹಿಯನ್ನು ಕಿತ್ತೆಸೆಯಲು ಹೋರಾಡುತ್ತಿರುವ ಶಕ್ತಿಗಳು ತಮ್ಮ ಜನರ ಜೀವನವನ್ನು ಸುಧಾರಿಸಲಿಕ್ಕಾಗಿ ಈ ಸಂಪನ್ಮೂಲಗಳನ್ನು ಸ್ವಾಧೀನಪಡಿಸಿಕೊಳ್ಳ ಬಯಸುತ್ತಿವೆ. ಬುರ್ಕಿನ ಫಾಸೊದಲ್ಲಿ ಇದರ ಒಂದು ನೋಟ ಕಾಣಬರುತ್ತಿದೆ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್



ಕ್ಯಾಪ್ಟನ್ ಟ್ರವೊರ್: ಶಿಕ್ಷಣಕ್ಕೆ ಚಿನ್ನದ ಗಣಿಗಳು-ಬಿಳಿಯರ ಕೊಳ್ಳೆಗೆ ಅಲ್ಲ

ಫ್ರೆಂಚ್ ವಸಾಹತುಶಾಹಿ ಆಳ್ವಿಕೆಗೆ ಒಳಪಟ್ಟಿದ್ದ ಆಫ್ರಿಕಾದ ಫ್ರೆಂಚ್ ಭಾಷಿಕ ಪ್ರದೇಶಗಳು ಫ್ರಾನ್ಸ್‌ನ ಆಳ್ವಿಕೆಯಿಂದ ಸಂಪೂರ್ಣವಾಗಿ ಹೊರಬಂದಿರಲಿಲ್ಲ. ಫ್ರಾನ್ಸ್ ತನ್ನ ಮಾಜಿ ವಸಾಹತುಗಳಲ್ಲಿ ಹೊಂದಿದ್ದ ಆಸ್ತಿ-ಪಾಸ್ತಿಗಳನ್ನು ರಕ್ಷಿಸಿಕೊಳ್ಳುವ ಹೆಸರಿನಲ್ಲಿ, ಆ ದೇಶಗಳಲ್ಲಿ ತನ್ನ ಸೈನ್ಯವನ್ನು ನೆಲೆಗೊಳಿಸುವ ಒತ್ತಾಯ ಮಾಡಿತು ಮತ್ತು ಅದನ್ನು ಈ ವಸಾಹತುಗಳು ಒಪ್ಪಿಕೊಂಡವು. ಹಾಗಾಗಿ, ಹಿಂದೆ ಅದರ ವಸಾಹತುಗಳಾಗಿದ್ದ ದೇಶಗಳ ರಾಜಕೀಯದಲ್ಲಿ ಮಧ್ಯಪ್ರವೇಶಿಸುವ ಅವಕಾಶ ಫ್ರಾನ್ಸ್‌ಗೆ ಒದಗಿತು. ಅದರ ಜೊತೆಯಲ್ಲಿ, ಈ ದೇಶಗಳು ಫ್ರೆಂಚ್ ಫ್ರಾಂಕ್‌ನೊಂದಿಗೆ ಸ್ಥಿರ ವಿನಿಮಯ ದರ ಹೊಂದಿದ ಸಿಎಫ್‌ಎ ಫ್ರಾಂಕ್ ಎಂಬ ಕರೆನ್ಸಿಯನ್ನು ಅಳವಡಿಸಿಕೊಳ್ಳುವಂತೆ ಮಾಡಲಾಯಿತು. ಈ ಸ್ಥಿರ ವಿನಿಮಯ ದರವನ್ನು ಕಾಪಾಡಿಕೊಳ್ಳಲು, ಈ ದೇಶಗಳ ವಿತ್ತೀಯ ನೀತಿಯನ್ನು ಫ್ರೆಂಚ್ ಕೇಂದ್ರ ಬ್ಯಾಂಕ್ ನಿಯಂತ್ರಿಸುತ್ತಿತ್ತು. ಸಾಮಾನ್ಯವಾಗಿ ವಿತ್ತೀಯ ನೀತಿಯನ್ನು ಆರ್ಥಿಕ ನೀತಿಯಿಂದ ಬೇರ್ಪಡಿಸಲು ಸಾಧ್ಯವಿಲ್ಲದ ಕಾರಣ, ಈ ದೇಶಗಳ ಆರ್ಥಿಕ ನೀತಿಯನ್ನು ಮೂಲತಃ ಫ್ರಾನ್ಸ್ ನಿಯಂತ್ರಿಸುತ್ತಿತ್ತು. ಈ ಇಡೀ ಏರ್ಪಾಟು, ಫ್ರಾನ್ಸ್ ಯುರೋಪಿನ ಒಕ್ಕೂಟವನ್ನು ಸೇರಿದ ನಂತರವೂ ಮುಂದುವರೆಯಿತು. ಹಾಗಾಗಿ, ಈ ವಸಾಹತುಗಳ ಸ್ವಾತಂತ್ರ್ಯವು ಫ್ರಾನ್ಸ್‌ನ ಅಂಕೆಗೆ ಒಳಪಟ್ಟಿತ್ತು. ಈ ಪರಿಸ್ಥಿತಿಯಿಂದ ಹೊರಬರಲು ಈ ದೇಶಗಳಲ್ಲಿ ಅಧಿಕಾರಕ್ಕೆ ಬಂದ ಕ್ರಾಂತಿಕಾರಿ ಸರ್ಕಾರಗಳು ಮಾಡಿದ ಪ್ರಯತ್ನಗಳನ್ನು ಅಮೆರಿಕದ ಬೆಂಬಲದೊಂದಿಗೆ ಕ್ರೂರ ನವ-ವಸಾಹತುಶಾಹಿ ಕೃತ್ಯಗಳ ಮೂಲಕ ಫ್ರಾನ್ಸ್ ಹತ್ತಿಕ್ಕಿದೆ.

ಸಾಮ್ರಾಜ್ಯಶಾಹಿಯ ಮಗ್ಗುಲ ಮುಳ್ಳಾಗಿ ಬುರ್ಕಿನಾ ಫಾಸೊ

ಬುರ್ಕಿನಾ ಫಾಸೊದಲ್ಲಿ ಅಧಿಕಾರಕ್ಕೆ ಬಂದ ಕ್ರಾಂತಿಕಾರಿ ಥಾಮಸ್ ಶಂಕರ, ತನ್ನ ದೇಶದಿಂದ ಫ್ರೆಂಚ್ ಸೈನ್ಯವನ್ನು ಹೊರಹಾಕಲು ಬಯಸಿದ್ದರು. ಆದರೆ, ಫ್ರಾನ್ಸಿನ ಪ್ರಚೋದನೆ ಮತ್ತು ಬೆಂಬಲದೊಂದಿಗೆ ಅವರದೇ ಪಕ್ಷದ ಕೆಲವು ಭಿನ್ನಮತೀಯರು ಅವರ ವಿರುದ್ಧವೇ ನಡೆಸಿದ ಒಂದು ಕ್ಷಿಪ್ರದಂಗೆಯಲ್ಲಿ ಶಂಕರ ಹತರಾದರು. ಆದಾಗ್ಯೂ, ಈ ದೇಶಗಳಲ್ಲಿ ನವ-ವಸಾಹತುಶಾಹಿಯ ವಿರುದ್ಧವಾಗಿ ಹೋರಾಟಗಳು ನಡೆಯುತ್ತಲೇ ಬಂದಿವೆ. ಈ ಹೋರಾಟದ ನಾಯಕತ್ವವು ಸ್ಥಳೀಯ ಸಶಸ್ತ್ರ ಪಡೆಗಳಿಂದಲೇ ಹೊರಹೊಮ್ಮಿದೆ. ಬುರ್ಕಿನಾ ಫಾಸೊದಲ್ಲಿ 2022ರ ಆರಂಭದಲ್ಲಿ ಸ್ಥಾಪಿಸಲ್ಪಟ್ಟ 'ಸಂರಕ್ಷಣೆ ಮತ್ತು ಪುನಃಸ್ಥಾಪನೆಯ ದೇಶಪ್ರೇಮಿ ಚಳವಳಿ' (Patriotic Movement for Safeguard and Restoration -PMSR) ನಾಯಕ ಕ್ಯಾಪ್ಟನ್ ಇಬ್ರಾಹಿಂ ಟ್ರವೋರ್, ಸೆಪ್ಟೆಂಬರ್ 30, 2022ರಂದು ಅಧಿಕಾರಕ್ಕೆ ಬಂದ ನಂತರ ತನ್ನ ದೇಶದಿಂದ ಫ್ರೆಂಚ್ ಸೇನೆಯನ್ನು ಹೊರಹಾಕಲು ಮುಂದಾದರು ಮಾತ್ರವಲ್ಲ ಅದನ್ನು ಸಾಧಿಸುವಲ್ಲಿ ಯಶಸ್ವಿಯೂ ಆದರು. ಅಷ್ಟೇ ಅಲ್ಲ, ಅವರು ತಮ್ಮ ದೇಶವು ಸಿಕ್ಕಿಹಾಕಿಕೊಂಡಿದ್ದ ಸಿಎಫ್‌ಎ ಫ್ರಾಂಕ್ ಕರೆನ್ಸಿ ಏರ್ಪಾಟನ್ನೂ ಸಹ ಕೊನೆಗೊಳಿಸಿದರು. ಟ್ರವೋರ್ ತಮ್ಮ ನೆರೆಯ ಮಾಲಿ ಮತ್ತು ನೈಜರ್ (Niger), ಈ ಎರಡೂ ದೇಶಗಳ ಜೊತೆಗೂಡಿ 'ಸಹೇಲ್ ಪ್ರಭುತ್ವಗಳ ಸಂಘ'(ಎಇಎಸ್) ವನ್ನು ರಚಿಸಿದರು. ಈ ಎರಡೂ ದೇಶಗಳೂ ವಸಾಹತುಶಾಹಿಯಿಂದ ಹೊರಬರುವ ಪ್ರಾಮಾಣಿಕ ಬಯಕೆಯನ್ನು ಹೊಂದಿದ್ದವು. ನೈಜರ್‌ನಿಂದ ಫ್ರೆಂಚ್ ಮತ್ತು ಅಮೆರಿಕನ್ ಸೇನಾ ಪಡೆಗಳನ್ನು ಹೊರಗಟ್ಟಲಾಯಿತು ಮತ್ತು ಪೆಂಟಗಾನ್ (ಅಮೆರಿಕದ ರಕ್ಷಣಾ ಇಲಾಖೆಯ ಪ್ರಧಾನ ಕಾರ್ಯಾಲಯ) ನಿಯಂತ್ರಿಸುತ್ತಿದ್ದ ಡ್ರೋನ್ ನಿಲ್ದಾಣವನ್ನು ಮುಚ್ಚಲಾಯಿತು. ಹೀಗೆ, ಖನಿಜ ಸಂಪನ್ಮೂಲಗಳಿಂದ ಸಮೃದ್ಧವಾಗಿರುವ ಪ್ರದೇಶದಲ್ಲಿ ಸಹೇಲ್ ಸಂಘಟನೆಯು ಸಾಮ್ರಾಜ್ಯಶಾಹಿಯ ಮಗ್ಗುಲ ಮುಳ್ಳಾಗಿ ಹೊರಹೊಮ್ಮಿದೆ.

ಈ ಖನಿಜ ಸಂಪನ್ಮೂಲಗಳ ಪೈಕಿ, ಚಿನ್ನವು ಒಂದು ಬಹಳ ಮುಖ್ಯವಾದ ಸ್ಥಾನವನ್ನು ಪಡೆದುಕೊಂಡಿದೆ ಮತ್ತು ಅತಿ ಹೆಚ್ಚು ಚಿನ್ನವನ್ನು ಉತ್ಪಾದಿಸುವ ಆಫ್ರಿಕಾದ ದೇಶಗಳಲ್ಲಿ ಬುರ್ಕಿನಾ ಫಾಸೊ ಕೂಡ ಒಂದು. ಅದು 2024ರಲ್ಲಿ 57 ಟನ್ ಚಿನ್ನವನ್ನು ಉತ್ಪಾದಿಸಿದೆ. ಆದರೆ, ಅಷ್ಟು ಪ್ರಮಾಣದ ಚಿನ್ನವನ್ನು ಉತ್ಪಾದಿಸಿದರೂ ಸಹ, ಅದರಿಂದ ಆ ದೇಶದ ಜನರು ಯಾವ ಪ್ರಯೋಜನವನ್ನೂ ಪಡೆದಿಲ್ಲ. ಈ ಚಿನ್ನದ ಒಂದು ಬಹು ದೊಡ್ಡ ಪಾಲು ಚಿನ್ನದ ಗಣಿಗಳ ಒಡೆತನ ಹೊಂದಿರುವ ವಿದೇಶಿ ಕಂಪನಿಗಳಿಗೆ ಹೋಗುತ್ತದೆ. ಪಿಎಂಎಸ್‌ಆರ್ (PMSR) ಸರ್ಕಾರವು 2024ರಲ್ಲಿ SOPAMIB ಎಂಬ ಸರ್ಕಾರಿ ಸ್ವಾಮ್ಯದ ಕಂಪನಿಯನ್ನು ಸ್ಥಾಪಿಸಿತು ಮತ್ತು ಚಿನ್ನ ಹೊರತೆಗೆಯುವಲ್ಲಿ ತೊಡಗಿದ್ದ ವಿದೇಶಿ ಒಡೆತನದ ಕಂಪನಿಗಳನ್ನು ಕ್ರಮೇಣ ಸ್ವಾಧೀನಪಡಿಸಿಕೊಳ್ಳಲು ಅದನ್ನು ಬಳಸಿಕೊಂಡಿತು. ಈ ರಾಷ್ಟ್ರೀಕೃತ ಚಿನ್ನದ ಗಣಿಗಳಿಂದ ಸರ್ಕಾರವು ಸಂಪಾದಿಸಿದ ಅಪಾರ ಹಣವನ್ನು ಕೈಗಾರಿಕೆಗಳನ್ನು ಆರಂಭಿಸಲು ಮತ್ತು ಬುರ್ಕಿನಾಬೆ ಜನರಿಗೆ ಶಿಕ್ಷಣ ನೀಡಲು ಮತ್ತು ಆರೋಗ್ಯ ರಕ್ಷಣೆಯನ್ನು ವಿಸ್ತರಿಸಲು ಮೀಸಲಿಟ್ಟಿತು. ಇತ್ತೀಚಿನ ದಿನಗಳಲ್ಲಿ ಚಿನ್ನದ ಬೆಲೆಗಳು ಏರುಗತಿಯಲ್ಲಿರುವುದರಿಂದ, ಡಾಲರ್ ಭವಿಷ್ಯವು ಕ್ಷೀಣಿಸುತ್ತಿರುವ ಸನ್ನಿವೇಶದಲ್ಲಿ ಡಾಲರನ್ನು ಕರೆನ್ಸಿ ರೂಪದ ಆಸ್ತಿಯಾಗಿ ಹೊಂದಿರುವ ಹೂಡಿಕೆದಾರರು ಡಾಲರನ್ನು ಮಾರಿ ಚಿನ್ನವನ್ನು ಕೊಳ್ಳುವ ಪರಿಸ್ಥಿತಿ ಉಂಟಾಗಿದೆ. ಬುರ್ಕಿನಾ ಫಾಸೊ ಸರ್ಕಾರವು ಈ ಪರಿಸ್ಥಿತಿಯ ಲಾಭವನ್ನು ಪಡೆದುಕೊಳ್ಳುವ ಮತ್ತು ಫ್ರೆಂಚ್ ಪಡೆಗಳನ್ನು ತನ್ನ ನೆಲದಿಂದ ಹೊರಹಾಕಿದ ನಂತರ ಪಾಶ್ಚಾತ್ಯ ದೇಶಗಳು ನೇರವಾಗಿ ಮತ್ತು ಪರೋಕ್ಷವಾಗಿ ವಿಧಿಸಿದ ಆರ್ಥಿಕ ನಿರ್ಬಂಧಗಳ ಪರಿಣಾಮಗಳನ್ನು ಸ್ವಲ್ಪ ಮಟ್ಟಿಗೆ ತಡೆದುಕೊಳ್ಳುವ ಸ್ಥಿತಿಯಲ್ಲಿದೆ.

ಚಿನ್ನದ ಗಣಿಗಳನ್ನು ರಾಷ್ಟ್ರೀಕರಣಗೊಳಿಸಿದ ನಂತರ ಟ್ರವೋರ್ ಸರ್ಕಾರವು ಕುಶಲಕರ್ಮಿ ಚಿನ್ನದ ವಲಯವನ್ನೂ ಸಹ ನಿಯಂತ್ರಿಸಿತು. ದೇಶದಲ್ಲಿ ಒಂದು ಚಿನ್ನ ಸಂಸ್ಕರಣಾಗಾರವನ್ನು ಸ್ಥಾಪಿಸಿತು. ಬುರ್ಕಿನಾ ಫಾಸೊದ ಇತರ ಪ್ರಾಥಮಿಕ ಉತ್ಪನ್ನಗಳನ್ನು ದೇಶೀಯವಾಗಿ ಸಂಸ್ಕರಿಸುವ ಕಾರ್ಖಾನೆಗಳನ್ನು ನಿರ್ಮಿಸಿತು. ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ರೈತರಿಗೆ ಸಹಾಯಮಾಡಿತು ಮತ್ತು ಆಹಾರ ಧಾನ್ಯ ಸ್ವಾವಲಂಬನೆಯನ್ನು ಸಾಧಿಸುವ ಕ್ರಮಗಳನ್ನು ಕೈಗೊಂಡಿತು.



ಥಾಮಸ್ ಶಂಕರ

'ಕ್ಷಿಪ್ರಕ್ರಾಂತಿ' ಪ್ರಯತ್ನ

ಈ ಕ್ರಮಗಳು ಅಮೆರಿಕವನ್ನು ಕೆರಳಿಸಿದವು ಎಂಬುದು ಅನಿರೀಕ್ಷಿತವೇನಲ್ಲ. ಅಮೆರಿಕದ ಸೆನೆಟ್ ಸಮಿತಿಯು ನಡೆಸಿದ ಒಂದು ವಿಚಾರಣೆಯ ಮುಂದೆ ಹಾಜರಾಗಿ ಹೇಳಿಕೆ ನೀಡಿದ ಯುಎಸ್ ಆಫ್ರಿಕಾ ಕಮಾಂಡ್ (ಆಫ್ರಿಕೋಂ) ಮುಖ್ಯಸ್ಥ ಜನರಲ್ ಮೈಕೆಲ್ ಲ್ಯಾಂಗ್ಲಿ, ಚಿನ್ನದ ಗಣಿಗಳಿಂದ ಗಳಿಸಿದ ಆದಾಯವನ್ನು ತಮ್ಮ ವೈಯಕ್ತಿಕ ಬಳಕೆಗಾಗಿ ಮತ್ತು ಅದರಲ್ಲೂ ಮುಖ್ಯವಾಗಿ ತಮ್ಮ ವೈಯಕ್ತಿಕ ಭದ್ರತೆಯನ್ನು ಹೆಚ್ಚಿಸಿಕೊಳ್ಳಲು ಇಬ್ರಾಹಿಂ ಟ್ರವೋರ್ ಖರ್ಚುಮಾಡಿದ್ದಾರೆ ಎಂದು ದುರುದ್ದೇಶಪೂರ್ವಕವಾಗಿ ಆರೋಪಿಸಿದರು. ಆಫ್ರಿಕಾದ ಮಾಧ್ಯಮಗಳಿಂದ ವ್ಯಾಪಕವಾಗಿ ಪ್ರಚಾರ ಪಡೆದ ಲ್ಯಾಂಗ್ಲಿಯ ಈ ಹೇಳಿಕೆಗಳು ಇಡೀ ಆಫ್ರಿಕಾ ಖಂಡದ ಜನರಿಂದ ವ್ಯಾಪಕವಾಗಿ ಟೀಕಿಸಲ್ಪಟ್ಟವು. ಆದರೆ, ಲ್ಯಾಂಗ್ಲಿಯ ಹೇಳಿಕೆಗಳು ಬಹುಶಃ ಟ್ರವೋರ್ ವಿರುದ್ಧ "ಕ್ಷಿಪ್ರಕ್ರಾಂತಿ" ಎಬ್ಬಿಸುವ ಒಂದು ವೇದಿಕೆಯನ್ನು ಸಿದ್ಧಪಡಿಸುವ ಉದ್ದೇಶವನ್ನು ಹೊಂದಿದ್ದವು. ಟ್ರವೋರ್ ಸರ್ಕಾರದ "ಸರ್ವಾಧಿಕಾರಿ" ಸ್ವರೂಪ ಮತ್ತು ಬುರ್ಕಿನಾ ಫಾಸೊದಲ್ಲಿ ನಡೆಯುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆಯ ಹೆಸರಿನಲ್ಲಿ ಪಶ್ಚಿಮದ ಮಾಧ್ಯಮಗಳಲ್ಲಿ ಹೆಸರಿಲ್ಲದ ಮೂಲಗಳಿಂದ ಬಂದ ಬರಹಗಳ ಮಹಾಪೂರದ ನಡುವೆ, ಏಪ್ರಿಲ್ 16ರಂದು ದಂಗೆಯ ಒಂದು ವಿಫಲ ಪ್ರಯತ್ನವೂ ನಡೆಯಿತು ಮತ್ತು ಸಂಚುಕೋರರನ್ನು ಬಂಧಿಸಲಾಯಿತು. ಈ ರೀತಿಯಲ್ಲಿ, ಕ್ರಾಂತಿಕಾರಿ ಥಾಮಸ್ ಶಂಕರ ಅವರಿಗೆ ಎದುರಾದ ದುರ್ಗತಿ ಕ್ಯಾಪ್ಟನ್ ಇಬ್ರಾಹಿಂ ಟ್ರವೋರ್ ಅವರಿಗೆ ಎದುರಾಗದಂತೆ ಖಚಿತಪಡಿಸಿಕೊಳ್ಳಲಾಯಿತು.

ದಂಗೆಯ ಈ ಪ್ರಯತ್ನಗಳು, ಆಫ್ರಿಕಾದ ಫ್ರೆಂಚ್ ಭಾಷಿಕ ದೇಶಗಳೂ ಸೇರಿದಂತೆ ಆಫ್ರಿಕಾ ಖಂಡದಲ್ಲಿ ವಸಾಹತುಶಾಹಿಯ ವಿರುದ್ಧ ನಡೆಸುವ ಹೋರಾಟವು ಎಷ್ಟೆಷ್ಟು ಎಡರುತೊಡರುಗಳನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಒತ್ತಿಹೇಳುತ್ತವೆ. ವಸಾಹತುಶಾಹಿಯನ್ನು ಒದ್ದೋಡಿಸಲು ಆಫ್ರಿಕದ ಯಾವುದೇ ಸರ್ಕಾರವು ಮಾಡುವ ಪ್ರಯತ್ನಗಳಿಗೆ ಸಾಮ್ರಾಜ್ಯಶಾಹಿಯ ವರ್ತಿಸುವ ರೀತಿ ಹೇಗಿರುತ್ತದೆ ಎಂದರೆ, ನಾವು ಯಾವುದೋ ಒಂದು ಹಳೆಯ ಮತ್ತು ಅದೇ ರೀತಿಯ ಹಳಸಲು ಕಥಾನಕವನ್ನೇ ಓದುತ್ತಿದ್ದೇವೆಯೋ ಎಂಬಂತೆ ಭಾಸವಾಗುತ್ತದೆ. ಈ ಎಡರುತೊಡರುಗಳು ಅನೇಕ ಮೂಲಗಳಿಂದ ಉದ್ಭವಿಸುತ್ತವೆ. ಉದಾಹರಣೆಗೆ, ಬುರ್ಕಿನಾ ಫಾಸೊ ಸಾಮ್ರಾಜ್ಯಶಾಹಿಯನ್ನು ಎದುರಿಸುತ್ತಿರುವ ಹೊತ್ತಿನಲ್ಲೇ ಇಸ್ಲಾಮಿಕ್ ಭಯೋತ್ಪಾದಕರ ದಂಗೆಯನ್ನೂ ಎದುರಿಸುತ್ತಿದೆ. ಅವರು ದೇಶದ ಶೇ. 40ರಷ್ಟು ಭೂಪ್ರದೇಶವನ್ನು ನಿಯಂತ್ರಿಸುತ್ತಾರೆ. ಮತ್ತು ಈ ಪ್ರದೇಶವು ಸಾಮ್ರಾಜ್ಯಶಾಹಿಯಿಂದ ಹಣ ಪಡೆಯುವ ಮತ್ತು ಯಾವುದೇ ಪರಿಣಾಮಕಾರಿ ವೇದಿಕೆಗಳನ್ನು ಹೊಂದಿಲ್ಲದಂತೆ ಮಾಡಲ್ಪಟ್ಟಿರುವ ಜನಗಳಿಂದ ಕಾಲಕಾಲಕ್ಕೆ ಕಾಟಾಚಾರಕ್ಕೆ ನಡೆಸುವ ಚುನಾವಣೆಗಳ ಮೂಲಕ ಅಧಿಕಾರ ಪಡೆಯುವ ಪಾಶ್ಚಿಮಾತ್ಯ-ಪರ ಆಡಳಿತಗಳಿಂದ ಕೂಡಿದೆ. ಸಾಮ್ರಾಜ್ಯಶಾಹಿಯು ಈ ಆಡಳಿತಗಳನ್ನು ಅವರ ದಾರಿಯನ್ನು ಹಿಡಿಯದ ಸರ್ಕಾರಗಳ ವಿರುದ್ಧ ನಿರ್ಬಂಧಗಳನ್ನು ವಿಧಿಸುವಂತೆ ಮತ್ತು ಕ್ಷಿಪ್ರದಂಗೆಗಳನ್ನು ಏರ್ಪಡಿಸಲು ನೆಲೆಗಳನ್ನು ಒದಗಿಸುವಂತೆ ಮಾಡಿ ತನ್ನ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಬಳಸುತ್ತದೆ.

ಉದಾಹರಣೆಗೆ, ಪಶ್ಚಿಮ ಆಫ್ರಿಕಾದ ಪ್ರಭುತ್ವಗಳ ಆರ್ಥಿಕ ಸಮುದಾಯ(ಇಸಿಒಡಬ್ಲ್ಯುಎಎಸ್)ವನ್ನು ಬುರ್ಕಿನಾ ಫಾಸೊ ವಿರುದ್ಧ ಎತ್ತಿಕಟ್ಟಲಾಯಿತು. ಅದು ಪ್ರಜಾಪ್ರಭುತ್ವವನ್ನು ರಕ್ಷಿಸುವ ಹೆಸರಿನಲ್ಲಿ ಬುರ್ಕಿನಾ ಫಾಸೊ ಮೇಲೆ ಆರ್ಥಿಕ ನಿರ್ಬಂಧಗಳನ್ನು ಹೇರುವ ಬೆದರಿಕೆ ಹಾಕಿತು. ಏಕೆಂದರೆ ಅಲ್ಲಿನ ಕ್ರಾಂತಿಕಾರಿ ಆಡಳಿತವು "ಪ್ರಜಾಪ್ರಭುತ್ವ ರೀತಿಯಲ್ಲಿ ಚುನಾಯಿತವಾದ" ಪಾಶ್ಚಿಮಾತ್ಯ-

ಪುಟ 15 ಕ್ಕೆ

ಬಂದೂಕಗಳು ಮೌನವಾಗಿವೆ, ಇದೀಗ ಕೆಲವು ಪ್ರಶ್ನೆಗಳನ್ನು ಕೇಳುವ ಸಮಯ

ಎನ್ನುತ್ತಾರೆ ಸಿಪಿಐ(ಎಂ) ಸಂಸದ ಡಾ. ಜಾನ್ ಬ್ರಿಟ್ಟಾಸ್



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ವಾರ್ತಾಭಾರತಿ

ಮತಾಂಧತೆ ಮತ್ತು ಆಳವಾದ ಧ್ರುವೀಕರಣ ಪಾಕಿಸ್ತಾನವನ್ನು ಅಧಃಪತನದತ್ತ ಹೇಗೆ ಕೊಂಡೊಯ್ಯುತ್ತಿದೆ ಎಂಬುದರ ನಿಜವಾದ ಚಿತ್ರವನ್ನು ಪ್ರಸ್ತುತಪಡಿಸಲು ನಮ್ಮ ಮಾಧ್ಯಮಗಳು ಒಮ್ಮೆಯೂ ಪ್ರಯತ್ನಿಸಿಲ್ಲ ಎಂಬುದು ಗಮನಿಸಬೇಕಾದ ಸಂಗತಿ. ಮತೀಯ ಪ್ರಭುತ್ವದ ಅಪಾಯಗಳನ್ನು ವಿಮರ್ಶೆ ಮಾಡುವ ಬದಲು, ಭಾರತದಲ್ಲಿಯೂ ಪಾಕಿಸ್ತಾನದಂತೆ ಒಂದು ಪ್ರತಿಗಾಮಿ ಹಿಂದುತ್ವ ಭಾರತ ಹೊರಹೊಮ್ಮುವ ಅಪಾಯವನ್ನು ಮರೆಮಾಚುವುದೇ ವಾಸಿ ಎಂದು ಅವರು ಬಗೆದಿದ್ದಾರೆಯೇ? ಸಮಕಾಲೀನ ರಾಜಕೀಯದಲ್ಲಿ ಪ್ರಸ್ತುತವಾದ ಪ್ರಶ್ನೆಯೆಂದರೆ, ಅರ್ಥವ್ಯವಸ್ಥೆಯನ್ನು ಬಲಪಡಿಸುವ ಮೂಲಕ ನಮಗೆ ಬೆದರಿಕೆಯೊಡ್ಡುತ್ತಿರುವ ನಿರುದ್ಯೋಗ ಮತ್ತು ಹಣದುಬ್ಬರವನ್ನು ಪರಿಹರಿಸಬೇಕೆ ಅಥವಾ ಪಾಕಿಸ್ತಾನದಂತೆ ಗುಂಡಿನ ಚಕಮಕಿಯಲ್ಲಿ ಹಿಂಸಾಚಾರದ ದಾರಿಯಲ್ಲಿ ಸಾಗಬೇಕೇ ಎಂಬುದು.

–ಕನ್ನಡಕ್ಕೆ– ಸಿ.ಸಿದ್ದಯ್ಯ

(ಮೂಲ ಲೇಖನ ಕೃಪೆ: ದಿ ಫೆಡರಲ್, ಮೇ 13)

ತೀವ್ರಗಾಮಿ ರಾಷ್ಟ್ರವಾದದ ಬಗ್ಗೆ ಹಲವು ವಿವರಣೆಗಳು ಮತ್ತು ಉಲ್ಲೇಖಗಳಿವೆ. ಸಮಾಜವೊಂದು 'ಒಂದು ಕಣ್ಣಿಗೆ ಒಂದು ಕಣ್ಣು' ಎನ್ನುವ ಮಟ್ಟಕ್ಕೆ ಹೋದರೆ ಅದು ಜಗತ್ತನ್ನು ಸಂಪೂರ್ಣ ಕತ್ತಲೆಯತ್ತ ಕೊಂಡೊಯ್ಯುತ್ತದೆ ಎಂದು ಮಹಾತ್ಮ ಗಾಂಧಿ ಒಂದೊಮ್ಮೆ ಎಚ್ಚರಿಸಿದ್ದರು. ಪಹಲ್ಗಾಮ್ ಭಯೋತ್ಪಾದಕ ದಾಳಿ, ಆಪರೇಷನ್ ಸಿಂಧೂರ್, ಗಡಿ ಸಂಘರ್ಷ ಮತ್ತು ನಂತರದ ಕದನ ವಿರಾಮ ದೇಶವನ್ನು ವಿಚಾರಮಂಥನದ ಕವಲು ದಾರಿಯಲ್ಲಿ ತಂದು ನಿಲ್ಲಿಸಿವೆ. 'ಯುದ್ಧವು ಪರಿಹಾರಗಳಿಗಿಂತ ಹೆಚ್ಚಾಗಿ ಬಿಕ್ಕಟ್ಟುಗಳನ್ನು ಸೃಷ್ಟಿಸುತ್ತದೆ' ಎಂಬ ನಾಣ್ಣುಡಿಯ ಬೆಳಕಿನಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವಿನ ಕದನ ವಿರಾಮವನ್ನು ನೋಡಬೇಕು. ಎರಡೂ ದೇಶಗಳ ಜನರ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ಶಾಂತಿ ಅತ್ಯಗತ್ಯ ಎಂಬುದನ್ನು ಯಾರೂ ಅಲ್ಲಗಳೆಯುವುದಿಲ್ಲ. ಅದೇ ಸಮಯದಲ್ಲಿ, ಭಾರತವನ್ನು ನಿರಂತರವಾಗಿ ಕೆಣಕುತ್ತಿರುವ ಪಾಕಿಸ್ತಾನದ ಭಯೋತ್ಪಾದನೆಯನ್ನು ಹೇಗೆ ಎದುರಿಸುವುದು ಎಂಬುದು ಸಹ ಪ್ರಸ್ತುತವಾದ ಪ್ರಶ್ನೆಯಾಗಿದೆ.

ಸಮಸ್ಯೆಗೆ ಪರಿಹಾರ ಒಂದು ಸೂಕ್ಷ್ಮ ಮತ್ತು ಬಹುಮುಖಿ ನಿಲುವಿನ ಮೂಲಕವಲ್ಲ, ಬದಲಾಗಿ ಫಿರಂಗಿಯ ನಳಿಕೆಯ ಮೂಲಕ ಮಾತ್ರ ಬರಬಹುದು ಎಂಬ ತೀವ್ರಗಾಮಿ ರಾಷ್ಟ್ರವಾದಿ ಸಿದ್ಧಾಂತದ ವಿರುದ್ಧ ಹೋರಾಡುವ ಸಮಯ ಇದು. ಪಾಕಿಸ್ತಾನಿ ಭಯೋತ್ಪಾದಕರು ಪಹಲ್ಗಾಮ್‌ನಲ್ಲಿ 26 ಅಮಾಯಕ ಜನರನ್ನು ಹತ್ಯೆ ಮಾಡಿದ್ದಾರೆ ಎಂಬುದನ್ನು ಕೇವಲ ಮತೀಯ ಕನ್ನಡಕದಿಂದ ನೋಡುವ ಪ್ರವೃತ್ತಿಗೆ ಸವಾಲು ಹಾಕಬೇಕಾಗಿದೆ. ಕಲ್ಮಾ ಅಥವ ಅಲ್ಲಾನ ಉಲ್ಲೇಖ ಮತಾಂಧತೆಯ ಆಧಾರದ ಮೇಲೆ ಸೃಷ್ಟಿಯಾದ ಮತ್ತು ಧಾರ್ಮಿಕ ಉಗ್ರವಾದದತ್ತ ಸಾಗುತ್ತಿರುವ ದೇಶವಾದ ಪಾಕಿಸ್ತಾನದ ದ್ವೇಷಪೂರಿತ ರಣತಂತ್ರದ ಭಾಗವೇ ಆಗಿದೆ, ಅದಕ್ಕೆ ಪ್ರತಿಯಾಗಿ ನಮ್ಮ ಕಡೆಯಿಂದ ಯುದ್ಧೋನ್ಮಾದ, ನಮ್ಮ ವಿಮರ್ಶಾತ್ಮಕ ಯೋಚನೆಗಳನ್ನು ಮುಳುಗಿಸಿ ಬಿಡುತ್ತದೆ.

'ಒಂದು ದೇಶವನ್ನು ನಾಶಮಾಡಲು ಅತ್ಯಂತ ಸುಲಭವಾದ ಮಾರ್ಗವೆಂದರೆ ತೀವ್ರಗಾಮಿ ರಾಷ್ಟ್ರವಾದ ಮತ್ತು ಮತ್ತು ಯುದ್ಧಕೋರತೆ ಎಂದು ನಾಜಿ ಜರ್ಮನಿ ಸೇರಿದಂತೆ ಹಲವು ಐತಿಹಾಸಿಕ ದಾಖಲೆಗಳು ಹೇಳುತ್ತವೆ. ಭಾರತ ಮತ್ತು ಪಾಕಿಸ್ತಾನದ ನಡುವಿನ ಕದನ ವಿರಾಮದಿಂದ ನಿರಾಸೆಗೊಂಡು, ಆಘಾತಕಾರಿ ಕಮೆಂಟ್‌ಗಳನ್ನು ಪೋಸ್ಟ್ ಮಾಡುವ ಬಲಪಂಥೀಯ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ವಿಷವುಗುಳುವ ಚರ್ಚೆಗಳನ್ನು ನೋಡಿದರೆ, ನಮ್ಮ ಮೇಲೆ ಆವರಿಸಿರುವ ಅಪಾಯದ ಒಂದು ನೋಟವನ್ನು ನಾವು ಪಡೆಯಬಹುದು.

'ಆಪರೇಷನ್ ಸಿಂಧೂರ್' ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಕರೆದಿದ್ದ ಸರ್ವಪಕ್ಷ ಸಭೆಯಲ್ಲಿ ಸಿಪಿಐ(ಎಂ) ಒಂದು ಸ್ಪಷ್ಟ ನಿಲುವನ್ನು ತೆಗೆದುಕೊಂಡಿತು: ಯುದ್ಧ ಅಪೇಕ್ಷಣೀಯವಲ್ಲ, ಸಂಘರ್ಷವನ್ನು ಶಮನಗೊಳಿಸುವುದು ಅಗತ್ಯ. ಭಾರತವು ಒಂದು ಪ್ರಜಾಪ್ರಭುತ್ವ ರಾಷ್ಟ್ರವಾಗಿ ಮತ್ತು ಜಗತ್ತಿಗೆ ಮಾದರಿಯಾಗಿ, ಶಾಂತಿಯನ್ನು ಅನುಸರಿಸುವ ಸಾಮರ್ಥ್ಯವನ್ನೂ ಹೊಂದಿದೆ, ಹೊಣೆಯನ್ನೂ ಹೊಂದಿದೆ. ಭಾರತವು ಕದನ ವಿರಾಮದತ್ತ ಹೆಜ್ಜೆ ಇಟ್ಟಿರುವುದರಿಂದ, ಸಿಪಿಐ(ಎಂ)ನ ನಿಲುವಿನ ವಿಶ್ವಾಸಾರ್ಹತೆ ಮತ್ತು ಬಲವನ್ನು ಗುರುತಿಸಬೇಕಾಗಿದೆ.


'ನೀವು ವಿಐಪಿಗಳಿಗೆ ಮಾತ್ರ ರಕ್ಷಣೆ ಕೊಡುತ್ತೀರಿ–ನಮ್ಮಂತವರಿಗಲ್ಲ"
ಗುಜರಾತಿನಲ್ಲಿ ಬಿಜೆಪಿ ಮಂತ್ರಿಗೆ ಭಯೋತ್ಪಾದನೆ ಸಂತ್ರಸ್ತೆಯ ಆಕ್ರೋಶ

'ಸೂಪರ್ ಮಧ್ಯಸ್ಥಿಕೆದಾರ'ನಾಗಿ ಅಮೆರಿಕ

ಎರಡೂ ದೇಶಗಳು ಶಾಂತಿಗೆ ಮರಳುತ್ತಿರುವಂತೆಯೇ, ಸಂಘರ್ಷದ ನಂತರದಲ್ಲಿ ಹಲವು ಅನುಮಾನಗಳು ಮತ್ತು ಪ್ರಶ್ನೆಗಳು ಹಾಗೆಯೇ ಉಳಿದಿವೆ. ಇವುಗಳಲ್ಲಿ ಮುಖ್ಯವಾದದ್ದು ಒಂದು ಸೂಪರ್ ಮಧ್ಯಸ್ಥಿಕೆದಾರನಾಗಿ ಬಂದ ಅಮೆರಿಕದ ಪಾತ್ರಕ್ಕೆ ಸಂಬಂಧಿಸಿದೆ

ಕದನ ವಿರಾಮವನ್ನು ಅಧಿಕೃತವಾಗಿ ಘೋಷಿಸುವ ಮೊದಲೇ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎರಡೂ ದೇಶಗಳು ಶಾಂತಿಗೆ ಮರಳುವಂತೆ ಆಗ್ರಹಿಸಿದ್ದೇನೆ ಮತ್ತು ಆ ಬಗ್ಗೆ ಶೀಘ್ರದಲ್ಲೇ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಹೇಳಿಕೊಂಡಿದ್ದರು. ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಅವರ ವಿವರವಾದ ಹೇಳಿಕೆ ಕಸಿವಿಸಿಯನ್ನು ಮತ್ತಷ್ಟು ಹೆಚ್ಚಿಸಿತು. ತನ್ನ ನೇತೃತ್ವದಲ್ಲಿ ಭಾರತ–ಪಾಕಿಸ್ತಾನ ವಿಷಯದ ಕುರಿತು ನಡೆದ ಸಮಾಲೋಚನೆಗಳ ಸಾರಾಂಶವನ್ನೇ ಅವರು ಪ್ರಸ್ತುತಪಡಿಸಿದರು. ಇದು ಹೊರಗಣ ಹಸ್ತಕ್ಷೇಪದ ಬಗ್ಗೆ ಮತ್ತಷ್ಟು ಪ್ರಶ್ನೆಗಳನ್ನು ಎಬ್ಬಿಸಿತು.

ರೂಬಿಯೊ ತಮ್ಮ ಕದನ ವಿರಾಮದ ಪ್ರಯತ್ನಗಳನ್ನು ವಿವರಿಸಲು ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ, ವಿದೇಶಾಂಗ ಸಚಿವ ಎಸ್.ಜಯಶಂಕರ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ಪಾಕಿಸ್ತಾನದ ಪ್ರಧಾನ ಮಂತ್ರಿ ಶೆಹಬಾಸ್ ಷರೀಪ್, ಪಾಕಿಸ್ತಾನ ವಿದೇಶಾಂಗ ಸಚಿವ ಮೊಹಮ್ಮದ್ ಇಶಾಕ್, ಸೇನಾ ಮುಖ್ಯಸ್ಥ ಅಸಿಮ್ ಮುನೀರ್ ಅವರ ಹೆಸರುಗಳನ್ನು ಉಲ್ಲೇಖಿಸಿದರು.

ಇಂತಹ ಹೇಳಿಕೆಗಳು ಕಾಶ್ಮೀರ ಸೇರಿದಂತೆ ಪಾಕಿಸ್ತಾನದೊಂದಿಗಿನ ವಿವಾದಗಳ ಕುರಿತು ಭಾರತದ ದೀರ್ಘಕಾಲೀನ ನಿಲುವಿಗೆ ತದ್ವಿರುದ್ಧವಾದವುಗಳು ಎಂಬುದನ್ನು ಕಾಣಬೇಕು. 1972ರ ಸಿಮ್ಲಾ ಒಪ್ಪಂದದ ಮೂಲ ಉದ್ದೇಶ ದ್ವಿಪಕ್ಷೀಯ ಮಾತುಕತೆಗಳ ಮೂಲಕ ಸಮಸ್ಯೆಗಳನ್ನು ಪರಿಹರಿಸುವುದಾಗಿತ್ತು. ಹಲವು ವಿದೇಶಗಳು ವಿವಿಧ ಹಂತಗಳಲ್ಲಿ ಮಧ್ಯಸ್ಥಿಕೆಯ ಹಸ್ತಗಳನ್ನು ಚಾಚಿದರೂ, ಭಾರತ ಅವೆಲ್ಲವನ್ನೂ ದೃಢವಾಗಿ ತಿರಸ್ಕರಿಸಿತು. ಐ.ಕೆ.ಗುಜ್ರಾಲ್ ಅವರು ಪ್ರಧಾನಿಯಾಗಿದ್ದಾಗ ಬ್ರಿಟನ್ ಇಂತಹದೊಂದು ಹೆಜ್ಜೆ ಮುಂದಿಟ್ಟಾಗ "ಇಂತಹ ನೆರವು ನೀಡುವುದಾಗಿ ಹೇಳಲು ಬ್ರಿಟನ್ 'ಆರೋಗ್ಯ' ಎಂತಹದು" ಎಂದು ವ್ಯಂಗ್ಯವಾಗಿ ಹೇಳಿದ್ದು ಹೊರಗಣ ಹಸ್ತಕ್ಷೇಪದ ವಿರುದ್ಧ ಭಾರತದ ಅಚಲ ವಿರೋಧವನ್ನು ಸಾರಿ ಹೇಳಿತ್ತು.

ಇದೊಂದು ಸಕಾರಣವಾದ ಕಳವಳವನ್ನು ಎತ್ತಿದೆ: ಪ್ರಧಾನ ಮಂತ್ರಿ ಮೋದಿಯವರ ಧೋರಣೆಯು ಅವರಿಗೆ ಅರಿವಿಲ್ಲದೆಯೇ ಕಾಶ್ಮೀರ ಸಮಸ್ಯೆಯನ್ನು ಅಂತರಾಷ್ಟ್ರೀಯಗೊಳಿಸಲು ದಾರಿ ಮಾಡಿಕೊಟ್ಟಿತೇ? ಇದು ಮುಂದಿನ ದಿನಗಳಲ್ಲಿ ಇನ್ನಷ್ಟು ಗಟ್ಟಿಗೊಳ್ಳಬಹುದಾದ ಪ್ರಶ್ನೆ. ಅದಕ್ಕಿಂತಲೂ ಹೆಚ್ಚು ಕಾಡುವ ಪ್ರಶ್ನೆ "ನನ್ನ ಸ್ನೇಹಿತ ಟ್ರಂಪ್" ಎಂದು ಕೈಚಾಚುವ ಭರದಲ್ಲಿ ಭಾರತದ ಬಹುಕಾಲದ ಕಾರ್ಯವ್ಯೂಹವನ್ನು ಬಿಟ್ಟುಕೊಡುವಂತಾಗಿದೆಯೇ ಎಂಬುದು.

ಮಾಧ್ಯಮಗಳ ಕುರುಡು ಕಥನಗಳು

ಸಂಘರ್ಷದ ಸಮಯದಲ್ಲಿ ಮುಖ್ಯವಾಹಿನಿಯ ಮಾಧ್ಯಮಗಳು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಗಂಭೀರ ಪರೀಕ್ಷಣೆಗೆ ಒಳಪಡಿಸಬೇಕು. ನಮ್ಮ ಮಾಧ್ಯಮಗಳು ಯುದ್ಧೋನ್ಮಾದದ ಅತ್ಯಂತ ಅಪಾಯಕಾರಿ ಮಾದರಿಯನ್ನು ಅನಾವರಣಗೊಳಿಸಿವೆ. ಅಂಧಾಭಿಮಾನದ ವಿಷಯದಲ್ಲಿ ಭಾರತದ ಮಾಧ್ಯಮಗಳು ಪಾಕಿಸ್ತಾನದ ಮಾಧ್ಯಮಗಳೊಂದಿಗೆ ಪೈಪೋಟಿ ನಡೆಸಿದವು. ಪಾಕಿಸ್ತಾನವನ್ನು ಚಚ್ಚಿ ಹಾಕಲು ಭಾರತಕ್ಕೆ ಇದು ಒಂದು ಸುವರ್ಣಾವಕಾಶ ಎಂಬುದು ಮಾಧ್ಯಮ ಚರ್ಚೆಯ ಮುಖ್ಯ ಸಂದೇಶವಾಗಿತ್ತು.

ಈ ಅಸಂಬದ್ಧತೆಯನ್ನು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆದ ಟ್ವೀಟ್ ವ್ಯಂಗ್ಯವಾಗಿ ಹೀಗೆ ಸೆರೆ ಹಿಡಿದಿದೆ:

"ಝೀ ಟಿವಿ ಕರಾಚಿಯನ್ನು ವಶಪಡಿಸಿಕೊಂಡಿತು,
ಎನ್‌ಡಿಟಿವಿ ಇಸ್ಲಾಮಾಬಾದನ್ನು ವಹಿಸಿಕೊಂಡಿತು,
ರಿಪಬ್ಲಿಕ್ ಟಿವಿ ರಾವಲ್ಪಿಂಡಿಯನ್ನು ಹಿಡಿಯಿತು."


ಈ ಮಾಧ್ಯಮಗಳು ಉದ್ರೇಕಕಾರಿ ಕಥೆಗಳೊಂದಿಗೆ ಪ್ರೇಕ್ಷಕರನ್ನು ಆಕರ್ಷಿಸಲು ಮತ್ತು ಅವರ ಗಮನವನ್ನು ಸೆಳೆಯಲು ನವೀನ ತಂತ್ರಗಳನ್ನು ರೂಪಿಸಿಕೊಂಡವು.

ಸಾಮಾನ್ಯವಾಗಿ, ಸರಕಾರ–ಪರ ಮಾಧ್ಯಮಗಳು ಧ್ರುವೀಕರಣಗೊಂಡ ರಾಜಕೀಯ ಸಂದೇಶಗಳನ್ನು ಇನ್ನಷ್ಟು ಹಿಗ್ಗಿಸಿ ಪಸರಿಸಬೇಕು ಎಂದು ಆಳುವವರು ನಿರೀಕ್ಷಿಸುತ್ತಾರೆ. ಆದರೆ ಈ ಬಾರಿ ಮಾಧ್ಯಮಗಳ ಮೇರೆ ಮೀರಿದ ಹುರುಪು ಕಂಡು ಕೇಂದ್ರ ಸರಕಾರವೂ ಅವಾಕ್ಕಾದಂತೆ ಕಾಣುತ್ತದೆ. ಈ ಸಂದರ್ಭದಲ್ಲಿ ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ಮಧ್ಯಪ್ರವೇಶಿಸಿ ಮಾಧ್ಯಮಗಳು ಸಂಯಮ ವಹಿಸುವಂತೆ ಒಂದಲ್ಲ ಹಲವು ಬಾರಿ ಸಲಹೆ ನೀಡಬೇಕಾಯಿತು.

ಪಾಕಿಸ್ತಾನದ ಅಧಃಪತನದ ಮಾರ್ಗ
"ಮೂರು ದಶಕಗಳ ಹೊಲಸು ಕೆಲಸ"

ಮತಾಂಧತೆ ಮತ್ತು ಆಳವಾದ ಧ್ರುವೀಕರಣ ಪಾಕಿಸ್ತಾನವನ್ನು ಅಧಃಪತನದತ್ತ ಹೇಗೆ ಕೊಂಡೊಯ್ಯುತ್ತಿದೆ ಎಂಬುದರ ನಿಜವಾದ ಚಿತ್ರವನ್ನು ಪ್ರಸ್ತುತಪಡಿಸಲು ನಮ್ಮ ಮಾಧ್ಯಮಗಳು ಒಮ್ಮೆಯೂ ಪ್ರಯತ್ನಿಸಿಲ್ಲ ಎಂಬುದು ಗಮನಿಸಬೇಕಾದ ಸಂಗತಿ. ಮತೀಯ ಪ್ರಭುತ್ವದ ಅಪಾಯಗಳನ್ನು ವಿಮರ್ಶೆ ಮಾಡುವ ಬದಲು, ಭಾರತದಲ್ಲಿಯೂ ಪಾಕಿಸ್ತಾನದಂತೆ ಒಂದು ಪ್ರತಿಗಾಮಿ ಹಿಂದುತ್ವ ಭಾರತ ಹೊರಹೊಮ್ಮುವ ಅಪಾಯವನ್ನು ಮರೆಮಾಚುವುದೇ ವಾಸಿ ಎಂದು ಅವರು ಬಗೆದಿದ್ದಾರೆ.

ಆರಂಭಿಕ ದಿನಗಳಲ್ಲಿ, ಪಾಕಿಸ್ತಾನಿಗಳು ಮತ್ತು ಭಾರತೀಯರ ➚



ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ, ಸೌತ್ ಫಸ್ಟ್

ಪಶ್ಚಿಮ ಆಫ್ರಿಕಾ........

ಪುಟ 13 ರಿಂದ

ಪರ ಸರ್ಕಾರವನ್ನು ಉರುಳಿಸುವ ಮೂಲಕ ಅಧಿಕಾರಕ್ಕೆ ಬಂದಿತ್ತು. ಆದರೆ ಈ ಪ್ರಯತ್ನವು ಯಶಸ್ವಿಯಾಗಲಿಲ್ಲ. ವಿಪರ್ಯಾಸವೆಂದರೆ, "ಪ್ರಜಾಪ್ರಭುತ್ವ ವಿರೋಧಿ" ಎಂದು ಕರೆಯಲ್ಪಡುವ ಇಬ್ರಾಹಿಂ ಟ್ರವೊರ್, ಬುರ್ಕಿನಾಬ್‌ಗಳ ಜನಪ್ರಿಯ ಬೆಂಬಲವನ್ನು ಬಲವಾಗಿ ಹೊಂದಿದ್ದರು ಎಂಬುದು ಅವರ ಸರ್ಕಾರವನ್ನು ಬೆಂಬಲಿಸುವ ಬಹು ದೊಡ್ಡ ಬೀದಿ ಪ್ರದರ್ಶನಗಳು ತೋರಿಸಿವೆ; ಮತ್ತು ಮೇಲೆ ಹೇಳಿದ ಸಹೇಲ್ ದೇಶಗಳ ಸಂಘ (ಎಇಎಸ್) ಇಸಿಓಡಬ್ಲ್ಯುಎಎಸ್ ನಿಂದ ಸಿಡಿದು ಹೋಗಿ ರಚನೆಯದ ಸಂಘ. ಬುರ್ಕಿನಾ ಫಾಸೊದಲ್ಲಿ ದಂಗೆಗಳನ್ನು ನಡೆಸಲು ಫ್ರೆಂಚ್ ಹಿತಾಸಕ್ತಿಗಳಿಗೆ ನೆಲೆಯಾಗಿ ನೆರೆಯ ದೇಶ ಐವರಿ ಕೋಸ್ಟ್ ಅನ್ನು ಬಳಸಲಾಗಿದೆ. ವಾಸ್ತವವಾಗಿ, ಥಾಮಸ್ ಶಂಕರ ವಿರುದ್ಧ ನಡೆದ ದಂಗೆಯ ಸಂಚುಕೋರರು ಅಂತಿಮವಾಗಿ ಐವರಿ ಕೋಸ್ಟ್‌ಗೆ ಓಡಿಹೋಗಿದ್ದರು ಮತ್ತು ಅವರು ಈಗಲೂ ಅಲ್ಲಿಯೇ ಆಶ್ರಯ ಪಡೆಯುತ್ತಿದ್ದಾರೆ ಮಾತ್ರವಲ್ಲ, ಈ ವರ್ಷದ ಏಪ್ರಿಲ್‌ನಲ್ಲಿ ನಡೆದ ವಿಫಲ ದಂಗೆಯೂ ಸಹ ಐವರಿ ಕೋಸ್ಟ್ ಅನ್ನು ತನ್ನ ನೆಲೆಯಾಗಿ ಬಳಸಿಕೊಂಡಿತ್ತು ಎಂದು ವರದಿಯಾಗಿದೆ.

ಆಫ್ರಿಕಾದಾದ್ಯಂತ ಬೆಂಬಲ

ಎಷ್ಟೇ ಎಡರುತೊಡರುಗಳು ಎದುರಾದರೂ ಸಹ, ಪಶ್ಚಿಮ ಆಫ್ರಿಕಾದಲ್ಲಿ ಆರಂಭವಾದ ನಿರ್ವಸಾಹತೀಕರಣ ಪ್ರಕ್ರಿಯೆಯ ಚಾಲನೆಯು ಒಟ್ಟಾರೆಯಾಗಿ ಆಫ್ರಿಕಾ ಖಂಡದಲ್ಲಿ ಅಪಾರವಾದ ಮತ್ತು ಉತ್ಸಾಹಭರಿತ ಬೆಂಬಲವನ್ನು ಪಡೆಯುತ್ತಿದೆ. ಸಾಮ್ರಾಜ್ಯಶಾಹಿಗಳು ಬುರ್ಕಿನಾ ಫಾಸೊವನ್ನು ತೊರೆಯುವಂತೆ ಒತ್ತಾಯಿಸುವ ಮತ್ತು ಇಬ್ರಾಹಿಂ ಟ್ರವೊರ್ ಅವರನ್ನು ಬೆಂಬಲಿಸುವ ಜನರು ಆಫ್ರಿಕಾದ ಉದ್ದಗಲಕ್ಕೂ ಸಾವಿರಾರು ಪ್ರದರ್ಶನಗಳನ್ನು ನಡೆಸಿದ್ದಾರೆ. ಪ್ಯಾಟ್ರಿಸ್ ಲುಮುಂಬಾ, ಅಮಿಲ್ಕಾರ್ ಕ್ಯಾಬ್ರಾಲ್, ಎಡ್ವರ್ಡೊ ಮೊಂಡ್ಲೇನ್ ಮತ್ತು ಥಾಮಸ್ ಶಂಕರ ಮುಂತಾದವರು ತಮ್ಮ ಪ್ರಾಣವನ್ನು ಬಲಿದಾನ ಮಾಡಿದ ಉದ್ದೇಶ ಮತ್ತು ಕ್ವಾಮೆ ಎನ್‌ಕ್ರುಮ ಮತ್ತು ಜೂಲಿಯಸ್ ನೈರೆರೆ ತಮ್ಮ ಜೀವನದುದ್ದಕ್ಕೂ ಯಾವ ಧ್ಯೇಯದಿಂದ



ಜೂಲಿಯಸ್ ನೈರೆರೆ ಮತ್ತು ಕ್ವಾಮೆ ಎನ್‌ಕ್ರುಮ

ಹೋರಾಡಿದರೋ ಅದು ಆಫ್ರಿಕಾದ ಜನರಲ್ಲಿ ಬಲವಾಗಿ ಅಣುರಣನಗೊಳ್ಳುತ್ತಿದೆ. ಮತ್ತು ಆಫ್ರಿಕಾದ ವಿಮೋಚನೆಗಾಗಿ ನಡೆಯುತ್ತಿರುವ ಹೋರಾಟದಲ್ಲಿ ಹೊಸ ಅಧ್ಯಾಯವು ಆರಂಭವಾಗುತ್ತಿರುವುದನ್ನು ನಾವು ಪ್ರಸ್ತುತ ನೋಡುತ್ತಿದ್ದೇವೆ.

ಈ ಹೋರಾಟದ ವಿರುದ್ಧ ಮುಂಬರುವ ದಿನಗಳಲ್ಲಿ ಸಾಮ್ರಾಜ್ಯಶಾಹಿಯು ಇನ್ನಷ್ಟು ಕ್ರೂರವಾಗಲಿದೆ. ಫ್ರಾನ್ಸಿನ ಹಿಂದಿನ ಹಿತಾಸಕ್ತಿಗಳ ಜೊತೆಗೆ, ಈಗ ಡೊನಾಲ್ಡ್ ಟ್ರಂಪ್ ಆಡಳಿತವು ಪ್ರಪಂಚದಾದ್ಯಂತ ಕಚ್ಚಾ ವಸ್ತುಗಳ ಹೊಸ ಅನ್ವೇಷಣೆಯಲ್ಲಿ ತೊಡಗಿದೆ. ಇದರಲ್ಲಿ ಆಫ್ರಿಕಾದ ಪಾತ್ರ ನಿರ್ಣಾಯಕವಾಗುತ್ತದೆ. ಕಾಂಗೋದ ಆಡಳಿತದ ಒಪ್ಪಿಗೆಯೊಂದಿಗೆ ಕಾಂಗೋದ ಖನಿಜ ಸಂಪನ್ಮೂಲಗಳನ್ನು ನಿಯಂತ್ರಿಸಲು ಟ್ರಂಪ್ ಈಗಾಗಲೇ ಯೋಜನೆಯನ್ನು ರೂಪಿಸಿದ್ದಾರೆ. ವಿಶ್ವದ ಖನಿಜ ಸಂಪನ್ಮೂಲಗಳನ್ನು, ಅದರಲ್ಲೂ ವಿಶೇಷವಾಗಿ ಹೊಸ ಹೊಸ ತಂತ್ರಜ್ಞಾನಗಳಿಗೆ ಅಗತ್ಯವಿರುವ ಸಂಪನ್ಮೂಲಗಳನ್ನು ನಿಯಂತ್ರಿಸಲು ಟ್ರಂಪ್ ಎಷ್ಟು ಆತುರದಲ್ಲಿದ್ದಾರೆ ಎಂಬುದನ್ನು ನಾವು ನಂತರದ ಲೇಖನದಲ್ಲಿ ಚರ್ಚಿಸುತ್ತೇವೆ. ಇದೇ ಆತುರವು ಉಕ್ರೇನ್ ವಿಷಯದಲ್ಲಿ ಅವರು 'ವ್ಯವಹಾರ'(ಡೀಲ್)ದಲ್ಲಿ ಕಂಡಿದೆ. ಗ್ರೀನ್‌ಲ್ಯಾಂಡ್ ಅನ್ನು ವಶಪಡಿಸಿಕೊಳ್ಳುವ ಅವರ ಬಯಕೆಯಲ್ಲಿದೆ, ಕೆನಡಾವನ್ನು ಅಮೆರಿಕದ 51ನೇ ರಾಜ್ಯವನ್ನಾಗಿ ಮಾಡುವ ಅವರ ಯೋಜನೆಯಲ್ಲಿದೆ ಮತ್ತು ಸಾಗರ ತಳವನ್ನೂ ಸಹ ನಿಯಂತ್ರಿಸುವ ಅವರ ದುರಾಸೆಯ ಯೋಜನೆಗಳಲ್ಲಿದೆ. ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದಲ್ಲಿ ಶಾಂತಿಗಾಗಿ "ಪ್ರಾಮಾಣಿಕ ದಲ್ಲಾಳಿ" ಕೆಲಸ ಮಾಡುವ ಅವರ ಬಯಕೆಯು ಎರಡೂ ದೇಶಗಳ ಶ್ರೀಮಂತ ಖನಿಜ ಸಂಪನ್ಮೂಲಗಳಿಗೆ ಕೈಹಾಕುವ ಅವರ ಬಯಕೆಯೊಂದಿಗೆ ಸಂಬಂಧಿಸಿಲ್ಲ ಎಂದು ಹೇಳಲಾಗದು.

ಆಫ್ರಿಕಾ, ಮುಂಬರುವ ದಿನಗಳಲ್ಲಿ ಒಂದು ಕಡೆ ಸಾಮ್ರಾಜ್ಯಶಾಹಿ ಮತ್ತು ಮತ್ತೊಂದೆಡೆ ನಿರ್ವಸಾಹತೀಕರಣ ಶಕ್ತಿಗಳು, ಇವುಗಳ ನಡುವಿನ ತೀವ್ರ ಹೋರಾಟದ ರಂಗಭೂಮಿಯಾಗಿ ಹೊರಹೊಮ್ಮಲಿದೆ. ಸಾಮ್ರಾಜ್ಯಶಾಹಿಯು ಆಫ್ರಿಕಾದ ಶ್ರೀಮಂತ ನೈಸರ್ಗಿಕ ಸಂಪನ್ಮೂಲಗಳನ್ನು ತನ್ನ ಸ್ವಾರ್ಥ ಸಾಧನೆಗಾಗಿ ವಶಪಡಿಸಿಕೊಳ್ಳಲು ಬಯಸುತ್ತಿದ್ದರೆ, ನಿರ್ವಸಾಹತೀಕರಣದ ಶಕ್ತಿಗಳು ತಮ್ಮ ಜನರ ಜೀವನವನ್ನು ಸುಧಾರಿಸಲಿಕ್ಕಾಗಿ ಈ ಸಂಪನ್ಮೂಲಗಳನ್ನು ಸ್ವಾಧೀನಪಡಿಸಿಕೊಳ್ಳ ಬಯಸುತ್ತಿವೆ. ❍

ಮಾತುಗಾರಿಕೆ ಸಂಸತ್ತಿನಲ್ಲಿ ವಿಷಯವಾರು ಚರ್ಚೆಗೆ ಬದಲಿಯಾಗುವುದು ಸಾಧ್ಯವಿಲ್ಲ–ಎಂ.ಎ.ಬೇಬಿ

ಪ್ರಧಾನ ಮಂತ್ರಿಗಳು ಮಿಲಿಟರಿ ಕಾರ್ಯಾಚರಣೆಗಳ ನಿಲುಗಡೆಯ ಎರಡು ದಿನಗಳ ನಂತರ ಮೇ 12ರ ರಾತ್ರಿ ದೇಶವನ್ನು ಉದ್ದೇಶಿಸಿ ಭಾಷಣ ಮಾಡಿದರು. ಈ ಬಗ್ಗೆ ಟಿಪ್ಪಣಿ ಮಾಡುತ್ತ, ಬಹಳಷ್ಟು ಆಡಂಬರದ ಮಾತುಗಳಿಂದ ಕೂಡಿದ ಭಾಷಣದಲ್ಲಿ ಗಡಿಯಾಚೆಗಿನ ಶೆಲ್ ದಾಳಿಯಲ್ಲಿ ಕೊಲ್ಲಲ್ಪಟ್ಟವರು ಮತ್ತು ಅವರ ಕುಟುಂಬಗಳ ಬಗ್ಗೆ ಉಲ್ಲೇಖಿಸಲು ಪ್ರಧಾನಿಗೆ ಸಮಯವೇ ಸಿಗಲಿಲ್ಲ. ಕಾಶ್ಮೀರಿ ಜನತೆಯ ಧೈರ್ಯ, ಭಯೋತ್ಪಾದಕ ದಾಳಿಗೆ ಗುರಿಯಾದವರಿಗೆ ಸಹಾಯ ಮಾಡುವಲ್ಲಿ ಅವರ ನಿಸ್ವಾರ್ಥ ಪಾತ್ರ ಅಥವಾ ದಾಳಿಯನ್ನು ಅವರು ಸ್ಪಷ್ಟವಾಗಿ ಖಂಡಿಸಿದ ಬಗ್ಗೆ ಪ್ರಧಾನಿಯವರಿಂದ ಒಂದೇ ಒಂದು ಮಾತೂ ಇರಲಿಲ್ಲ, ಅಲ್ಲದೆ, ದ್ವೇಷ ಅಭಿಯಾನವನ್ನು ಖಂಡಿಸಲು ಮತ್ತು ಸರ್ಕಾರದ ಧ್ವನಿಯಾಗಿದ್ದಕ್ಕೆ ಟ್ರೋಲಿಂಗ್‌ಗೆ ಗುರಿಯಾದ ತಮ್ಮದೇ ಸರಕಾರದ ವಿದೇಶಾಂಗ ಕಾರ್ಯದರ್ಶಿಯವರನ್ನು ಸಮರ್ಥಿಸಿಕೊಳ್ಳಲು ಕೂಡ ಪ್ರಧಾನ ಮಂತ್ರಿಗಳು ವಿಫಲರಾದರು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ ಖೇದ ವ್ಯಕ್ತಪಡಿಸಿದ್ದಾರೆ.

ಪ್ರಜಾಪ್ರಭುತ್ವ ಎಂಬುದು ಒಂದು ಏಕಮುಖ ಸಂಚಾರವಲ್ಲ. ಇಂತಹ ಮಾತುಗಾರಿಕೆ ಸಂಸತ್ತಿನಲ್ಲಿ ಈ ಕುರಿತು ವಿಷಯವಾರು ಚರ್ಚೆಗೆ ಬದಲಿಯಾಗಲು ಸಾಧ್ಯವಿಲ್ಲ. ಸಂಸದೀಯ ಪ್ರಜಾಪ್ರಭುತ್ವದಲ್ಲಿ ಸರ್ಕಾರವು ಉತ್ತರದಾಯಿಯಾಗಿ ಇರಲೇಬೇಕಾಗಿದೆ ಎಂದು ಮುಂದುವರೆದು ಅವರು ಹೇಳಿದ್ದಾರೆ. ❍

ತಲಾ ಆದಾಯ ಬಹುತೇಕ ಸಮಾನವಾಗಿತ್ತು. ಇಂದು, ಅದು ಮಾಯವಾಗಿದೆ. ಪಾಕಿಸ್ತಾನದ ಸರಾಸರಿ ತಲಾ ಆದಾಯ ಮಲೆಯಾಳಿ ವ್ಯಕ್ತಿಯ ಆದಾಯದ ಅರ್ಧದಷ್ಟು ಮಾತ್ರ. ಭಾರತದ ಆರ್ಥಿಕತೆಯು ಈಗ ಪಾಕಿಸ್ತಾನದ ಆರ್ಥಿಕತೆಗಿಂತ 11 ಪಟ್ಟು ದೊಡ್ಡದಾಗಿದೆ. ಏತನ್ಮಧ್ಯೆ, ಭಾರತದ ಪ್ರಜೆಯ ತಲಾ ಆದಾಯವು ಚೀನಿಯರ ತಲಾ ಆದಾಯದ ಐದನೇ ಒಂದು ಭಾಗ ಮಾತ್ರ.

ಸಮಕಾಲೀನ ರಾಜಕೀಯದಲ್ಲಿ ಪ್ರಸ್ತುತವಾದ ಪ್ರಶ್ನೆಯೆಂದರೆ, ಅರ್ಥವ್ಯವಸ್ಥೆಯನ್ನು ಬಲಪಡಿಸುವ ಮೂಲಕ ನಮಗೆ ಬೆದರಿಕೆಯೊಡ್ಡುತ್ತಿರುವ ನಿರುದ್ಯೋಗ ಮತ್ತು ಹಣದುಬ್ಬರವನ್ನು ಪರಿಹರಿಸಬೇಕೆ ಅಥವಾ ಪಾಕಿಸ್ತಾನದಂತೆ ಗುಂಡಿನ ಚಕಮಕಿಯಲ್ಲಿ ಹಿಂಸಾಚಾರದ ದಾರಿಯಲ್ಲಿ ಸಾಗಬೇಕೇ ಎಂಬುದು.

ಸರ್ವಪಕ್ಷ ಸಭೆಯ ನಂತರ ಉತ್ತರ ಪ್ರದೇಶದ ಸಮಾಜವಾದಿ ಪಕ್ಷದ ನಾಯಕ ರಾಮ್ ಗೋಪಾಲ್ ಯಾದವ್ ಹೇಳಿದ್ದು ಕಿವಿಯಲ್ಲಿ ಗುಯ್ ಗುಡುತ್ತಿದೆ. ಗಡಿಯಲ್ಲಿ ನಡೆಯುವ ಪ್ರತಿಯೊಂದು ಗುಂಡಿನ ದಾಳಿಯೂ ಉತ್ತರ ಪ್ರದೇಶದ ಹಳ್ಳಿಗಳಲ್ಲಿ ಕಾಳಧನಿಕರಿಗೆ ಪಟಾಕಿ ಸಿಡಿಸಿದಂತೆ ಎಂದು ರಾಮ್ ಗೋಪಾಲ್ ಯಾದವ್ ಹೇಳಿದರು. ಸಂಘರ್ಷದ ನಂತರ ಗಡಿಯಾಚೆಗೆ ಪಲಾಯನ ಮಾಡಿದ ಸಾವಿರಾರು ಜನರ ಬಗ್ಗೆಯಾಗಲಿ, ಅವರ ಜೀವನದ ಅನಿಶ್ಚಿತತೆಯ ಬಗ್ಗೆಯಾಗಲಿ ಯುದ್ಧಕೋರರಿಗೆ ಕಳವಳವೇ ಇಲ್ಲ.

ಪಾಕಿಸ್ತಾನ ಸರ್ಕಾರವು ದೇಶದ ಮೇಲೆ ಕೇವಲ ನಾಮಮಾತ್ರದ ನಿಯಂತ್ರಣವನ್ನು ಹೊಂದಿದೆ. ಅಲ್ಲಿ ನಿಜವಾದ ಅಧಿಕಾರ ಸೇನೆಯದ್ದೇ. ಪಾಕಿಸ್ತಾನವನ್ನು ಚಚ್ಚಿಹಾಕಬೇಕೆಂದು ಹೇಳುತ್ತಿರುವವರು, ಪರಮಾಣು ಶಸ್ತ್ರಸಜ್ಜಿತ ದೇಶವೊಂದು ಸಂಪೂರ್ಣವಾಗಿ ಭಯೋತ್ಪಾದಕ ಸಂಘಟನೆಗಳ ಕೈಗೆ ಬಿದ್ದರೆ ಉಂಟಾಗುವ ದುರಂತದ ಬಗ್ಗೆ ಒಂದು ಕ್ಷಣವೂ ಯೋಚಿಸಿಲ್ಲ.

ಪಾಕಿಸ್ತಾನದ ರಕ್ಷಣಾ ಸಚಿವ ಆಸಿಫ್ ಖ್ವಾಜಾ ಯುಎಸ್‌ನ ಸ್ಕೈ ಟಿವಿಗೆ ನೀಡಿದ ಸಂದರ್ಶನ ಸನ್ನಿವೇಶದ ಮೇಲೆ ಬೆಳಕು ಚೆಲ್ಲುತ್ತದೆ. "ಅಫ್ಘಾನಿಸ್ತಾನದಲ್ಲಿ ಸೋವಿಯತ್ ಬೆಂಬಲಿತ ಸರ್ಕಾರವನ್ನು ಉರುಳಿಸಲು ಭಯೋತ್ಪಾದಕ ಗುಂಪುಗಳನ್ನು ರಚಿಸುವಂತೆ ನಮಗೆ ಹೇಳಿದ್ದು ಅಮೆರಿಕ ಮತ್ತು ಬ್ರಿಟನ್. ಆದ್ದರಿಂದ ನಮ್ಮ ನೆಲದಲ್ಲಿ ಭಯೋತ್ಪಾದಕರು ಪ್ರವರ್ಧಮಾನಕ್ಕೆ ಬಂದರು. ಅವರಿಗೆ ಹಣ ಮತ್ತು ಶಸ್ತ್ರಾಸ್ತ್ರಗಳನ್ನು ಒದಗಿಸಿದ್ದು ಅಮೆರಿಕ. ಅಂತಿಮವಾಗಿ, ಅವರು ಅಫ್ಘಾನಿಸ್ತಾನದಲ್ಲಿ ಸೋವಿಯತ್ ಬೆಂಬಲಿತ ಸರ್ಕಾರವನ್ನು ಉರುಳಿಸಿದರು. ಅದರ ನಂತರ, ಆ ಎಲ್ಲಾ ಭಯೋತ್ಪಾದಕ ಗುಂಪುಗಳು ನಮ್ಮ ನೆಲದಲ್ಲಿ ನೆಲೆಗಳನ್ನು ಸ್ಥಾಪಿಸಿದವು. ನಾವು ಮೂರು ದಶಕಗಳಿಂದ ಅಮೆರಿಕಾಗೆ ಹೊಲಸು ಕೆಲಸವನ್ನು ಮಾಡುತ್ತಿದ್ದೇವೆ ಮತ್ತು ಬ್ರಿಟನ್ ಸೇರಿದಂತೆ ಪಾಶ್ಚಿಮಾತ್ಯರಿಗಾಗಿಯೂ. ಅದೊಂದು ತಪ್ಪು. ಅದರಿಂದಾಗಿ ನರಳುತ್ತಿದ್ದೇವೆ" ಎಂದು ಅವರು ಹೇಳಿದರು.

ಮೌನದ ಪರದೆ ಸರಿಯಬೇಕು

ಗುಂಡಿನ ಸದ್ದುಗಳು ಮೌನವಾಗುವ ವೇಳೆಗೆ ಹೊಸ ಪ್ರಶ್ನೆಗಳು ಉದ್ಭವಿಸುತ್ತವೆ, ಪಹಲ್ಗಾಮ್ ಮತ್ತೊಮ್ಮೆ ಚರ್ಚೆಯ ಕೇಂದ್ರಕ್ಕೆ ಬರುತ್ತದೆ. ಯುದ್ಧದ ಉದ್ವಿಗ್ನತೆಯ ಸಮಯದಲ್ಲಿ ವಿರೋಧ ಪಕ್ಷಗಳು ಒಗ್ಗಟ್ಟನ್ನು ಕಾಯ್ದುಕೊಳ್ಳಬೇಕು ಎಂದು ಮೌನ ವಹಿಸಿದ್ದವು. ಆದರೆ 26 ಅಮಾಯಕರ ಜೀವಗಳನ್ನು ಬಲಿತೆಗೆದುಕೊಂಡ ಕೇಂದ್ರ ಸರ್ಕಾರದ ಗಂಭೀರ ಭದ್ರತಾ ಮತ್ತು ಗುಪ್ತಚರ ವೈಫಲ್ಯಗಳನ್ನು ಇನ್ನೂ ಮೌನದ ಪರದೆಯ ಹಿಂದೆ ಅಡಗಿಸಿಡಲು ಸಾಧ್ಯವಿಲ್ಲ.

ಕಳೆದ ಸಂಸತ್ತಿನ ಅಧಿವೇಶನದಲ್ಲಿ ಗೃಹ ಸಚಿವರು ಭಾರಿ ಧೈರ್ಯದಿಂದ ದಾವೆಗಳನ್ನು ಪ್ರಸ್ತುತ ಪಡಿಸಿದರು. ಇದೆಲ್ಲವೂ ಸಂಸತ್ತಿನ ದಾಖಲೆಗಳಲ್ಲಿದೆ: "ಕಾಶ್ಮೀರದಿಂದ ಭಯೋತ್ಪಾದನೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲಾಗಿದೆ; ಯಾವುದೇ ಭಯೋತ್ಪಾದಕನು ದೇಶಕ್ಕೆ ಪ್ರವೇಶಿಸಿದರೆ, ನಾವು ಅವನ ಕಣ್ಣುಗಳ ನಡುವೆ ಗುಂಡಿಕ್ಕುತ್ತೇವೆ" – ಇವು ಅಮಿತ್ ಶಾ ಅವರ ಮಾತುಗಳು. ಇದು ನಿಜವಾಗಿದ್ದರೆ, ಭಯೋತ್ಪಾದಕರು ಭಾರತದ ನೆಲವನ್ನು ಪ್ರವೇಶಿಸಲು, ಮುಕ್ತವಾಗಿ ಸುತ್ತಾಡಲು, ಎದುರು ನಿಂತೇ ಗುಂಡು ಹಾರಿಸಲು ಮತ್ತು ನಂತರ ತಪ್ಪಿಸಿಕೊಳ್ಳಲು ಏಕೆ ಸಾಧ್ಯವಾಯಿತು? ಒಬ್ಬನೇ ಒಬ್ಬ ವ್ಯಕ್ತಿಯನ್ನೂ ಇದಕ್ಕೆ ಹೊಣೆಗಾರನಾಗಿ ಮಾಡಿಲ್ಲ, ಕರ್ತವ್ಯ ಚ್ಯುತಿಗೆ ಬೆಲೆ ತೆರುವಂತಾಗಿಲ್ಲ.

ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ನಡೆದ 2008ರ ಮುಂಬೈ ಭಯೋತ್ಪಾದಕ ದಾಳಿಯನ್ನು ಉಲ್ಲೇಖಿಸುವ ಸಮಯ ಇದು. ಆಗ ಗೃಹ ಸಚಿವ ಶಿವರಾಜ್ ಪಾಟೀಲ್, ಮಹಾರಾಷ್ಟ್ರ ಮುಖ್ಯಮಂತ್ರಿ ವಿಲಾಸ್ ರಾವ್ ದೇಶಮುಖ್ ಮತ್ತು ಉಪಮುಖ್ಯಮಂತ್ರಿ ಸಿ.ಆರ್.ಪಾಟೀಲ್ ಹೊಣೆಗಾರರಾದರು. ಮುಂಬೈನಲ್ಲಿ ನಡೆದ ದುರದೃಷ್ಟಕರ ದಾಳಿಯಿಂದಾಗಿ ಆಗಿನ ಕೇಂದ್ರ ಗೃಹ ಸಚಿವರು ತಮ್ಮ ಹುದ್ದೆಯನ್ನು ಕಳೆದುಕೊಂಡರೆ, ಈಗ ದೇಶ ಅಮಿತ್ ಶಾ ರನ್ನು ಅದರ ಬಗ್ಗೆ ಕೇಳುವ ಜವಾಬ್ದಾರಿಯನ್ನು ಹೊಂದಿದೆ. ಪ್ರಶ್ನೆಗಳನ್ನು ಎತ್ತುವ ಮೂಲಭೂತ ಜವಾಬ್ದಾರಿಯನ್ನು ಹೊಂದಿರುವ ಒಂದೇ ಒಂದು ಮಾಧ್ಯಮವೂ ಅದನ್ನು ಎತ್ತಿಲ್ಲ ಎಂಬುದು ಗಮನಾರ್ಹ.

ಬಿಜೆಪಿ ಹೊರತುಪಡಿಸಿ ಉಳಿದೆಲ್ಲಾ ರಾಜಕೀಯ ಪಕ್ಷಗಳು ದೌರ್ಬಲ್ಯದ ಸಂಕೇತಗಳು ಎಂದು ನರೇಂದ್ರ ಮೋದಿ ಯಾವಾಗಲೂ ಪ್ರಚಾರ ಮಾಡಿದ್ದಾರೆ. ಪಾಕಿಸ್ತಾನದ ನೆಲದಿಂದ ನಡೆಯುವ ಹಲವಾರು ಭಯೋತ್ಪಾದನಾ ಕೃತ್ಯಗಳ ಹಿಂದೆ, ಜಗತ್ತು ನಂಬುವ ಯಾರಾದರೂ ಇದ್ದರೆ, ಆತ ಜೈಶ್–ಎ–ಮೊಹಮ್ಮದ್ ಭಯೋತ್ಪಾದಕ ಸಂಘಟನೆಯ ಸ್ಥಾಪಕ ಮೌಲಾನಾ ಮಸೂದ್ ಅಜರ್. ವಿಶ್ವಸಂಸ್ಥೆಯಿಂದ ಭಯೋತ್ಪಾದಕ ಎಂದು ಘೋಷಿಸಲ್ಪಟ್ಟ ಮೇಲೆ ಮಸೂದ್ ಬಗ್ಗೆ ಸಾಕಷ್ಟು ಚರ್ಚೆ ನಡೆಯಿತು. ಆದರೆ ಇನ್ನೂ ಉತ್ತರ ಕಾಣದ ಪ್ರಶ್ನೆಯೆಂದರೆ, 1999ರಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ಭಯೋತ್ಪಾದಕರು ಅಪಹರಿಸಿದ ಇಂಡಿಯನ್ ಏರ್ ಲೈನ್ಸ್ ವಿಮಾನದ ಒತ್ತೆಯಾಳುಗಳಿಗೆ ಬದಲಾಗಿ ಭಾರತ ಬಿಡುಗಡೆ ಮಾಡಿದ ಅತ್ಯಂತ ಕುಪ್ರಸಿದ್ಧ ಭಯೋತ್ಪಾದಕರಲ್ಲಿ ಮಸೂದ್ ಅಜರ್ ಒಬ್ಬ. ಇದೊಂದು ಬಹು ಮಹತ್ವದ ಪ್ರಶ್ನೆ. ಆದರೆ ಬಿಜೆಪಿ ಸರಕಾರದ ವಿವಾದಾತ್ಮಕ ನಿರ್ಧಾರವನ್ನು ಸಾಮಾನ್ಯವಾಗಿ ಮರೆಮಾಚಲಾಗಿದೆ. ಬೇರೆ ಯಾವುದೇ ಸರ್ಕಾರ ಮಸೂದ್ ನನ್ನು ಬಿಡುಗಡೆ ಮಾಡಿದ್ದರೆ, ಹೆಚ್ಚು ಚರ್ಚಿಸಲ್ಪಡುವ ವಿಷಯವೆಂದರೆ ಮಸೂದ್‌ನ ಬಿಡುಗಡೆ.

ಪಹಲ್ಗಾಮ್, ಸಂಘರ್ಷ ಮತ್ತು ಕದನ ವಿರಾಮವನ್ನು ಅರ್ಥಪೂರ್ಣ ಚರ್ಚಾ ವಿಷಯವನ್ನಾಗಿ ಮಾಡುವ ಮೂಲಕ ಮಾತ್ರ ಪ್ರಜಾಪ್ರಭುತ್ವ ಭಾರತ ಮುಂದುವರಿಯಲು ಸಾಧ್ಯ. ಯುದ್ಧೋನ್ಮಾದವಾಗಲೀ, ಮಾಧ್ಯಮಗಳು ಹರಡಿರುವ ಕ್ಷಿಪಣಿ ಭೀತಿಗಳಾಗಲೀ ಭಾರತವನ್ನು ಮುಂದೊಯ್ಯಲಾರವು, ಜನಗಳ ವಿಚಾರಪೂರ್ಣ ಒಳಹೊಳಹುಗಳಿಗೆ ಮಾತ್ರವೇ ದೇಶ ಗಮನ ನೀಡಬೇಕಾಗಿದೆ. ❍

NEW No. MAG(3)/NPP/205/2021-2022
JANASHAKTHI KANNADA VARA PATRIKE May 19-25, 2025 Price: Rs. 10/- Date of Publication: 16 May 2025 RNI No. KARKAN/2006/17926 Posted on 21-05-2025
Posted at BG PSO, BG - 560026 **Posted at Periodical Rate -** Rs. 2

ಫ್ಯಾಸಿಸಂ ವಿರುದ್ಧ ವಿಜಯದ 80ನೇ ವಾರ್ಷಿಕೋತ್ಸವ–ಕೆಲವು ಪ್ರಶ್ನೆಗಳು

ವಸಂತರಾಜ ಎನ್.ಕೆ.


ರಶ್ಯಾದ ಲೆನಿನ್ ಗ್ರಾಡ್ (ಸೈಂಟ್ ಪೀಟರ್ಸ್ ಬರ್ಗ್) ನಲ್ಲಿ ಮೇ 9, 2025 ರಂದು ಫ್ಯಾಸಿಸಂ ವಿರುದ್ಧ ವಿಜಯದ 80ನೇ ವಾರ್ಷಿಕೋತ್ಸವದ ಸಂಭ್ರಮಾಚರಣೆಯ ಚಿತ್ರ: ಮಹಾಯುದ್ಧದಲ್ಲಿ ಮಡಿದ ತಮ್ಮ ತಂದೆ/–ತಾಯಿ/ಅಜ್ಜ–ಅಜ್ಜಿಯರು ಮತ್ತಿತರರ ಫೊಟೊ ಹಿಡಿದು ಮೆರವಣಿಗೆಯಲ್ಲಿ ಭಾಗವಹಿಸಿದ್ದಾರೆ (ಕೃಪೆ : AP Photos)

ಭಾಗ 1

ಫ್ಯಾಸಿಸಂ ವಿರುದ್ಧ ವಿಜಯದ 80ನೇ ವಾರ್ಷಿಕೋತ್ಸವವನ್ನು ಇತ್ತೀಚೆಗೆ (ಮೇ 8–9) ಜಗತ್ತಿನಾದ್ಯಂತ ಸಂಭ್ರಮದಿಂದ ಆಚರಿಸಲಾಯಿತು. ಈ ಸಂಭ್ರಮಾಚರಣೆ ಈಗಲೂ ಏಕೆ? ಫ್ಯಾಸಿಸಂ ಅನ್ನು ಏಕೆ ವಿರೋಧಿಸಬೇಕು? ಫ್ಯಾಸಿಸಂ ವಿರುದ್ಧದ ವಿಜಯದಲ್ಲಿ ವಿವಿಧ ದೇಶಗಳ ಸರಕಾರಗಳ, ರಾಜಕೀಯ ಶಕ್ತಿಗಳ ಪಾತ್ರವೇನಿತ್ತು? ಎರಡನೆಯ ಮಹಾಯುದ್ಧ ಏಕೆ ಫ್ಯಾಸಿಸಂ ಜತೆಗೆ ತಳುಕು ಹಾಕಿಕೊಂಡಿದೆ? ಫ್ಯಾಸಿಸಂ ವಿರುದ್ಧದ ವಿಜಯದಲ್ಲಿ ಮಿತ್ರಕೂಟದ ಸೈನ್ಯಗಳ ಪಾತ್ರವೇನಿತ್ತು? ಯುರೋಪಿಯನ್ ಜನತಾ ಪ್ರತಿರೋಧ ಗೆರಿಲ್ಲಾ ಸೈನ್ಯದ ಪಾತ್ರವೇನಿತ್ತು? ಆಗಿನ ಫ್ಯಾಸಿಸಂ ವಿರುದ್ಧ ಮಿತ್ರಕೂಟದ ಪಾಶ್ಚಿಮಾತ್ಯ ದೇಶಗಳು ಮತ್ತು ಮಾಜಿ ಸೋವಿಯೆಟ್ ದೇಶಗಳು ಬೇರೆ ಬೇರೆ ದಿನದಂದು ಬೇರೆ ಬೇರೆ ರೀತಿಯಲ್ಲಿ ಬೇರೆಯಾಗಿ ಏಕೆ ಆಚರಿಸುತ್ತಾರೆ? ಈ ಕುರಿತು ಏಳುವ ಕೆಲವು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು–ಈ ಲೇಖನ ಸರಣಿಯ ಉದ್ದೇಶ. ಈ ಸರಣಿಯ ಭಾಗ–1ರಲ್ಲಿ ಮೊದಲ 3 ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸಲಾಗಿದೆ.

1. ಫ್ಯಾಸಿಸಂ ವಿರುದ್ಧ ವಿಜಯದ 80 ವರ್ಷಗಳ ನಂತರ ಈಗ ಅದನ್ನು ಯಾಕೆ ನೆನಪಿಸಿಕೊಳ್ಳಬೇಕು?

ಫ್ಯಾಸಿಸಂ ಕಳೆದ ಕೆಲವು ಶತಮಾನಗಳ ಚರಿತ್ರೆಯಲ್ಲಿ ಮನುಕುಲದ ಅಸ್ತಿತ್ವಕ್ಕೆ ಮತ್ತು ಕನಿಷ್ಟ ಮಾನವೀಯತೆ ಇರುವ ಸಮಾಜ ವ್ಯವಸ್ಥೆಗೆ ಸಂಚಕಾರ ತಂದ ಅತ್ಯಂತ ದೊಡ್ಡ ದುರಂತ. ಮನುಕುಲದ ಚರಿತ್ರೆಯಲ್ಲಿ ಜಾಗತಿಕವಾಗಿ ಅತ್ಯಂತ ಹೆಚ್ಚಿನ ಭಾರೀ ಸಾವು–ನೋವುಗಳಿಗೆ ವಿನಾಶಗಳಿಗೆ ಕಾರಣವಾದ ಎರಡನೇ ಮಹಾಯುದ್ಧಕ್ಕೂ ಫ್ಯಾಸಿಸಂನ ಉದಯವೇ ಮುಖ್ಯ ಕಾರಣವಾಗಿತ್ತು. ಸಾಮೂಹಿಕ ಮಾರಕಾಸ್ತ್ರಗಳಾದ ಅಣ್ವಸ್ತ್ರ, ರಾಸಾಯನಿಕ ಅಸ್ತ್ರಗಳ ವಿನ್ಯಾಸ ಮತ್ತು ತಯಾರಿಗೂ ಇದು ಮುಖ್ಯ ಪ್ರಚೋದನೆಯಾಗಿತ್ತು. 'ಫ್ಯಾಸಿಸಂ ಮತ್ತು ಜಾಗತಿಕ ಮಹಾಯುದ್ಧ ಮತ್ತೆಂದೂ ಬೇಡ' ಎಂಬ ಸಾಮಾನ್ಯ ಮಾನವೀಯ ಆಶಯ ಈ 80 ವರ್ಷಗಳಲ್ಲಿ ಕುಂದಿದೆ. ನಮ್ಮ ಭೂಮಿ ಮತ್ತು ಮನುಕುಲವನ್ನು ಹಲವು ಬಾರಿ ನಾಶ ಮಾಡಬಲ್ಲ ಸಾಮೂಹಿಕ ಮಾರಕಾಸ್ತ್ರಗಳ ಪಟ್ಟಿಯಲ್ಲಿ ಅಣ್ವಸ್ತ್ರ, ರಾಸಾಯನಿಕ ಅಸ್ತ್ರಗಳ ಜತೆಗೆ ಜೈವಿಕ ಅಸ್ತ್ರಗಳೂ ಸೇರಿದ್ದು, ಹಲವು ದೇಶಗಳು ಇವನ್ನು ಹೊಂದಿವೆ. ಫ್ಯಾಸಿಸಂನ ಹುಟ್ಟು ದೇಶಗಳಾದ ಜರ್ಮನಿ, ಇಟಲಿಗಳಲ್ಲದೆ ಯುರೋಪು, ಅಮೆರಿಕ ಮಾತ್ರವಲ್ಲ ಭಾರತ ಸೇರಿದಂತೆ ಹಲವು ದೇಶಗಳಲ್ಲಿ ಫ್ಯಾಸಿಸ್ಟ್ ರೀತಿಯ ಧೋರಣೆ ಹೊಂದಿರುವ ರಾಜಕೀಯ ಪಕ್ಷಗಳ ಬೆಂಬಲ ಹೆಚ್ಚುತ್ತಿದೆ. ಸುಮಾರು 77 ವರ್ಷಗಳ ಕಾಲ ಯುರೋಪಿನಲ್ಲಿ ಶಾಂತಿ (ಅಥವಾ ಕನಿಷ್ಟ ಯುದ್ಧ ಆಗದಿರುವುದು) ಉಕ್ರೇನ್ ಯುದ್ಧದ ಮೂಲಕ ಕದಡಿದೆ. ಹಾಗಾಗಿ ಫ್ಯಾಸಿಸಂ ಹೇಗೆ ಮತ್ತು ಯಾಕೆ ಹುಟ್ಟಿತು? ಇದು ಎರಡನೇ ಮಹಾಯುದ್ಧಕ್ಕೆ ಹೇಗೆ ಕಾರಣವಾಯಿತು? ಅದರ ವಿರುದ್ಧ ಯಾರು ಹೇಗೆ ಹೋರಾಡಿದರು? ಎಂಬುದು ಈಗ ಹಿಂದೆಂದಿಗಿಂತಲೂ ಹೆಚ್ಚು ಪ್ರಸ್ತುತವಾಗಿದೆ.



ನಾಜಿಗಳಿಂದ ಸಾಮೂಹಿಕ ಕಗ್ಗೊಲೆಗಳು

2. ಫ್ಯಾಸಿಸಂ ಅನ್ನು ಏಕೆ ವಿರೋಧಿಸಲಾಗುತ್ತಿದೆ? 1930–40ರ ದಶಕದಲ್ಲಿ ಅದು ಯಾವ ದುರಂತಗಳಿಗೆ ಕಾರಣವಾಯಿತು?

ಫ್ಯಾಸಿಸಂ, ಪ್ರಜಾಪ್ರಭುತ್ವ, ಮಾನವ ಹಕ್ಕುಗಳಿಗೆ ತೀವ್ರ ಕುತ್ತು ತರವುದಲ್ಲದೆ, ಯಾತನಾ ಶಿಬಿರಗಳಲ್ಲಿ ಮತ್ತು ಅದು ಆರಂಭಿಸಿದ ಎರಡನೇ ಮಹಾಯುದ್ಧದಲ್ಲಿ ಕೋಟಿಗಟ್ಟಲೆ ಸಾವು–ನೋವುಗಳಿಗೆ ಕಾರಣವಾಯಿತು.

ಫ್ಯಾಸಿಸ್ಟ್ ಪಕ್ಷಗಳು ಅಧಿಕಾರಕ್ಕೆ ಬಂದ ದೇಶಗಳಲ್ಲಿ (ಪ್ರಮುಖವಾಗಿ ಜರ್ಮನಿ, ಇಟಲಿ, ಸ್ಪೈನ್) ನಗ್ನ ಸರ್ವಾಧಿಕಾರ ಹೇರಲಾಯಿತು. ಜನತೆಯ ವ್ಯಕ್ತಿಗತ, ರಾಜಕೀಯ ಸಾಮಾಜಿಕ ಸಂಘ ಸಂಸ್ಥೆಗಳ ಹಕ್ಕುಗಳನ್ನು ಕಸಿದುಕೊಳ್ಳಲಾಯಿತು. ಸರಕಾರದ ಮತ್ತು ಆಳುವ ಪಕ್ಷದ ಎಲ್ಲ ವಿರೋಧಿಗಳನ್ನು ದಮನ ಮಾಡಲಾಯಿತು. ಹಿಟ್ಲರ್ 1933ರಲ್ಲಿ ಅಧಿಕಾರಕ್ಕೆ ಬರುತ್ತಲೇ ನಾಜಿಗಳು ಜರ್ಮನಿಯ ಪಾರ್ಲಿಮೆಂಟರಿ ಭವನಕ್ಕೆ ತಾವೇ ಬೆಂಕಿ ಹಾಕಿ, ಅದನ್ನು ಮಾಡಿದ್ದು ಕಮ್ಯುನಿಸ್ಟರು ಎಂದು ಆಪಾದಿಸಿ ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಲಾಯಿತು. ಮುಂದಿನ ಸರದಿ ಸೋಶಲಿಸ್ಟರದಾಗಿತ್ತು. ಮುಂದೆ ಎಲ್ಲ ರಾಜಕೀಯ ವಿರೋಧಿಗಳನ್ನು ಕಗ್ಗೊಲೆ ಮಾಡಲಾಯಿತು ಅಥವಾ ಜೈಲಿಗಟ್ಟಲಾಯಿತು.

ಕಮ್ಯುನಿಸ್ಟರು, ಸೋಶಲಿಸ್ಟರು ಮತ್ತು ರಾಜಕೀಯ ವಿರೋಧಿಗಳು ಹತ್ತಾರು ಸಾವಿರಗಳ ಸಂಖ್ಯೆಯಲ್ಲಿ ಇದ್ದಿದ್ದರಿಂದ ಯಾತನಾ ಶಿಬಿರ (ಕಾನ್ಸಂಟ್ರೇಶನ್ ಕ್ಯಾಂಪ್)ಗಳನ್ನು ಸ್ಥಾಪಿಸಿ ಅವರನ್ನು ಅಲ್ಲಿಗೆ ಅಟ್ಟಲಾಯಿತು. ಈ ಶಿಬಿರಗಳಲ್ಲಿ ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿ ಕಠಿಣ ಬಲವಂತದ ದುಡಿಮೆ ಮಾಡಿಸಲಾಯಿತು. ಮಹಾಯುದ್ಧ ಆರಂಭದ ಮೊದಲು ಜರ್ಮನಿಯೊಳಗೆ ಮಾತ್ರ ಈ ಯಾತನಾ ಶಿಬಿರಗಳಿದ್ದರೆ, ಆ ನಂತರ ಜರ್ಮನಿ ಆಕ್ರಮಿತ ಪ್ರದೇಶಗಳಲ್ಲೂ ಯಾತನಾ ಶಿಬಿರಗಳನ್ನು ಸ್ಥಾಪಿಸಲಾಯಿತು. ಆಕ್ರಮಿತ ಪ್ರದೇಶಗಳ ರಾಜಕೀಯ ವಿರೋಧಿಗಳು, ಬಂಧಿತರಾದ ಆ ದೇಶಗಳ ಗೆರಿಲ್ಲಾ ಹೋರಾಟಗಾರರು, ಪ್ರತಿರೋಧದಲ್ಲಿ ಪಾಲ್ಗೊಂಡವರು ಮತ್ತು ಬಂಧಿತ ಸೋವಿಯೆಟ್ ಸೈನಿಕರನ್ನೂ (ಜಿನಿವಾ ಒಪ್ಪಂದ ಉಲ್ಲಂಘಿಸಿ) ಈ ಶಿಬಿರಗಳಲ್ಲಿ ಇಡಲಾಯಿತು. ಈ ಶಿಬಿರದ ಕೈದಿಗಳಲ್ಲಿ 1942ರ ಹೊತ್ತಿಗೆ ಮೂರನೇ ಎರಡು ಭಾಗದಷ್ಟು ಕೈದಿಗಳನ್ನು ರಕ್ಷಣಾ ಅಗತ್ಯಗಳ ಉತ್ಪಾದನೆಯಲ್ಲಿ ತೊಡಗಿಸಲಾಗಿತ್ತು. ಹಲವು ಯಾತನಾ ಶಿಬಿರಗಳನ್ನು ಖಾಸಗಿ ಕಂಪನಿಗಳಿಗಾಗಿಯೇ ಮೀಸಲಿಡಲಾಗಿತ್ತು. ಹೀಗೆ ಯಾತನಾ ಶಿಬಿರಗಳಿಗೆ ಆರ್ಥಿಕ ಕಾರಣಗಳೂ ಇದ್ದವು.


ಯಾತನಾ ಶಿಬಿರಗಳಲ್ಲಿ ಬಲವಂತದ ಕಷ್ಟಕರ ದುಡಿಮೆ

ಮಹಾಯುದ್ಧದ ಉತ್ತರಾರ್ಧದಲ್ಲಿ ಈ ಶಿಬಿರಗಳ ಮತ್ತು ಅಲ್ಲಿ ಕೂಡಿ ಹಾಕಲ್ಪಟ್ಟ ಜನರ ಸಂಖ್ಯೆ ಭಾರೀ ಜಿಗಿತ ಕಂಡಿತು. ಗರಿಷ್ಟ ಅವಧಿಯಲ್ಲಿ 27 ಮುಖ್ಯ ಶಿಬಿರಗಳು ಮತ್ತು 1000ಕ್ಕೂ ಹೆಚ್ಚು ಉಪ–ಶಿಬಿರಗಳಿದ್ದವು ಮತ್ತು ಒಟ್ಟು 7 ಲಕ್ಷ ಕೈದಿಗಳನ್ನು ಕೂಡಿ ಹಾಕಲಾಗುತ್ತಿತ್ತು. ಈ ಶಿಬಿರಗಳಲ್ಲಿ ದುರ್ಬಲರಾದವರು, ಕಠಿಣ ದುಡಿಮೆ ಮಾಡಲಾಗದವರು, ಪ್ರತಿರೋಧ ತೋರಿದವರ ಮೇಲೆ ಮತ್ತು ಸಾಮಾನ್ಯ ಭಯ ಉಂಟುಮಾಡಲು ವಿವಿಧ ರೀತಿಯ ಬರ್ಬರ ಚಿತ್ರಹಿಂಸೆಗಳನ್ನು ನೀಡಲಾಯಿತು ಮತ್ತು ಸಾಮೂಹಿಕವಾಗಿ ಕಗ್ಗೊಲೆ ಮಾಡಲಾಯಿತು. ವಿಭಿನ್ನ ಅವಧಿಗಳಲ್ಲಿ ಒಟ್ಟು 17 ಲಕ್ಷಕ್ಕೂ ಹೆಚ್ಚು ಕೈದಿಗಳು ಈ ಶಿಬಿರಗಳಲ್ಲಿ ಯಾತನೆಗೊಳಗಾದರು ಎಂದು ಅಂದಾಜು ಮಾಡಲಾಗಿದೆ. ಕಗ್ಗೊಲೆಯಾದವರ ಸಂಖ್ಯೆ ಸುಮಾರು 11 ಲಕ್ಷವೆಂದು ಅಂದಾಜು ಮಾಡಲಾಗಿದೆ. ಕೈದಿಗಳ ಮೇಲೆ ಅರಿವಳಿಕೆ (ಅನಸ್ತೇಶಿಯಾ) ಔಷಧಿ ಕೊಡದೆ ಹಲವು ಭೀಕರ ವೈದ್ಯಕೀಯ ಪ್ರಯೋಗಗಳನ್ನು ಮಾಡಲಾಯಿತು. ಇವುಗಳಲ್ಲಿ ನಾಜಿ ಡಾಕ್ಟರ್ ಮೆಂಗೆಲ್‌ನ ಪ್ರಯೋಗಗಳು ಅತ್ಯಂತ ಕುಪ್ರಸಿದ್ಧವಾದವು. ಅವುಗಳಲ್ಲಿ ಸಾಮೂಹಿಕವಾಗಿ ಅತ್ಯಂತ ಕಡಿಮೆ ಸಮಯದಲ್ಲಿ ಹೆಣ ವಿಲೇವಾರಿಯ ಕಷ್ಟವನ್ನು ಸಹ ಕನಿಷ್ಟಗೊಳಿಸುವ ಹತ್ಯೆ ಮಾಡಲು ಯಾವ ರಾಸಾಯನಿಕಗಳು 'ದಕ್ಷ ವಿಧಾನ' ಕಂಡು ಹಿಡಿಯುವುದು ಸಹ ಸೇರಿತ್ತು. ಈ ಪ್ರಯೋಗಗಳ ಫಲವಾಗಿಯೇ 'ಗ್ಯಾಸ್ ಚೆಂಬರ್'ಗಳು ಅವಿಷ್ಕಾರವಾಗಿದ್ದು. ಮೊದಲಿಗೆ ಶೂಟಿಂಗ್ ಮೂಲಕ ಸಾಮೂಹಿಕ ಕೊಲೆ ಮಾಡುತ್ತಿದ್ದರೆ, ಅಂತಿಮವಾಗಿ ವ್ಯಾಪಕವಾಗಿ 'ಗ್ಯಾಸ್ ಚೆಂಬರ್'ಗಳನ್ನು ಬಳಸಲಾಯಿತು. ಮಹಾಯುದ್ಧದ ಕೊನೆಯ ಹೊತ್ತಿಗೆ ಕುಪ್ರಸಿದ್ಧವಾದ ಆಶ್ ವಿಟ್ಸ್ ಸೇರಿದಂತೆ 6 ಶಿಬಿರಗಳನ್ನು ಸಾಮೂಹಿಕ ಕೊಲೆಗಳಿಗೆ ಮೀಸಲಾಗಿಡಲಾಗಿತ್ತು.


ಯಾತನಾ ಶಿಬಿರಗಳಲ್ಲಿ ದುರ್ಭರ ಜೀವನ ಸ್ಥಿತಿ

'ಜ್ಯೂ ಅಲ್ಪಸಂಖ್ಯಾತರೇ ದೇಶಕ್ಕೆ ದೊಡ್ಡ ಅಪಾಯ, ಎಲ್ಲ ಸಮಸ್ಯೆಗಳಿಗೆ ಅವರೇ ಕಾರಣ' ಎಂದು ಬಿಂಬಿಸಿ ಜರ್ಮನಿಯ ನಾಜಿ ಪಕ್ಷವು, ಅವರ ಮೇಲೆ ಹಿಂಸಾತ್ಮಕ ದಾಳಿಗಳು, ಆರ್ಥಿಕ ನಿಷೇಧಗಳಿಂದ ಆರಂಭಿಸಿ ಕಾನೂನು ಮಾಡಿ ನಾಗರಿಕ ಹಕ್ಕುಗಳನ್ನು ಕಿತ್ತುಕೊಳ್ಳುವುದು, ಸಾಮೂಹಿಕ ಕಗ್ಗೊಲೆಗಳ ತನಕ ವ್ಯಾಪಕ ದಮನ

ಪುಟ 12 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**